ಶುಕ್ರವಾರ, ಫೆಬ್ರುವರಿ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 52 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
'ಒಳ್ಳೆಯ ಪ್ರಯತ್ನ ಸೋತಾಗ ಭಯವಾಗುತ್ತೆ' 'ವಿಷ್ಣುಪ್ರಿಯಾ' ಚಿತ್ರದ ನಾಯಕ ನಟ ಶ್ರೇಯಸ್ ಮಂಜು ಸಂದರ್ಶನ

ಆಳ-ಅಗಲ
ಆಧಾರ್ ನಿಯಮ ತಿದ್ದುಪಡಿ ದತ್ತಾಂಶ ಸುರಕ್ಷತೆಗೆ ಭಂಗ?

ದೆಹಲಿ: ಕಮಲ ಸಂಪುಟದಲ್ಲಿ 'ಸಮತೋಲನ'ಕ್ಕೆ ಒತ್ತು 11

'ಸಿದ್ದರಾಮಯ್ಯ ಅದೃಷ್ಟದ ರಾಜಕಾರಣಿ' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,735	22,913	₹90,580 (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	86.64

'ಕರ್ನಾಟಕ ವಿಶ್ವವಿದ್ಯಾಲಯಗಳ ಮಸೂದೆ–2025' ಸಿದ್ಧ • ಬಜೆಟ್ ಅಧಿವೇಶನದಲ್ಲೇ ಮಂಡನೆ

ರಾಜ್ಯಪಾಲ ಘಟಿಕೋತ್ಸವಕ್ಕೆ ಮಾತ್ರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿಶ್ವವಿದ್ಯಾಲಯಗಳ ಕುಲಪತಿ ನೇಮಕದ ಅಧಿಕಾರವನ್ನು ರಾಜ್ಯಪಾಲರಿಂದ ಕಿತ್ತುಕೊಳ್ಳಲು ಮುಂದಾಗಿರುವ ರಾಜ್ಯ ಸರ್ಕಾರ, ಘಟಿಕೋತ್ಸವದ 'ಗೌರವ'ಕ್ಕೆ ಅವರನ್ನು ಸೀಮಿತಗೊಳಿಸುವತ್ತ ಹೆಜ್ಜೆ ಇಟ್ಟಿದೆ.

ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿ ನೇಮಕಾತಿ ಅಧಿಕಾರವನ್ನು ಸಂಪೂರ್ಣವಾಗಿ ರಾಜ್ಯಪಾಲರಿಗೆ ನೀಡಲು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಯಮಗಳಿಗೆ ತಿದ್ದುಪಡಿ ತರಲು ಮುಂದಾಗಿದ್ದು, ಕರಡು ಬಿಡುಗಡೆ ಮಾಡಿದೆ. ಈ ಕುರಿತು ಆರು ರಾಜ್ಯಗಳ ಉನ್ನತ ಶಿಕ್ಷಣ ಸಚಿವರು ಈಚೆಗೆ ಬೆಂಗಳೂರಿನಲ್ಲಿ ಸಮಾವೇಶ ನಡೆಸಿ, ಕೇಂದ್ರಕ್ಕೆ ಸಡ್ಡು ಹೊಡೆದಿದ್ದರು. ಇದರ ನಡುವೆಯೇ ರಾಜ್ಯ ಸರ್ಕಾರ ತಿದ್ದುಪಡಿ ಮಸೂದೆ ಮಂಡನೆಗೆ ಸಿದ್ಧತೆ ನಡೆಸಿದೆ.

ಕುಲಪತಿಗಳ ನೇಮಕವೂ ಸೇರಿದಂತೆ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ರಾಜ್ಯ ಸರ್ಕಾರಕ್ಕೆ ಪರಮಾಧಿಕಾರ ನೀಡುವ 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಮಸೂದೆ–2025' ಸಿದ್ಧವಾಗಿದ್ದು, ಫೆ.3ರಿಂದ ಆರಂಭವಾಗುವ ಬಜೆಟ್ ಅಧಿವೇಶನದಲ್ಲೇ ಮಂಡಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000ದ ಪ್ರಕಾರ ಕುಲಪತಿ ನೇಮಕಾತಿಗೆ ಮೂವರು ಸದಸ್ಯರನ್ನು ಒಳಗೊಂಡ ಶೋಧನಾ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸುತ್ತಿತ್ತು. ಸಮಿತಿಯ ಸದಸ್ಯರನ್ನೂ ಶಿಫಾರಸು ಮಾಡುವ ಅಧಿಕಾರವನ್ನು, ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ರಾಜ್ಯಪಾಲರು ಹೊಂದಿದ್ದರು. ಆಯಾ ವಿಶ್ವವಿದ್ಯಾಲಯದ ಸಿಂಡಿಕೇಟ್, ವಿಶ್ವವಿದ್ಯಾಲಯ ಅನುದಾನ ಆಯೋಗ ಹಾಗೂ ರಾಜ್ಯಪಾಲರು ತಲಾ ಒಬ್ಬರನ್ನು ನೇಮಕ ಮಾಡುವ ಅಧಿಕಾರ ಹೊಂದಿದ್ದಾರೆ. ರಾಜ್ಯ ಸರ್ಕಾರ ನಾಮ ನಿರ್ದೇಶನ ಮಾಡುವ ಸದಸ್ಯ ಸಮಿತಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಾರೆ. ಹೊಸ ಕಾಯ್ದೆಯಲ್ಲಿ ಶೋಧನಾ ಸಮಿತಿಗೆ ಸದಸ್ಯರನ್ನು ನೇಮಿಸುವ ರಾಜ್ಯಪಾಲರ ಅಧಿಕಾರವನ್ನೂ ಮೊಟಕುಗೊಳಿಸಲಾಗಿದೆ.

ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳ ಶ್ರೇಣಿಗಿಂತ ಕಡಿಮೆಯಿಲ್ಲದ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅನುಭವ ಇರುವ, ಸಂಸತ್ತಿನ ಮೂಲಕ ಸ್ಥಾಪಿಸಲಾದ ರಾಷ್ಟ್ರೀಯ ಸಂಸ್ಥೆ ಅಥವಾ ಸಂಸ್ಥೆಯ ಮುಖ್ಯಸ್ಥರನ್ನೇ ಶೋಧನಾ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗುತ್ತದೆ. ಶೋಧನಾ ಸಮಿತಿ ಅಂತಿಮಗೊಳಿಸಿದ ಮೂವರ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ನಂತರ ಪಟ್ಟಿಯನ್ನು ಸರ್ಕಾರವು ರಾಜ್ಯಪಾಲರಿಗೆ ಕಳುಹಿಸುತ್ತದೆ. ರಾಜ್ಯಪಾಲರು ಸರ್ಕಾರದ ಮುಖ್ಯಸ್ಥರ ಜತೆ ಚರ್ಚಿಸಿ, ಒಬ್ಬರನ್ನು ನೇಮಕ ಮಾಡುತ್ತಾರೆ. ಆದರೆ, ಹೊಸ ಮಸೂದೆಯಲ್ಲಿ ಶೋಧನಾ ಸಮಿತಿ ಸಿದ್ಧಪಡಿಸಿದ ಮೂವರ ಪಟ್ಟಿಯಲ್ಲಿ ಹೆಚ್ಚಿನ ಅರ್ಹತೆ ಇರುವ ಒಬ್ಬರನ್ನು ಕುಲಪತಿಯಾಗಿ ಸರ್ಕಾರದ ಮುಖ್ಯಸ್ಥರೇ ನೇಮಿಸುತ್ತಾರೆ.

45 ಸರ್ಕಾರಿ ವಿಶ್ವವಿದ್ಯಾಲಯಗಳು | **35** ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ವಿವಿ

ಕುಲಪತಿ ಹುದ್ದೆಗೆ ಸಮರ್ಥರು ಸಿಗದಿದ್ದರೆ ಪಟ್ಟಿ ತಿರಸ್ಕಾರ

ಕುಲಪತಿ ನೇಮಕಕ್ಕೆ ರಚಿಸಿದ ಶೋಧನಾ ಸಮಿತಿ ಮೂವರು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅವರ ಸಂಪೂರ್ಣ ವಿವರಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಬೇಕು. ಮೂವರಲ್ಲಿ ಹೆಚ್ಚು ಅರ್ಹತೆ ಇರುವ ಒಬ್ಬರನ್ನು ರಾಜ್ಯ ಸರ್ಕಾರ ಒಂದು ತಿಂಗಳ ಒಳಗೆ ನೇಮಿಸುತ್ತದೆ. ಹೊಸ ಮಸೂದೆಯ ನಿಯಮದಂತೆ ಸಮಿತಿ ಶಿಫಾರಸು ಮಾಡಿದ ಪಟ್ಟಿಯಲ್ಲಿನ ಯಾರೊಬ್ಬರೂ ಸಮರ್ಥ ಎನಿಸದಿದ್ದರೆ, ನೇಮಕ ಮಾಡಲು ಸರ್ಕಾರ ನಿರಾಕರಿಸಬಹುದು. ಅರ್ಹ ಅಭ್ಯರ್ಥಿಗಳನ್ನು ಮರು ಶೋಧನೆ ಮಾಡಲು ಅದೇ ಸಮಿತಿಗೆ ಸೂಚಿಸಬಹುದು, ಇಲ್ಲವೇ ಹೊಸ ಮಿತಿ ರಚಿಸಬಹುದು. ನಿರ್ದಿಷ್ಟಪಡಿಸಿದ ಕಾರಣಗಳಿಗಾಗಿ ಕುಲಪತಿ ನೇಮಕಾತಿಯನ್ನು ಸ್ಥಗಿತಗೊಳಿಸಬಹುದು. ಮರು ಅಧಿಸೂಚನೆ ಹೊರಡಿಸಿ, ಹೊಸದಾಗಿ ನೇಮಕಾತಿ ಪ್ರಕ್ರಿಯೆ ಆರಂಭಿಸಬಹುದು.

ನೇಮಕವಾದವರು ನಾಲ್ಕು ವರ್ಷ ಅವಧಿ ಅಥವಾ 67ರ ವಯೋಮಿತಿ ಯಾವುದು ಮೊದಲೋ ಅಲ್ಲಿಯವರೆಗೆ ಕುಲಪತಿಗಳಾಗಿ ಕೆಲಸ ಮಾಡುತ್ತಾರೆ.

ವಿಶೇಷ ವಿ.ವಿಗೆ ಅದೇ ವಿಷಯದ ಕುಲಪತಿ

ರಾಜ್ಯದಲ್ಲಿ ವಿಶೇಷ ಉದ್ದೇಶಗಳಿಗಾಗಿ ಸ್ಥಾಪಿಸಿದ ಹಲವು ವಿಶ್ವವಿದ್ಯಾಲಯಗಳಿವೆ. ಅಂತಹ ವಿಶ್ವವಿದ್ಯಾಲಯಗಳಿಗೆ ಅದೇ ವಿಷಯಗಳಲ್ಲಿ ಪರಿಣತಿ ಇರುವ, ಆ ವಿಭಾಗಗಳಲ್ಲಿ ಕೆಲಸ ಮಾಡಿದ ಅಧ್ಯಾಪಕರನ್ನೇ ಕುಲಪತಿಗಳಾಗಿ ನೇಮಕ ಮಾಡಬೇಕು ಎನ್ನುವ ನಿಯಮಗಳನ್ನು ಮಸೂದೆ ಒಳಗೊಂಡಿದೆ.

ವಿಜಯಪುರದ ಅಕ್ಕಮಹಾದೇವಿ, ಬೆಂಗಳೂರಿನ ಕ್ಲಸ್ಟರ್ ವಿಶ್ವವಿದ್ಯಾಲಯಗಳಿಗೆ ಮಹಿಳೆಯರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾನಿಲಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಗಳಿಗೆ ಅದೇ ವಿಷಯದಲ್ಲಿ ಸಾಕಷ್ಟು ಅನುಭವ ಇರುವ, ಅರ್ಹ ಅಧ್ಯಾಪಕರ ಆಯ್ಕೆಯನ್ನು ಕಡ್ಡಾಯಗೊಳಿಸಲಾಗಿದೆ.

ಪ್ರಜಾವಾಣಿ ವಿಶೇಷ



ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಮಸೂದೆ–2025 ಸಿದ್ಧವಾಗಿದೆ. ಮುಂದಿನ ಸಂಪುಟಸಭೆಯಲ್ಲಿ ಚರ್ಚಿಸಿ, ಈ ಅಧಿವೇಶನದಲ್ಲೇ ಮಂಡಿಸಲಾಗುತ್ತದೆ
ಡಾ.ಎಂ. ಸುಧಾಕರ್, ಉನ್ನತ ಶಿಕ್ಷಣ ಸಚಿವ

ಮೊಹಮ್ಮದ್ ಶಮಿ 'ದ್ವಿಶತಕ'



ಭಾರತದ ವೇಗಿ ಮೊಹಮ್ಮದ್ ಶಮಿ ಅವರು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಕಡಿಮೆ ಎಸೆತಗಳಲ್ಲಿ 200 ವಿಕೆಟ್‌ಗಳನ್ನು ಗಳಿಸಿದ ಬೌಲರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರು ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ದಾಖಲೆ ಮೀರಿದ್ದಾರೆ. ಗುರುವಾರ ನಡೆದ ಬಾಂಗ್ಲಾದೇಶ ಎದುರಿನ ಪಂದ್ಯ ದಲ್ಲಿ 5 ವಿಕೆಟ್ ಗಳಿಸಿದ್ದಾರೆ. ಪಂದ್ಯದಲ್ಲಿ ಭಾರತ 6 ವಿಕೆಟ್‌ಗಳಿಂದ ಜಯಿಸಿತು.

ಮಾಹಿತಿ: ಪಿಟಿಐ/ ಕ್ರಿಕೆಟ್ ವೆಬ್‌ಸೈಟ್

ಕಡಿಮೆ ಎಸೆತಗಳಲ್ಲಿ 200 ವಿಕೆಟ್
5126 ಮೊಹಮ್ಮದ್ ಶಮಿ (ಭಾರತ)
5240 ಮಿಚೆಲ್ ಸ್ಟಾರ್ಕ್ (ಆಸ್ಟ್ರೇಲಿಯಾ)

ಕಡಿಮೆ ಪಂದ್ಯಗಳಲ್ಲಿ ಸಾಧನೆ

ಬೌಲರ್	ಪಂದ್ಯ
ಮಿಚೆಲ್ ಸ್ಟಾರ್ಕ್ (ಆಸ್ಟ್ರೇಲಿಯಾ)	102
ಮೊಹಮ್ಮದ್ ಶಮಿ(ಭಾರತ)	104
ಸಕ್ಲೇನ್ ಮುಷ್ತಾಕ್ (ಪಾಕ್)	104
ಟ್ರೆಂಟ್ ಬೌಲ್ಟ್ (ನ್ಯೂಜಿಲೆಂಡ್)	107
ಬ್ರೆಟ್ ಲೀ (ಆಸ್ಟ್ರೇಲಿಯಾ)	112



11,029 ರನ್
ಭಾರತ ತಂಡದ ನಾಯಕ ರೋಹಿತ್ ಶರ್ಮಾ ಏಕದಿನ ಕ್ರಿಕೆಟ್‌ನಲ್ಲಿ 11 ಸಾವಿರ ರನ್ ಮೈಲುಗಲ್ಲು ದಾಟಿದರು. ರೋಹಿತ್ (261 ಇನಿಂಗ್ಸ್) ಅತಿ ವೇಗವಾಗಿ ರನ್ ಗಳಿಸಿದ ಭಾರತದ ಎರಡನೇ ಬ್ಯಾಟರ್. ವಿರಾಟ್ ಕೊಹ್ಲಿ (222 ಇನಿಂಗ್ಸ್) ಮೊದಲಿಗರು.

ಐಸಿಸಿ ಟೂರ್ನಿಗಳಲ್ಲಿ ವಿಕೆಟ್ ಸಾಧನೆ (ಭಾರತ)

ಶಮಿ	ಜಹೀರ್ ಖಾನ್	ಜೆ. ಶ್ರೀನಾಥ್	ಜಡೇಜ
60	59	47	43

'ಸಿದ್ದರಾಮಯ್ಯ ದೋಷಮುಕ್ತ'

ಮುಡಾ ಪ್ರಕರಣ: ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಆಪಾದಿಸಲಾಗಿದ್ದ ಪ್ರಕರಣದಲ್ಲಿ ಮೊದಲ ಆರೋಪಿಯಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಅಪರಾಧ ಸಾಬೀತುಪಡಿಸುವ ಯಾವುದೇ ಅಂಶಗಳಿಲ್ಲ' ಎಂಬ ಷರಾ ಬರೆದಿರುವ 'ಬಿ' ಅಂತಿಮ ವರದಿಯನ್ನು ಲೋಕಾಯುಕ್ತ ಪೊಲೀಸರು ಜನಪ್ರತಿನಿಧಿಗಳ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.



ಸಿದ್ದರಾಮಯ್ಯ

ಪ್ರಕರಣಕ್ಕೆ ಸಂಬಂಧಿಸಿ ಮೈಸೂರಿನ ಸ್ನೇಹಮಯಿ ಕೃಷ್ಣ ನೀಡಿದ್ದ ಖಾಸಗಿ ದೂರನ್ನು ಆಧರಿಸಿ ತನಿಖೆ ನಡೆಸಿದ್ದ ಮೈಸೂರು ಲೋಕಾಯುಕ್ತ ಪೊಲೀಸರು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯಕ್ಕೆ ಗುರುವಾರ ಈ 'ಬಿ' ಅಂತಿಮ ವರದಿಯನ್ನು ಸಲ್ಲಿಸಿದರು.

5ನೇ ಪುಟ ನೋಡಿ

ಪಾರ್ವತಿ–ಬೈರತಿ ಅರ್ಜಿ: ಕಾಯ್ದಿರಿಸಿದ ತೀರ್ಪು

ಮುಡಾ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಮತ್ತು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಇ.ಡಿ (ಜಾರಿ ನಿರ್ದೇಶನಾಲಯ) ಜಾರಿ ಮಾಡಿರುವ ಸಮನ್ಸ್ ಪ್ರಶ್ನಿಸಲಾದ ಅರ್ಜಿ ಮೇಲಿನ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಈ ಸಂಬಂಧ ಪಾರ್ವತಿ ಹಾಗೂ ಬೈರತಿ ಸುರೇಶ್ ಪ್ರತ್ಯೇಕವಾಗಿ ಸಲ್ಲಿಸಿರುವ ರಿಟ್ ಅರ್ಜಿಗಳನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು. ಪಾರ್ವತಿ ಅವರ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ ಮತ್ತು ಇ.ಡಿ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್ ವಾದ ಮಂಡಿಸಿದರು.

'ಬಿ' ಅಂತಿಮ ವರದಿ ಎಂದರೇನು?

'ಆರೋಪಗಳನ್ನು ದೃಢೀಕರಿಸಲು ಬೇಕಾದಂಥ ಸಂದರ್ಭ, ಸಾಕ್ಷ್ಯಾಧಾರಗಳು ಲಭ್ಯವಾಗಿಲ್ಲ ಅಥವಾ ಫಿರ್ಯಾದುದಾರ ಒದಗಿಸಿ ಕೊಡಲು ವಿಫಲವಾಗಿದ್ದಾನೆ. ಈ ಕಾರಣದಿಂದಾಗಿ 'ಬಿ' ಅಂತಿಮ ವರದಿಯನ್ನು ಕೋರ್ಟ್‌ಗೆ ಸಲ್ಲಿಸಲಾಗಿದೆ. ಆದರೆ, ಇಂತಿಷ್ಟು ಸಮಯದಲ್ಲಿ 'ಬಿ' ಅಂತಿಮ ವರದಿಯನ್ನು ಪ್ರಶ್ನಿಸುವ ಅವಕಾಶ ಇರುವುದಾಗಿ ತಿಳಿಸಲಾಗಿರುತ್ತದೆ' ಎಂಬುದು 'ಬಿ' ಅಂತಿಮ ವರದಿಯ ಸಾರಾಂಶ. ಪೊಲೀಸ್ ಕೈಪಿಡಿ–1963ರ ಪ್ರಕಾರ ಅಂತಿಮ ವರದಿಯನ್ನು ಎ, ಬಿ ಮತ್ತು ಸಿ ಎಂದು ವರ್ಗೀಕರಿಸಲಾಗುತ್ತದೆ.

ಭಾರತದಲ್ಲಿ ಟೆಸ್ಲಾ ಘಟಕ ಡೊನಾಲ್ಡ್ ಟ್ರಂಪ್ ಅಪಸ್ವರ

ವಾಷಿಂಗ್ಟನ್ (ಪಿಟಿಐ): 'ಭಾರತ ವಿಧಿಸುವ ಸುಂಕ ತಪ್ಪಿಸಿಕೊಳ್ಳಲು ಇಲಾನ್ ಮಸ್ಕ್ ಅವರು ಅಲ್ಲಿಯೇ ಟೆಸ್ಲಾ ವಿದ್ಯುತ್‌ಚಾಲಿತ ಕಾರು ತಯಾರಿಕಾ ಘಟಕ ಸ್ಥಾಪಿಸಿದರೆ, ಅದು ಅಮೆರಿಕಕ್ಕೆ ಮಾಡುವ ಅನ್ಯಾಯವಾಗಲಿದೆ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಫಾಕ್ಸ್ ನ್ಯೂಸ್‌ಗೆ ಮಸ್ಕ್ ಜೊತೆಗೆ ನೀಡಿರುವ ಜಂಟಿ ಸಂದರ್ಶನದಲ್ಲಿ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ. ಮಸ್ಕ್ ಅವರು ಸರ್ಕಾರದ ದಕ್ಷತಾ ಇಲಾಖೆಯ (ಡಿಒಜಿಇ) ನೇತೃತ್ವ ವಹಿಸಿದ್ದಾರೆ.

'ವಿಶ್ವದ ಪ್ರತಿಯೊಂದು ರಾಷ್ಟ್ರವೂ ನಮ್ಮಿಂದ ಪ್ರಯೋಜನ ಪಡೆಯುತ್ತಿದೆ. ಹಾಗಿದ್ದರೂ ನಮ್ಮ ಸರಕುಗಳ ಮೇಲೆ ದುಬಾರಿ ಸುಂಕ ವಿಧಿಸಲಾಗುತ್ತಿದೆ. ಭಾರತವೂ ಇದರಿಂದ ಹೊರತಲ್ಲ. ಅತಿಹೆಚ್ಚು ಸುಂಕ ವಿಧಿಸುವ ಆ ರಾಷ್ಟ್ರದಲ್ಲಿ ಟೆಸ್ಲಾ ಕಾರುಗಳನ್ನು ಮಾರಾಟ ಮಾಡಲು ಸಾಧ್ಯವೇ' ಎಂದು ಟ್ರಂಪ್ ಪ್ರಶ್ನಿಸಿದ್ದಾರೆ.

'ಅಲ್ಲಿ ಟೆಸ್ಲಾ ಘಟಕ ತೆರೆದರೆ ನಮ್ಮ ಅಭ್ಯಂತರವಿಲ್ಲ. ಆದರೆ, ಅಮೆರಿಕದ ಪಾಲಿಗೆ ಅದು ನ್ಯಾಯೋಚಿತವಲ್ಲ' ಎಂದು ಹೇಳಿದ್ದಾರೆ.

'ಅಮೆರಿಕಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರೊಟ್ಟಿಗೆ ಸುಂಕದ ಬಗ್ಗೆ ಚರ್ಚಿಸಿದ್ದೇನೆ. ನೀವು ನಮ್ಮ ಸರಕುಗಳ ಮೇಲೆ ಅಧಿಕ ಸುಂಕ ವಿಧಿಸುತ್ತಿದ್ದೀರಿ. ಅದಕ್ಕೆ ಪ್ರತಿಯಾಗಿ ನಾವು ಸುಂಕ ವಿಧಿಸುತ್ತೇವೆ ಎಂಬ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ' ಎಂದು ಹೇಳಿದ್ದಾರೆ.

'ಭಾರತದಲ್ಲಿ ಸುಂಕದ ಪ್ರಮಾಣ ಎಷ್ಟಿದೆ' ಎಂಬ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, 'ಅತಿಹೆಚ್ಚಿನ ಪ್ರಮಾಣದಲ್ಲಿದೆ' ಎಂದಿದ್ದಾರೆ.

ಈ ವೇಳೆ ಮಧ್ಯಪ್ರವೇಶಿಸಿದ ಮಸ್ಕ್, 'ಆಮದು ವಾಹನಗಳ ಮೇಲೆ ಅಲ್ಲಿ ಶೇ 100ರಷ್ಟು ಸುಂಕ ವಿಧಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

'ಭಾರತಕ್ಕಷ್ಟೇ ನಾವು ಸುಂಕ ವಿಧಿಸುತ್ತಿಲ್ಲ. ಎಲ್ಲಾ ದೇಶಗಳಿಗೂ ಈ ನೀತಿ ಅನ್ವಯಿಸಲಿದೆ. ಅವರು (ಮೋದಿ) ವಿಧಿಸುವ ಸುಂಕಕ್ಕೆ ಪ್ರತಿಯಾಗಿ ನಾವು ಅಷ್ಟೇ ಸುಂಕ ವಿಧಿಸುತ್ತೇವೆ' ಎಂಬ ಟ್ರಂಪ್ ಅವರ ಮಾತಿಗೆ, 'ಇದು ನ್ಯಾಯೋಚಿತವಾದ ನಿರ್ಧಾರವಾಗಿದೆ' ಎಂದು ಮಸ್ಕ್ ಧ್ವನಿಗೂಡಿಸಿದ್ದಾರೆ.

ಮುಂಬೈ ಮತ್ತು ನವದೆಹಲಿಯಲ್ಲಿ ಷೋರೂಂ ತೆರೆಯಲು ಸಿದ್ಧತೆ ನಡೆಸಿರುವ ಟೆಸ್ಲಾ, ವಿವಿಧ ಹುದ್ದೆಗಳ ಭರ್ತಿಗೆ ವೆಬ್‌ಸೈಟ್‌ನಲ್ಲಿ ಅರ್ಜಿ ಆಹ್ವಾನಿಸಿದೆ. ಜರ್ಮನಿಯ ತನ್ನ ಘಟಕದಿಂದ ಕಾರುಗಳನ್ನು ಆಮದು ಮಾಡಿಕೊಂಡು ಭಾರತದಲ್ಲಿ ಮಾರಾಟ ಮಾಡಲಿದೆ ಎಂದು ಹೇಳಲಾಗಿದೆ.

ಕೆಪಿಎಸ್‌ಸಿ ಪ್ರಕ್ರಿಯೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುತ್ತಿರುವ 2023-24ನೇ ಸಾಲಿನ 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಡಿ.ಪವಿತ್ರಾ ಸೇರಿದಂತೆ ಇತರೆ 51 ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೆಎಸ್‌ಎಟಿ ನ್ಯಾಯಾಂಗ ಸದಸ್ಯ ಎಸ್. ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ಪೀಠವು ಈ ಕುರಿತಂತೆ ಆದೇಶಿಸಿದ್ದು, ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದೆ.

ಪೂರ್ವಭಾವಿ ಪರೀಕ್ಷಾ ಫಲಿತಾಂಶವನ್ನು 2025ರ ಜನವರಿ 30ರಂದು ಪ್ರಕಟಿಸಿ ನೇಮಕ ಪ್ರಕ್ರಿಯೆ ಮುಂದುವರಿಸಲು ಅನುಮತಿ ನೀಡಿದ್ದ ಕೆಎಸ್‌ಎಟಿ ಇದೀಗ ಮುಖ್ಯ ಪರೀಕ್ಷೆ ನಡೆಸಲು; ಆಯೋಗವು ಜನವರಿ 29ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಮುಂದಿನ ವಿಚಾರಣೆವರೆಗೆ ಅಮಾನತ್ತಿನಲ್ಲಿ ಇರಿಸುವಂತೆ ಆದೇಶಿಸಿದೆ.

5ನೇ ಪುಟ ನೋಡಿ

ಪರಿಷತ್: ಮತ ಮರು ಎಣಿಕೆಗೆ ತಯಾರಿ

• ವಿಜಯಕುಮಾರ್ ಎಸ್.ಕೆ.


ಚಿಕ್ಕಮಗಳೂರು: ವಿಧಾನ ಪರಿಷತ್ ಸ್ಥಾನಕ್ಕೆ ಚುನಾವಣೆ ನಡೆದು ಮೂರು ವರ್ಷಗಳ ಬಳಿಕ ಮತಗಳ ಮರು ಎಣಿಕೆಗೆ ಜಿಲ್ಲಾಡಳಿತದಿಂದ ತಯಾರಿ ನಡೆದಿದೆ. ಹೈಕೋರ್ಟ್ ಆದೇಶದ ಮೇರೆಗೆ ಮರು ಎಣಿಕೆ ಕಾರ್ಯ ನಡೆಯಲಿದ್ದು, ಒಂದು ವಾರದಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ 2021ರ ಡಿಸೆಂಬರ್ 10ರಂದು ಮತದಾನ ನಡೆದಿತ್ತು. ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ ಸೇರಿ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಮತದಾನ ಮಾಡಿದ್ದರು.

2021ರ ಡಿ.14ರಂದು ಮತ ಎಣಿಕೆ ನಡೆದಿತ್ತು. ಚಲಾವಣೆಯಾಗಿದ್ದ 2,410 ಮತಗಳ ಪೈಕಿ 39 ಮತಗಳು ಅಸಿಂಧುವಾಗಿದ್ದವು. ಬಾಕಿ 2,371 ಮತಗಳು ಸಿಂಧುವಾಗಿದ್ದವು. ಅವುಗಳ ಪೈಕಿ ಬಿಜೆಪಿಯ ಎಂ.ಕೆ. ಪ್ರಾಣೇಶ್ ಅವರು 1,188 ಮತಗಳನ್ನು ಪಡೆದಿದ್ದರೆ, ಕಾಂಗ್ರೆಸ್‌ನ ಎ.ವಿ. ಗಾಯತ್ರಿ ಶಾಂತೇಗೌಡ ಅವರು 1,182 ಮತಗಳನ್ನು ಪಡೆದಿದ್ದರು. ಪ್ರಾಣೇಶ್ ಅವರು ಆರು ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಣೆ ಮಾಡಿದ್ದರು.



ಗಾಯತ್ರಿ



ಪ್ರಾಣೇಶ್

ಅಲ್ಪ ಮತಗಳ ಅಂತರದಲ್ಲಿ ಹಿನ್ನಡೆಯಾಗಿದ್ದ ಗಾಯತ್ರಿ ಅವರು ಮರು ಎಣಿಕೆಗೆ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದ ಕೆ.ಎನ್.ರಮೇಶ್ ಅವರಿಗೆ ಮನವಿ ಸಲ್ಲಿಸಿದ್ದರು.

11ನೇ ಪುಟ ನೋಡಿ

ಎಪಿಎಂಸಿಗಳಲ್ಲಿ ಇನ್ನು ಮುಂದೆ ಚಿಲ್ಲರೆ ವಹಿವಾಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಪ್ರಾಂಗಣಗಳಲ್ಲಿ ಸಗಟು ಮಾರಾಟದ ಜತೆಗೆ ಬಿಡಿಬಿಡಿಯಾಗಿ (ಚಿಲ್ಲರೆ) ಮಾರಾಟ ಮಾಡುವುದಕ್ಕೆ ಅವಕಾಶ ಕಲ್ಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ, ಈ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ಮಸೂದೆ 2025ಕ್ಕೆ ಒಪ್ಪಿಗೆ ನೀಡಲಾಗಿದೆ. ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, ಬಜೆಟ್ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು ಎಂದು ತಿಳಿಸಿದರು.

ನ್ಯಾಯಾಲಯದ ನಿರ್ದೇಶನದ ಮೇರೆಗೆ ಚಿಲ್ಲರೆ ವಹಿವಾಟಿಗೆ ಅವಕಾಶ ಕಲ್ಪಿಸಬೇಕಾಗಿತ್ತು. ಇದಕ್ಕಾಗಿ ಮಸೂದೆಗೆ ತಿದ್ದುಪಡಿಯ ಅಗತ್ಯವಿದೆ. ಈವರೆಗೆ ಸಗಟು ವಹಿವಾಟಿಗೆ ಮಾತ್ರ ಅವಕಾಶವಿತ್ತು. ಚಿಲ್ಲರೆ ವಹಿವಾಟಿಗೆ ಅವಕಾಶ ನೀಡುವುದರಿಂದ ಮಾರುಕಟ್ಟೆಯ ವ್ಯಾಪ್ತಿ ಇನ್ನಷ್ಟು ಹಿಗ್ಗಲಿದೆ ಎಂದು ಅವರು ಹೇಳಿದರು.

ಸಂಪುಟ ಸಭೆ

61 ವಸತಿ ಶಾಲೆ ₹1,292 ಕೋಟಿ ವೆಚ್ಚ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ಮುಂತಾದ 61 ವಸತಿ ಶಾಲೆಗಳಿಗೆ ₹1,292 ಕೋಟಿ ವೆಚ್ಚದಲ್ಲಿ ವಸತಿ ಶಾಲಾ ಸಂಕೀರ್ಣ ನಿರ್ಮಿಸಲು ಸಂಪುಟ ಒಪ್ಪಿಗೆ ನೀಡಿದೆ.

61 ವಸತಿ ಶಾಲೆಗಳು ಈಗ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ನಿವೇಶನ ಲಭ್ಯವಿರುವ 56 ವಸತಿ ಶಾಲೆಗಳಿಗೆ ಭಾಗಶಃ ಕಟ್ಟಡ ನಿರ್ಮಾಣವಾಗಿರುವ 5 ವಸತಿ ಶಾಲೆಗಳು ಸೇರಿ ಎಲ್ಲ 61 ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲಾಗುವುದು ಸಚಿವ ಪಾಟೀಲ ಹೇಳಿದರು.

11ನೇ ಪುಟ ನೋಡಿ

ಫೆಬ್ರುವರಿಯಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಲು: ಉಪಸಮಿತಿಯ ಸಭೆಗೆ ಮಾಹಿತಿ

'ಏಪ್ರಿಲ್–ಮೇ ಉತ್ತಮ ಮಳೆ ಸಾಧ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ವರ್ಷ ಫೆಬ್ರುವರಿಯಲ್ಲಿ ವಾಡಿಕೆಗಿಂತ 2.5 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಲು ಅಧಿಕವಾಗಿದ್ದು, ತಿಂಗಳ ಕೊನೆಯ ವಾರದಲ್ಲಿ ತಾಪಮಾನ ಇಳಿಮುಖ ಆಗಬಹುದು. ಪೂರ್ವ ಮುಂಗಾರಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ.

ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಉಪಸಮಿತಿಯ ಸಭೆಗೆ ಅಧಿಕಾರಿಗಳು ಮಾಹಿತಿ ನೀಡಿದರು.



2025ನೇ ಸಾಲಿನ ಹಿಂಗಾರು-ಮುಂಗಾರು ಮಳೆ ಸ್ಥಿತಿ, ಕೃಷಿ, ಕುಡಿಯುವ ನೀರು, ಹವಾಮಾನ ಹಾಗೂ ಅಣೆಕಟ್ಟೆಗಳಲ್ಲಿನ ನೀರಿನ ಮಟ್ಟದ ಕುರಿತು ಚರ್ಚೆ ನಡೆಯಿತು. 'ಮಾರ್ಚ್ ಕೊನೆಯ ವಾರ ಮತ್ತು ಏಪ್ರಿಲ್-ಮೇ ತಿಂಗಳಲ್ಲಿ ಉತ್ತಮ ಮಳೆ ಆಗುವ ಸಾಧ್ಯತೆ ಇದೆ. ಆದರೆ, ಹಿಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ. ಅಕ್ಟೋಬರ್, ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಮಳೆಯ ಪ್ರಮಾಣ ಇಳಿಮುಖ ಆಗಬಹುದು' ಎಂದೂ ಮಾಹಿತಿ ನೀಡಿದರು.

ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್‌ಗಳ ಪಿ.ಡಿ. ಖಾತೆಯಲ್ಲಿ ವಿಪತ್ತು ನಿಧಿ ಲಭ್ಯವಿದ್ದು, ಪರಿಹಾರ ಕ್ರಮ ಕೈಗೊಳ್ಳಲು ಹಣಕಾಸು ಸಮಸ್ಯೆ ಇಲ್ಲ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ರಾಜ್ಯದಲ್ಲಿ ಎಲ್ಲಿಯೂ ಕುಡಿಯುವ ನೀರಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸಬೇಕು. ಸಮಸ್ಯೆ ಉಂಟಾಗಬಹುದಾದ ಗ್ರಾಮಗಳ ಪಟ್ಟಿ ಮಾಡಬೇಕು ಎಂದು ಕೃಷ್ಣ ಬೈರೇಗೌಡ ಸೂಚಿಸಿದರು.

ಮುಂಬರುವ ದಿನಗಳಲ್ಲಿ ಜಲಾಶಯಗಳಲ್ಲಿ ಕುಡಿಯುವುದಕ್ಕಾಗಿ ಲಭ್ಯವಾಗಲಿರುವ ನೀರಿನ ಪ್ರಮಾಣವೆಷ್ಟು? ಈ ಕುರಿತು ಮುಂದಿನ ಸಭೆಗಳಲ್ಲಿ ಮಾಹಿತಿ ನೀಡುವಂತೆ ಜಲಸಂಪನ್ಮೂಲ ಇಲಾಖೆಗೆ ಸೂಚಿಸಿದರು. ಕುಡಿಯಲು ಅವಶ್ಯವಿರುವ ನೀರು ಕಾಯ್ದಿರಿಸಿದ ಬಳಿಕ ನೀರಾವರಿಗೆ ನೀರು ಬಿಡುಗಡೆಗೊಳಿಸುವ ಬಗ್ಗೆಯೂ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

4ನೇ ಪುಟ ನೋಡಿ

ಜಲಾಶಯಗಳಲ್ಲಿನ ನೀರಿನ ಮಟ್ಟ

535.21 ಟಿಎಂಸಿ ಅಡಿ
ಪ್ರಮುಖ 14 ಜಲಾಶಯಗಳಲ್ಲಿ ಸದ್ಯ ಇರುವ ಒಟ್ಟು ನೀರು

60%
ನೀರಿನ ಸರಾಸರಿ ಸಂಗ್ರಹ

332.52 ಟಿಎಂಸಿ ಅಡಿ
ಇದೇ ಅವಧಿಯಲ್ಲಿ ಕಳೆದ ವರ್ಷ ಇದ್ದ ನೀರು

₹ 488.30 ಕೋಟಿ
ಡಿಸಿಗಳು, ತಹಶೀಲ್ದಾರ್‌ಗಳ ಪಿ.ಡಿ. ಖಾತೆಯಲ್ಲಿರುವ (ವಿಪತ್ತು ನಿಧಿ) ಒಟ್ಟು ಮೊತ್ತ

ಕುಡಿಯುವ ನೀರು ಪೂರೈಕೆ

ಚಿಕ್ಕಬಳ್ಳಾಪುರ, ಚಿತ್ರದುರ್ಗ, ತುಮಕೂರು, ಬೆಂಗಳೂರು ನಗರ ಮತ್ತು ರಾಮನಗರ ಈ ಐದು ಜಿಲ್ಲೆಗಳ 13 ತಾಲ್ಲೂಕುಗಳ ವ್ಯಾಪ್ತಿಯ 66 ಗ್ರಾಮಗಳಿಗೆ ಹಾಗೂ ನಗರ ವ್ಯಾಪ್ತಿಗೆ ಸಂಬಂಧಿಸಿದಂತೆ ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ನಗರ ಹಾಗೂ ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ 56 ವಾರ್ಡ್‌ಗಳಿಗೆ ಬಾಡಿಗೆ ಟ್ಯಾಂಕರ್ ಮತ್ತು ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರದಾನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನವು ಇಲ್ಲಿನ ಎಂ. ಚಂದ್ರಶೇಖರ್ ಪ್ರತಿಷ್ಠಾನದ ಸಹಯೋಗದಲ್ಲಿ ಇದೇ 22ರಂದು ಬೆಳಿಗ್ಗೆ 9.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್, 'ಪ್ರತಿಷ್ಠಾನ ನೀಡುವ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ಕ್ಕೆ ಗುಜರಾತಿ ಲೇಖಕಿ ಹಿಮಾಂಶಿ ಇಂದುಲಾಲ್ ಶೆಲತ್ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪುರಸ್ಕಾರ ₹5 ಲಕ್ಷ ನಗದು ಹಾಗೂ ಬೆಳ್ಳಿ ಪದಕವನ್ನು ಒಳಗೊಂಡಿದೆ' ಎಂದರು.

'ಭಾರತೀಯಭಾಷೆಯಲ್ಲಿಸೃಜನಶೀಲತೆಯ ಅತ್ಯುನ್ನತ ಮಟ್ಟ ತಲುಪಿದ ಸಾಧಕರೊಬ್ಬರಿಗೆ ಪ್ರತಿವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಆಶಯ ನುಡಿಗಳನ್ನಾಡುತ್ತಾರೆ. ಮುಖ್ಯ ಅತಿಥಿಯಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭಾಗವಹಿಸಲಿದ್ದಾರೆ. ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಪ್ರಶಸ್ತಿ ಪುರಸ್ಕೃತರ ಪರಿಚಯ ಮಾಡುತ್ತಾರೆ' ಎಂದು ತಿಳಿಸಿದರು.

'ಪ್ರಶಸ್ತಿ ಪುರಸ್ಕೃತ ಶೆಲತ್ ಅವರ ಜತೆಗೆ ಮಧ್ಯಾಹ್ನ 1 ಗಂಟೆಯಿಂದ ಸಂವಾದ ನಡೆಯಲಿದೆ. ಇದನ್ನು ಲೇಖಕಿ ವನಮಾಲಾ ವಿಶ್ವನಾಥ್ ನಡೆಸಿಕೊಡುತ್ತಾರೆ. 'ಸಮಕಾಲೀನ ಸಂದರ್ಭದಲ್ಲಿ ಕುವೆಂಪು ಚಿಂತನೆಗಳು' ವಿಷಯದ ಮೇಲೆ ಮಧ್ಯಾಹ್ನ 2 ಗಂಟೆಯಿಂದ ಚರ್ಚೆ ನಡೆಯಲಿದೆ. ಇದನ್ನು ವಿಮರ್ಶಕ ಎಸ್.ಆರ್. ವಿಜಯಶಂಕರ ನಡೆಸಿಕೊಡಲಿದ್ದಾರೆ. ಎ.ಎಸ್. ಆಶಾದೇವಿ, ಜಿ.ನಾ. ತೇಜಶ್ರೀ, ಎಚ್. ದಂಡಪ್ಪ, ಡಿ. ಡೊಮಿನಿಕ್ ಈ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ' ಎಂದು ಹೇಳಿದರು.

'ಮುಂದಿನ ಸಭೆಯಲ್ಲಿ ತೀರ್ಮಾನ'

ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಅವರ ರಾಜೀನಾಮೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶಂಕರ್, 'ಟ್ರಸ್ಟ್‌ನ ಮುಂದಿನ ಸಭೆಯಲ್ಲಿ ರಾಜೀನಾಮೆ ಅಂಗೀಕಾರದ ಬಗ್ಗೆ ತೀರ್ಮಾನಿಸಲಾಗುವುದು. ಕುಪ್ಪಳಿಯಲ್ಲಿ ಇತ್ತೀಚೆಗೆ ನಡೆದ ಮಂತ್ರ ಮಾಂಗಲ್ಯ ಮದುವೆ ಅದ್ದೂರಿಯಾಗಿ ನಡೆದಿದೆ ಎಂದು ಕೆಲವರು ಆಕ್ಷೇಪಿಸಿದ್ದರು. ನಿಯಮಗಳ ಅನುಸಾರವೇ ಮಂತ್ರ ಮಾಂಗಲ್ಯ ನಡೆಸಲಾಗಿತ್ತು. ಕುವೆಂಪು ವಿಚಾರಗಳಿಗೆ ಅನುಗುಣವಾಗಿ ನಡೆಯುವ ಪ್ರಕಾಶ್ ಅವರಿಗೆ ಟೀಕೆಗಳು ಬೇಸರವನ್ನುಂಟು ಮಾಡಿರಬೇಕು' ಎಂದರು.

'ಪ್ರತಿಭಾವಂತರಿಗೆ ಅಗತ್ಯ ಸೌಲಭ್ಯ ನೀಡಲು ಸರ್ಕಾರ ಬದ್ಧ'

ಪ್ರತಿಭಾ ಪಲಾಯನ ಬೇಡ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಭಾವಂತ ವಿದ್ಯಾರ್ಥಿಗಳು ವಿದೇಶಕ್ಕೆ ಹೋಗಿ ಉದ್ಯೋಗ ಮಾಡುವ ಬದಲು, ನಮ್ಮ ದೇಶದಲ್ಲೇ ಇದ್ದು, ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ನಿಮಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ನೀಡಲು ಸರ್ಕಾರ ಬದ್ಧವಾಗಿದೆ' ಎಂದು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ, ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟೀಸ್ ಸಹಯೋಗದಲ್ಲಿ ಗುರುವಾರ ನಡೆದ ಅನ್ವೇಷಣ ದಕ್ಷಿಣ ವಲಯದ ವಿದ್ಯಾರ್ಥಿಗಳ ಸಂಶೋಧನಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರತಿಭಾ ಪಲಾಯನದಿಂದ ದೇಶದ ಆರ್ಥಿಕ ಅಭಿವೃದ್ಧಿ ಕುಂಠಿತವಾಗುತ್ತದೆ. ಆದ್ದರಿಂದ ಪ್ರತಿಭಾವಂತರು ನಮ್ಮ ದೇಶದಲ್ಲೇ ಉದ್ಯೋಗ ಮಾಡಿದರೆ ಅಥವಾ ಕಂಪನಿಗಳನ್ನು ಪ್ರಾರಂಭಿಸಿದರೆ ಉತ್ತಮ' ಎಂದು ಹೇಳಿದರು.

'ವಿದೇಶಿ ಕಂಪನಿಗಳು ತಮ್ಮ ಕೇಂದ್ರ ಕಚೇರಿಗಳನ್ನು ನಮ್ಮ ರಾಜ್ಯದಲ್ಲಿ ಸ್ಥಾಪಿಸುತ್ತಿವೆ. ಐಟಿ-ಬಿಟಿ, ಇ.ವಿ, ಅನಿಮೇಷನ್, ಸ್ಪೇಸ್ ಸ್ಟಾರ್ಟ್‌ಅಪ್ ಸೇರಿದಂತೆ ಹಲವು ನೀತಿಗಳನ್ನು ಜಾರಿಗೊಳಿಸಲಾಗಿದೆ. ಆದರೂ ನಮ್ಮಲ್ಲಿ ಕೌಶಲ ಶಿಕ್ಷಣದ ಕೊರತೆ ಇದೆ. ವಿದ್ಯಾರ್ಥಿಗಳು, ದೇಶದಲ್ಲಿ ಎದುರಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು' ಎಂದು ಕರೆ ನೀಡಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಮಾತನಾಡಿ, 'ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚಾಗಿದ್ದು, ಗುಣಮಟ್ಟದ ಶಿಕ್ಷಣ ನೀಡುತ್ತಿವೆ. 'ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುತ್ತವೆ' ಎಂದರು.

ಗೋಕುಲ ಎಜುಕೇಶನ್ ಫೌಂಡೇಶನ್‌ನ ಮುಖ್ಯ ಕಾರ್ಯನಿರ್ವಾಹಕ ಎಂ.ಆರ್. ಶ್ರೀನಿವಾಸಮೂರ್ತಿ ಮಾತನಾಡಿ, 'ನಮ್ಮ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ಬಹುತೇಕ ಕೋರ್ಸ್‌ಗಳಿವೆ. ಗುಣಮಟ್ಟದ ಶಿಕ್ಷಣ ನೀಡಲು ಬದ್ಧರಾಗಿದ್ದೇವೆ. ಈ ರೀತಿಯ ಕಾರ್ಯಕ್ರಮಗಳು ಹೊಸ ಯೋಜನೆಗಳಿಗೆ ವೇದಿಕೆ ಆಗುತ್ತವೆ' ಎಂದರು.

'ಈ ಸಮ್ಮೇಳನದಲ್ಲಿ ದಕ್ಷಿಣ ಭಾರತದಿಂದ 750 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ 350 ವಿದ್ಯಾರ್ಥಿಗಳ ಪೈಕಿ 169 ವಿದ್ಯಾರ್ಥಿಗಳಿಗೆ ತಮ್ಮ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲು ಅವಕಾಶ ನೀಡಲಾಗಿತ್ತು' ಎಂದು ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ ಕುಲಪತಿ ಕುಲದೀಪ್ ಕುಮಾರ್ ರೈನಾ ತಿಳಿಸಿದರು.



ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ಅನ್ವೇಷಣ ಸಮ್ಮೇಳನದಲ್ಲಿ ಅಸೋಸಿಯೇಟ್ ಡೀನ್ ನಾಗೇಂದ್ರ ಪ್ರತಾಪ್ ಸಿಂಗ್, ಸಹ ಕುಲಪತಿ ಗೋವಿಂದ್ ಆರ್.ಕಡಂಬಿ, ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟೀಸ್ ಜಂಟಿ ನಿರ್ದೇಶಕ ಅಮರೇಂದ್ರ ಪಾಣಿ, ಕುಲಪತಿ ಕುಲದೀಪ್ ಕುಮಾರ್ ರೈನಾ, ಪ್ರಿಯಾಂಕ್ ಖರ್ಗೆ, ಡಾ.ಶರಣಪ್ರಕಾಶ ಪಾಟೀಲ, ಎಂ.ಆರ್.ಶ್ರೀನಿವಾಸಮೂರ್ತಿ, ಸಹ ಕುಲಪತಿ ಓಂಪ್ರಕಾಶ್ ಖರಬಂದ, ಅಕಾಡೆಮಿಕ್ ಡೀನ್ ಆರ್.ವಿ.ರಂಗನಾಥ್ ಕಿರಣ್ ಕುಮಾರ್ ಬಿ.ಎಂ.ಉಪಸ್ಥಿತರಿದ್ದರು

'ಡಿಎಚ್ ಬೆಂಗಳೂರು 2040 ಶೃಂಗ' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರೂಪುರೇಷೆಗಳನ್ನು ಅವಲೋಕಿಸಿ ವಿಶ್ಲೇಷಿಸಲು 'ಪ್ರಜಾವಾಣಿ'ಯ ಸೋದರ ಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್ 'ಡಿಎಚ್ ಬೆಂಗಳೂರು 2040 ಶೃಂಗ'ವನ್ನು ಫೆ.21ರಂದು (ಶುಕ್ರವಾರ) ಆಯೋಜಿಸಿದೆ. ನೀತಿ ನಿರೂಪಕರು, ಕಾರ್ಪೊರೇಟ್ ವಲಯದ ದಿಗ್ಗಜರು, ಉದ್ಯಮಿಗಳು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು ಭಾಗವಹಿಸಲಿದ್ದಾರೆ.

'ನಾಳೆಯ ಬೆಂಗಳೂರಿನ ನಿರ್ಮಾತೃಗಳೊಂದಿಗಿನ ಭೇಟಿ' – ಘೋಷವಾಕ್ಯದೊಂದಿಗೆ ನಡೆಯುವ ಈ ಶೃಂಗವನ್ನು ವಿಠಲ್ ಮಲ್ಯ ರಸ್ತೆಯಲ್ಲಿರುವ ಜೆ.ಡಬ್ಲ್ಯು ಮ್ಯಾರಿಯೆಟ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಶೃಂಗದಲ್ಲಿ ಬೆಳಿಗ್ಗೆ 10ರಿಂದ ಸಂಜೆಯವರೆಗೆ ವಿವಿಧ ಗೋಷ್ಠಿಗಳು ನಡೆಯಲಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಭಾಗವಹಿಸಲಿದ್ದಾರೆ. ಸನ್ ಮೊಬಿಲಿಟಿ ಅಧ್ಯಕ್ಷ ಚೇತನ್ ಮೈನಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

'ಕೃತಕ ಬುದ್ಧಿಮತ್ತೆ (ಎಐ) ಯುಗದಲ್ಲಿ ಕೆಲಸ ಮತ್ತು ಕೆಲಸದ ಸ್ಥಳಗಳ ಮರುವ್ಯಾಖ್ಯಾನ', 'ಭವಿಷ್ಯದ ಮೆಟ್ರೊಗಾಗಿ ಮಾನಸಿಕ ಸ್ವಾಸ್ಥ್ಯ', 'ನಿರ್ಮಾಣ ಬೆಂಗಳೂರು: ಆಡಳಿತ, ನಗರಯೋಜನೆಮತ್ತುರಿಯಲ್‌ಎಸ್ಟೇಟ್ ಡೆವಲಪರ್‌ಗಳ ಪಾತ್ರ', 'ಸ್ಟಾರ್ಟ್‌-ಅಪ್ ರಾಜಧಾನಿಯಾಗಿ ಬೆಂಗಳೂರು ತನ್ನ ಶ್ರೇಷ್ಠತೆಯನ್ನು ಉಳಿಸಿಕೊಳ್ಳುವುದು ಹೇಗೆ?', 'ಭವಿಷ್ಯಕ್ಕಾಗಿ ಸ್ವಸ್ಥ ಬೆಂಗಳೂರು', 'ಹಸಿರು ಸಾರಿಗೆ ಕಡೆಗೆ ನಡಿಗೆ', 'ಬೆಂಗಳೂರಿಗೆ ಎಷ್ಟು ವಿಮಾನ ನಿಲ್ದಾಣಗಳು ಬೇಕು?' 'ಸಿಲಿಕಾನ್ ವ್ಯಾಲಿಯಲ್ಲಿ ಸೈಬರ್ ಅಪರಾಧವನ್ನು ನಿಯಂತ್ರಿಸುವುದು ಹೇಗೆ?' ಎಂಬುದು ಸೇರಿದಂತೆ ವಿವಿಧ ಗೋಷ್ಠಿಗಳು ನಡೆಯಲಿವೆ.

ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕಿಯೋನಿಕ್ಸ್ ಅಧ್ಯಕ್ಷ ಶರತ್ ಕುಮಾರ್ ಬಚ್ಚೇಗೌಡ, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಶಾಸಕ ಸಿ.ಎನ್. ಅಶ್ವಥ್ ನಾರಾಯಣ್, ಶಾಸಕ ರಿಜ್ವಾನ್ ಅರ್ಷದ್ ಸಹಿತ ಅನೇಕರು ಭಾಗವಹಿಸಲಿದ್ದಾರೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭೆಗೆ ಮೆರುಗು ನೀಡಲಿವೆ.

'ವಿ.ವಿ. ಮುಚ್ಚುವ ನಡೆ ಖಂಡನೀಯ'

ಬೆಂಗಳೂರು: ರಾಜ್ಯದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿರುವ ಸರ್ಕಾರದ ನಡೆ ಖಂಡನೀಯ ಎಂದು ಎಐಡಿಎಸ್‌ಒ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿಎಸ್‌ಒ ಕರ್ನಾಟಕ ರಾಜ್ಯ ಕಾರ್ಯದರ್ಶಿ ಸಚಿನ್ ಕುಳಗೇರಿ, ದಕ್ಷಿಣ ಪ್ರಾಂತ್ಯದ ಕಾರ್ಯದರ್ಶಿ ಪ್ರವೀಣ್ ಎಸ್.ಕೆ., 'ರಾಜ್ಯದಲ್ಲಿ ಉತ್ತಮ ಶಿಕ್ಷಣ ಸಿಗುವ ಕಾರಣದಿಂದ ಹೊರ ರಾಜ್ಯಗಳ ಸಾವಿರಾರು ವಿದ್ಯಾರ್ಥಿಗಳು ಇಲ್ಲಿಗೆ ಬಂದು ಅಧ್ಯಯನ ಮಾಡುತ್ತಿದ್ದಾರೆ. ಮೂಲಸೌಕರ್ಯಗಳ ಕೊರತೆಯ ಕಾರಣಕ್ಕೆ ವಿಶ್ವವಿದ್ಯಾಲಯಗಳನ್ನು ಮುಚ್ಚುವುದು ಸರಿಯಲ್ಲ' ಎಂದರು.

'ಗ್ರಾಮೀಣ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗಲಿ ಎಂದು ಹಿಂದುಳಿದ ಜಿಲ್ಲೆಗಳಲ್ಲಿ ಇವುಗಳನ್ನು ಸ್ಥಾಪಿಸಲಾಗಿದೆ. ಮೂಲಸೌಲಭ್ಯಗಳ ಕೊರತೆ ಸರಿಪಡಿಸಿ, ಮುಚ್ಚುವ ನಿರ್ಧಾರ ಹಿಂಪಡೆಯಬೇಕು' ಎಂದರು.

ಉಚಿತ ಆರೋಗ್ಯ ಶಿಬಿರ 23ಕ್ಕೆ

ಬೆಂಗಳೂರು: ಇಂಟರ್‌ನ್ಯಾಷನಲ್ ಏಜೆನ್ಸಿ ಫಾರ್ ರಿಹ್ಯಾಬಿಲಿಟೇಷನ್ ಇಂಡಿಯಾದ 38ನೇ ವಾರ್ಷಿಕೋತ್ಸವ ಹಾಗೂ ಆರ್. ಆನಂದ್ ಅವರ ಜನ್ಮದಿನದ ಅಂಗವಾಗಿ ಫೆಬ್ರುವರಿ 23ರಂದು ಬೆಳಿಗ್ಗೆ 9.30ಕ್ಕೆ ಪಂತರಪಾಳ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ.

ಈ ಶಿಬಿರದಲ್ಲಿ ಬಿ.ಪಿ., ಸಕ್ಕರೆ ಕಾಯಿಲೆ, ಥೈರಾಯ್ಡ್, ಕಣ್ಣಿನ ತಪಾಸಣೆ ನಡೆಯಲಿದೆ. ಅಗತ್ಯವಿದ್ದವರಿಗೆ ಉಚಿತವಾಗಿ ಕನ್ನಡಕ ಮತ್ತು ಪೊರೆ ಶಸ್ತ್ರಚಿಕಿತ್ಸೆ ಹಾಗೂ ಕಣ್ಣಿನ ಇತರೆ ತೊಂದರೆಗಳಿಗೆ ಉಚಿತ ಸಲಹೆ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಆಸಕ್ತರು ಹೆಚ್ಚಿನ ಮಾಹಿತಿಗಳಿಗೆ 93426 40835 ಸಂಪರ್ಕಿಸಿ

ಪರಿಶಿಷ್ಟ ಜಾತಿ, ವರ್ಗಗಳ ನೌಕರರ ಸಮಾವೇಶದಲ್ಲಿ ಸಚಿವ ಎಚ್‌.ಸಿ. ಮಹದೇವಪ್ಪ

ಸಮ ಸಮಾಜಕ್ಕೆ ಶೇ 5 ವೇತನ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 2.5 ಲಕ್ಷ ಎಸ್‌.ಸಿ, ಎಸ್‌.ಟಿ ಸರ್ಕಾರಿ ನೌಕರರಿದ್ದಾರೆ. ವೇತನದ ಶೇ 5ರಷ್ಟು ನೀಡಿದರೆ ಸಮುದಾಯದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಬಹುದು. ಸಮ ಸಮಾಜ ನಿರ್ಮಿಸಬಹುದು' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಕೇಂದ್ರ ಸಂಘದ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತ್ಯೇಕ ನಿಧಿ ಸ್ಥಾಪಿಸಿ, ಜನಪ್ರತಿನಿಧಿಗಳು, ಅಧಿಕಾರಿಗಳು ಒಳಗೊಂಡಂತೆ ಎಲ್ಲರೂ ಶೇ 5 ವಂತಿಗೆ ನೀಡಿದರೆ ಸಮಾಜದಲ್ಲಿ ವಿಸ್ಮಯ ಸೃಷ್ಟಿಸಬಹುದು. ನಿಷ್ಠುರತೆ, ದೃಢತೆ, ಬದ್ಧತೆ ಇದ್ದಾಗ ಮಾತ್ರ ಜನರಿಗೆ ನ್ಯಾಯ ಒದಗಿಸಲು ಸಾಧ್ಯ. ತುಳಿತಕ್ಕೆ ಒಳಗಾದವರ ಪರ ವಿದ್ಯಾವಂತರು ನಿಲ್ಲಬೇಕು ಎಂದು ಹೇಳಿದರು.

ದಲಿತ ಮಂತ್ರಿಗಳೇ ಇಲ್ಲದೇ ಸರ್ಕಾರಗಳು ನಡೆದ ನಿದರ್ಶನಗಳಿವೆ. ಹೀಗಾಗಿ ಸಮುದಾಯದಲ್ಲಿ ತಿಳಿವಳಿಕೆ ಮೂಡಿಸುವ ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದರು.

ಕೇಂದ್ರ ಸಂಘದ ರಾಜ್ಯಾಧ್ಯಕ್ಷ ಜೆ.ಪಿ. ದೇವರಾಜ್ ಮಾತನಾಡಿ, 'ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ ಮಾಡಬೇಕು. ಮೀಸಲಾತಿ ಜಾರಿ ಘಟಕಕ್ಕೆ ಶಕ್ತಿಯಿಲ್ಲ. ಇದು ಹಲ್ಲು ಕಿತ್ತ ಹಾವಿನಂತಾಗಿದೆ, ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಿ, ಸಿಬ್ಬಂದಿ ನೇಮಿಸಬೇಕು' ಎಂದು ಒತ್ತಾಯಿಸಿದರು.

ಜೊತೆಗೆ ಬಡ್ತಿ, ಮೀಸಲಾತಿಯಿಂದ ವಂಚಿತ ಸಿಬ್ಬಂದಿಗೆ ನ್ಯಾಯ ಒದಗಿಸಲು ವಸತಿ ನಿಲಯಗಳಲ್ಲಿ ಪ್ರತ್ಯೇಕವಾದ ಕಲ್ಯಾಣಾಧಿಕಾರಿಗಳನ್ನು ನೇಮಿಸಬೇಕು' ಎಂದು ಆಗ್ರಹಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಎಸ್‌ಸಿಎಸ್‌ಪಿ/ಟಿಎಸ್‌ಪಿ ನೋಡಲ್ ಏಜೆನ್ಸಿ ಸಲಹೆಗಾರ ಇ. ವೆಂಕಟಯ್ಯ, ಸಮಾಜ ಕಲ್ಯಾಣ ಇಲಾಖೆ ಆಯುಕ್ತ ಕೆ. ರಾಜೇಶ್ ಕುಮಾರ್ ಪಾಲ್ಗೊಂಡಿದ್ದರು.



'ನಮ್ಮ ಸರ್ಕಾರ ಜಾರಿಗೆ ತಂದಿದ್ದ ಬಡ್ತಿಯಲ್ಲಿ ಮೀಸಲಾತಿ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಇದು ಮಹತ್ವದ ಬೆಳವಣಿಗೆ. ಇದು ನಮ್ಮ ನೆಲದ ಕಾನೂನು

ಡಾ.ಎಚ್‌.ಸಿ. ಮಹದೇವಪ್ಪ, ಸಚಿವ

ನೀರು ಸರಬರಾಜು ವ್ಯವಸ್ಥೆ ನವೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ಸಿಎಲ್‌ಆರ್ (ಕ್ಲೈವ್ ಲೈನ್ಸ್ ರಿಸರ್‌ವಾಯರ್)ನಿಂದ ಜಾನ್ಸನ್ ಮಾರ್ಕೆಟ್, ದೊಮ್ಮಲೂರು, ಮಚಲಿಬೆಟ್ಟ, ಹಲಸೂರು ಸೇವಾಠಾಣೆಗಳ ಪ್ರದೇಶವಾರು ನೀರು ಸರಬರಾಜು ವ್ಯವಸ್ಥೆಗಳ ಆಧುನೀಕರಣ ಮತ್ತು ಮರು ರೂಪಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿಸ್ತೃತ ಯೋಜನಾ ವರದಿ ಸಲ್ಲಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಯೋಜನೆಯ ಅಂದಾಜು ವೆಚ್ಚ ₹199 ಕೋಟಿ. ಈ ಕಾಮಗಾರಿ ಕೈಗೆತ್ತಿಕೊಳ್ಳುವುದರಿಂದ ನೀರಿನ ಸೋರಿಕೆ ಪ್ರಮಾಣವನ್ನು ಶೇ 33ರಿಂದ ಶೇ 10ಕ್ಕೆ ಕಡಿತಗೊಳಿಸಬಹುದು. ನೀರಿನ ಸೋರಿಕೆ ತಡೆಗಟ್ಟುವುದರಿಂದ ಆದಾಯವೂ ಹೆಚ್ಚಾಗುತ್ತದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ತಿಳಿಸಿದರು.

ಜಾನ್ಸನ್ ಮಾರ್ಕೆಟ್, ದೊಮ್ಮಲೂರು, ಮಚಲಿಬೆಟ್ಟ, ಹಲಸೂರು ಸೇವಾಠಾಣೆಗಳ ಉಪ ವಿಭಾಗಗಳಲ್ಲಿ ನೀರಿನ ಸೋರಿಕೆ ಹೆಚ್ಚಾಗಿದ್ದು, ನೀರು ಕಲುಷಿತವಾಗಿರುವ ದೂರುಗಳು ಬಂದಿವೆ. ಆಧುನೀಕರಣದಿಂದ ಈ ಸಮಸ್ಯೆ ನಿವಾರಣೆ ಆಗಲಿದೆ ಎಂದು ಅವರು ತಿಳಿಸಿದರು.



ನೆಲಮಂಗಲ ನಗರಸಭೆ ವ್ಯಾಪ್ತಿಯ ಬಸವನಹಳ್ಳಿಯಲ್ಲಿ 220 ಕೆ.ವಿ.ವಿದ್ಯುತ್ ಉಪಕೇಂದ್ರ ಕಾಮಗಾರಿಗೆ ಸಚಿವ ಕೆ.ಜೆ.ಜಾರ್ಜ್ ಭೂಮಿಪೂಜೆ ನೆರವೇರಿಸಿದರು

'ವಿದ್ಯುತ್ ಸಮಸ್ಯೆ ನೀಗಿಸಲಿದೆ ಉಪಕೇಂದ್ರ'

ನೆಲಮಂಗಲ: 'ನೆಲಮಂಗಲಕ್ಕೆ ಗುಣಮಟ್ಟದ ವಿದ್ಯುತ್ ಪೂರೈಸಲು 220 ಕೆ.ವಿ. ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರ ಸ್ಥಾಪಿಸಲಾಗುತ್ತಿದೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ನಗರಸಭೆ ವ್ಯಾಪ್ತಿಯ ಬಸವನಹಳ್ಳಿಯಲ್ಲಿ ₹300 ಕೋಟಿ ವೆಚ್ಚದ 220 ಕೆ.ವಿ. ಸಾಮರ್ಥ್ಯದ ಉಪಕೇಂದ್ರ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

'ರೈತರಿಗೆ ಶೇ 80ರ ಸಬ್ಸಿಡಿಯಲ್ಲಿ ಸೋಲಾರ್ ಪಂಪ್‌ಸೆಟ್ ನೀಡುತ್ತಿದ್ದೇವೆ. ಪಾವಗಡದಲ್ಲಿ ಬೃಹತ್ ಸೋಲಾರ್ ಪಾರ್ಕ್ ಸ್ಥಾಪಿಸಿ ರಾಜ್ಯದ ವಿದ್ಯುತ್ ಕೊರತೆ ನೀಗಿಸಿದ್ದೇವೆ' ಎಂದರು.

ಮುಖ್ಯಾಂಶಗಳು

- **₹300 ಕೋಟಿ ವೆಚ್ಚದಲ್ಲಿ ವಿದ್ಯುತ್ ಉಪಕೇಂದ್ರ ಕಾಮಗಾರಿಗೆ ಭೂಮಿಪೂಜೆ**
- **ಮುಂದೆ ಭೂಗತ ಕೇಬಲ್ ಅಳವಡಿಸಲು ಕ್ರಮ**

ಶಾಸಕ ಎನ್‌.ಶ್ರೀನಿವಾಸ್ ಅವರು, 'ಉಪಕೇಂದ್ರ ಸ್ಥಾಪನೆಯಿಂದ ಭವಿಷ್ಯದಲ್ಲಿ ವೋಲ್ಟೇಜ್ ಸಮಸ್ಯೆ ಬರುವುದಿಲ್ಲ' ಎಂದರು.

'ಮುಂದೆ ನಗರಸಭೆ ವ್ಯಾಪ್ತಿಯಲ್ಲಿ ₹150 ಕೋಟಿ ವೆಚ್ಚದಲ್ಲಿ ಭೂಗತ ವಿದ್ಯುತ್ ಕೇಬಲ್ ಅಳವಡಿಸಲು ಚಾಲನೆ ನೀಡಲಿದ್ದೇನೆ' ಎಂದರು.

ವಿಧಾನ ಪರಿಷತ್ ಸದಸ್ಯ ರವಿ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್‌.ಗಣೇಶ್, ಉಪಾಧ್ಯಕ್ಷ ಆನಂದ್, ಮಾಜಿ ಅಧ್ಯಕ್ಷ ಎನ್‌.ಪಿ.ಹೇಮಂತ ಕುಮಾರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್. ಗೌಡ, ತಾಲ್ಲೂಕು ಅಧ್ಯಕ್ಷ ವಜ್ರಘಟ್ಟ ನಾಗರಾಜು, ಮುಖಂಡ ಎಂ.ಕೆ. ನಾಗರಾಜು, ಟಿಎಪಿಸಿಎಂಎಸ್ ಅಧ್ಯಕ್ಷ ನರಸಿಂಹಮೂರ್ತಿ ಇದ್ದರು.

ಕೃಷಿ ಪತ್ತಿನ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಚಿಕ್ಕಜಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ(ಪಿಎಸಿಎಸ್) ನೂತನ ಅಧ್ಯಕ್ಷರಾಗಿ ಜಿ.ಶಿವಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಮುನಿರತ್ನಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಮುಂದಿನ ಐದು ವರ್ಷಗಳ ಅವಧಿಗೆ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕಾಗಿ ಬುಧವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 12 ಸದಸ್ಯಬಲ ಹೊಂದಿರುವ ಸಂಘದಲ್ಲಿ ಇವರಿಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆಯಿತು.

'ನಮ್ಮ ರಸ್ತೆ– 2025' ಕಾರ್ಯಾಗಾರ ಮತ್ತು ಸಂಚಾರ ಪ್ರಯೋಗಾಲಯಕ್ಕೆ ಚಾಲನೆ

ರಸ್ತೆಯಲ್ಲಿ ಶಿಸ್ತು, ಏಕರೂಪ ಸಾಧಿಸಿ: ಡಿಸಿಎಂ

ಪ್ರಜಾವಾಣಿ ವಾರ್ತೆ



'ನಮ್ಮ ರಸ್ತೆ– 2025' ಕಾರ್ಯಾಗಾರ, ಪ್ರದರ್ಶನಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ಚಾಲನೆ ನೀಡಿದರು. ಡಬ್ಲ್ಯುಆರ್‌ಐ ಸಿಇಒ ಮಾಧವ್ ಪೈ, ನಗರ ತಜ್ಞ ಆರ್‌.ಕೆ. ಮಿಶ್ರಾ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಬೆಂಗಳೂರು: 'ನಗರದ ರಸ್ತೆ, ಪಾದಚಾರಿ ಮಾರ್ಗ, ಹಸಿರು ವಲಯ ಸೇರಿದಂತೆ ಎಲ್ಲಾ ಕಡೆಯೂ ಶಿಸ್ತು ಹಾಗೂ ಏಕರೂಪವನ್ನು ಸಾಧಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಿಬಿಎಂಪಿ ವತಿಯಿಂದ ಆಯೋಜಿಸಿರುವ ಮೂರು ದಿನಗಳ 'ನಮ್ಮ ರಸ್ತೆ-2025' ಕಾರ್ಯಾಗಾರ, ಪ್ರದರ್ಶನ ಹಾಗೂ ಸಮಾವೇಶ ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಬೆಂಗಳೂರನ್ನು ಕೇವಲ ಎರಡು–ಮೂರು ವರ್ಷಗಳಲ್ಲಿ ಬದಲಾಯಿಸಲು ಸಾಧ್ಯವಿಲ್ಲ. ಭಗವಂತ ಇಳಿದು ಬಂದರೂ ಅದು ಸಾಧ್ಯವಲ್ಲದ ಕೆಲಸ. ಆದರೆ, ಯೋಜನೆಗಳ ರೂಪುರೇಷೆಗಳನ್ನು ಸರಿಯಾಗಿ ಮಾಡಿ, ಅನುಷ್ಠಾನಕ್ಕೆ ತರಬೇಕು. ರಕ್ಷಣೆ, ಗುಣಮಟ್ಟ ಮತ್ತು ಏಕರೂಪ ಕಾಪಾಡುವುದು ನಮ್ಮ ಗುರಿ' ಎಂದರು.

'ನಗರದ ರಸ್ತೆಗಳು ಭವಿಷ್ಯದಲ್ಲಿಯೂ ಉತ್ತಮವಾಗಿರುವಂತೆ ಯೋಜನೆ ರೂಪಿಸಬೇಕು. ಹೀಗೆ ಮಾಡದಿದ್ದರೆ, ಬೆಂಗಳೂರಿಗೆ ನಾವು ಮೋಸ ಮಾಡಿದಂತೆ ಎಂಬುದನ್ನು ತಿಳಿದುಕೊಳ್ಳಿ' ಎಂದು ಬಿಬಿಎಂಪಿ ಎಂಜಿನಿಯರ್‌ಗಳಿಗೆ ಅವರು ಹೇಳಿದರು.

'ನಮ್ಮ ರಸ್ತೆ ಕೈಪಿಡಿ' ಬಿಡುಗಡೆ ಮಾಡಿದ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿ.ಕೆ. ಶಿವಕುಮಾರ್ ಅವರು, 'ಈ ಕೈಪಿಡಿಯಲ್ಲಿ ಅನೇಕ ಸಲಹೆ, ಸೂಚನೆಗಳನ್ನು ನೀಡಲಾಗಿದೆ. ರಸ್ತೆಬದಿ ಸಸಿಗಳನ್ನು ಎಲ್ಲಿ ನೆಡಬೇಕು, ಕಂಬಗಳು ಎಲ್ಲಿರಬೇಕು ಎಂಬಂತಹ ಮಾಹಿತಿ ಇದರಲ್ಲಿದೆ' ಎಂದು ಹೇಳಿದರು.

'ಎಲ್ಲ ರಸ್ತೆಗಳು, ಪಾದಚಾರಿ ಮಾರ್ಗಗಳ ವಿನ್ಯಾಸ ಏಕರೂಪದಿಂದಿರಬೇಕು. ರಸ್ತೆ ಬದಿ ಕಂಬಗಳ ಬಣ್ಣವನ್ನೂ ಮೊದಲೇ ನಿರ್ಧಾರ ಮಾಡಲಾಗುವುದು. ಬಸ್ ನಿಲ್ದಾಣ, ತಂಗುದಾಣಗಳನ್ನು ಒಂದೇ ಮಾದರಿಯಲ್ಲಿ ನಿರ್ಮಾಣ ಮಾಡಬೇಕು. ಈ ಬಗ್ಗೆ ಕಾರ್ಯಾಗಾರದಲ್ಲಿ ಚರ್ಚೆ ಮಾಡಲಾಗುತ್ತದೆ' ಎಂದು ಹೇಳಿದರು.

'ಕೇಬಲ್‌ಗಳು ಭೂಗತವಾಗಿರುವಂತೆ ವ್ಯವಸ್ಥೆ ಮಾಡಬೇಕು. ಹೊರಗಡೆ ಕಾಣುವ ವೈರ್ ಅಥವಾ ಕೇಬಲ್‌ಗಳನ್ನು ಕತ್ತರಿಸಬೇಕು' ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದರು.

'ಸುರಂಗ ರಸ್ತೆ ನಿರ್ಮಾಣಕ್ಕೆ ಹಲವು ಸವಾಲುಗಳಿರುವುದರಿಂದ ಟೆಂಡರ್ ಕರೆಯಲು ಸಾಧ್ಯವಾಗಿಲ್ಲ' ಎಂದರು.

'ನಮ್ಮ ಮೆಟ್ರೊ ಕಂಬಗಳ ಮೇಲೆ ನಮ್ಮ ಸಂಸ್ಕೃತಿ, ಕ್ರೀಡೆ ಬಿಂಬಿಸುವ ಕಲಾತ್ಮಕ ಕೃತಿಗಳನ್ನು ಚಿತ್ರಿಸಬೇಕು ಎಂದು ಅನೇಕ ಸಂಸ್ಥೆಗಳು ಸಲಹೆ ನೀಡಿವೆ. ಕೆಲವು ಭಾಗಗಳಲ್ಲಿ ಇದು ಕಾರ್ಯಗತವಾಗಿದೆ. ಹೊಸ ಆಲೋಚನೆಗಳನ್ನು ಯುವ ಜನಾಂಗ ನೀಡುತ್ತಿರುವುದು ಸಂತಸದ ವಿಷಯ' ಎಂದು ಶಿವಕುಮಾರ್ ಹೇಳಿದರು.

'ಸಂಚಾರಿ ಪ್ರಯೋಗಾಲಯ' ಕಾರ್ಯಾರಂಭ



ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಗುಣಮಟ್ಟವನ್ನು ಸ್ಥಳದಲ್ಲಿಯೇ ಪರೀಕ್ಷಿಸಲು 'ಸಂಚಾರಿ ಪ್ರಯೋಗಾಲಯ' ವಾಹನಗಳು ಕಾರ್ಯಾರಂಭಿಸಿವೆ. ಈ ವಾಹನಗಳಿಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಗುರುವಾರ ಚಾಲನೆ ನೀಡಿದರು.

ಎರಡು ವಾಹನಗಳಿಗೆ ₹38.50 ಲಕ್ಷ ವ್ಯಯ ಮಾಡಲಾಗಿದ್ದು, ತಲಾ ₹11.40 ಲಕ್ಷ ಮೊತ್ತದ ಪರೀಕ್ಷಾ ಉಪಕರಣಗಳನ್ನು ಅಳವಡಿಸಲಾಗಿದೆ. ಒಂದು ಸಂಚಾರಿ ಪ್ರಯೋಗಾಲಯದ ವಾಹನದಲ್ಲಿ ಚಾಲಕ, ಲ್ಯಾಬ್ ಟೆಕ್ನಿಷಿಯನ್, ಲ್ಯಾಬ್ ಸಹಾಯಕ ಸೇರಿ ಮೂರು ಮಂದಿ ಕಾರ್ಯನಿರ್ವಹಿಸಲಿದ್ದಾರೆ. ಬಿಟುಮಿನ್ ಮಾದರಿ, ಕಾಬುಲ್ ಸ್ಟೋನ್, ಕಬ್ಬಿಣ, ಅಗ್ರಿಗೇಟ್ಸ್, ಕಾಂಕ್ರೀಟ್ ಮಾದರಿ, ತಾಪಮಾನ ಪರಿಶೀಲಿಸುವ ಉಪಕರಣ, ಕೋರ್ ಕಟ್ಟಿಂಗ್ ಯಂತ್ರ, ತೂಕ ಮಾಡುವ ಯಂತ್ರ ಸೇರಿದಂತೆ 16 ಉಪಕರಣಗಳು ಇವೆ. ಎರಡೂ ವಾಹನಗಳು ಗುಣ ನಿಯಂತ್ರಣ ವಿಭಾಗದಿಂದ ಕಾರ್ಯಾಚರಣೆ ಮಾಡಲಿದ್ದು, ಎಂಟೂ ವಲಯಗಳಲ್ಲಿ ಕಾಮಗಾರಿ ಗುಣಮಟ್ಟ ಪರೀಕ್ಷಿಸಲಾಗುತ್ತದೆ.

ಸಂಚಾರಿ ಪ್ರಯೋಗಾಲಯದ ವಾಹನಗಳ ಸುರಕ್ಷತೆಯ ಹಿತದೃಷ್ಟಿಯಿಂದ ಅಗ್ನಿನಂದಕ ವ್ಯವಸ್ಥೆಯನ್ನೂ ಅಳವಡಿ ಸಲಾಗಿದೆ ಎಂದು ಗುಣ ನಿಯಂತ್ರಣ ವಿಭಾಗದ ಮುಖ್ಯ ಎಂಜಿನಿಯರ್ ರಾಘವೇಂದ್ರ ಪ್ರಸಾದ್ ತಿಳಿಸಿದರು.



ಬೆಂಗಳೂರಿನ ಬಿಬಿಎಂಪಿ ಕೇಂದ್ರ ಕಚೇರಿಯ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಗುರುವಾರ 'ನಮ್ಮ ರಸ್ತೆ–2025' ಪ್ರದರ್ಶನದಲ್ಲಿ ಜನರು ಬಿಎಂಟಿಸಿ ಬಸ್ಸಿನ ಕಟ್‌ಔಟ್‌ನಲ್ಲಿ ಛಾಯಾಚಿತ್ರಕ್ಕೆ ಪೋಸ್ ಕೊಟ್ಟರು

ಸುಸ್ಥಿರ ನಗರದ ವಿನ್ಯಾಸ

ಬಿಬಿಎಂಪಿ ವತಿಯಿಂದ 'ನಮ್ಮ ರಸ್ತೆ-2025' ಕಾರ್ಯಾಗಾರ, ಪ್ರದರ್ಶನ ಹಾಗೂ ಸಮಾವೇಶವನ್ನು ಆಯೋಜಿಸಲಾಗಿದೆ. ಇದರಲ್ಲಿ ಸುಸ್ಥಿರ ನಗರ ವಿನ್ಯಾಸ ಸೃಷ್ಟಿಸಲು ಸಮಗ್ರ ಬಹು ಮಾದರಿಯ ಸಾರಿಗೆ ವ್ಯವಸ್ಥೆಗಳ ಅನುಷ್ಠಾನದ ಬಗ್ಗೆ ಚರ್ಚೆ ನಡೆಯಲಿದೆ.

ಒಂದೇ ಸೂರಿನಡಿ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ರಸ್ತೆ, ಪಾದಚಾರಿ ಮಾರ್ಗಗಳ ಅಭಿವೃದ್ಧಿ, ಸಂಚಾರ ದಟ್ಟಣೆ ನಿಯಂತ್ರಣದ ಕುರಿತು ಪರಿಹಾರಗಳನ್ನು ಕಂಡುಕೊಳ್ಳಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಮೋಟಾರು ರಹಿತ ಸಾರಿಗೆ ಸೇರಿದಂತೆ ಭವಿಷ್ಯದ ಯೋಜನಾಬದ್ಧ ನಗರವನ್ನು ರೂಪಿಸಲು ಈ ಕಾರ್ಯಾಗಾರಗಳಿಂದ ಸಲಹೆಗಳು ಹೊರಬರುವ ನಿರೀಕ್ಷೆ ಇದೆ.

ನಮ್ಮ ಮೆಟ್ರೊ, ಉಪ ನಗರ ರೈಲು ಮತ್ತು ಬಸ್ಸುಗಳ ಜಾಲಗಳ ಸಮಗ್ರ ಚಲನಶೀಲ ಪರಿಸರ ವ್ಯವಸ್ಥೆ ರೂಪಿಸಲು ಉದ್ದೇಶಿಸಲಾಗಿದೆ. 'ನಮ್ಮ ರಸ್ತೆ-2025'ರಲ್ಲಿ ಬಿಬಿಎಂಪಿ, ಬಿಎಂಟಿಸಿ, ನಮ್ಮ ಮೆಟ್ರೊ, ಕೆ-ರೈಡ್, ಡಲ್ಟ್ ಇಲಾಖೆಯ ತಜ್ಞರು, ಬೆಂಗಳೂರು ಸಂಚಾರ ಪೊಲೀಸ್ ವಿಭಾಗದ ಅಧಿಕಾರಿಗಳು, ನಾಗರಿಕ ಸಮೂಹ, ನಗರ ಯೋಜಕರು, ಸ್ಟಾರ್ಟ್‌ಅಪ್, ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಸಂಚಾರ ಪರಿಣತರು ಭಾಗವಹಿಸಲಿದ್ದು, ಅವರಿಂದ ವ್ಯಕ್ತವಾಗುವ ಸಲಹೆಗಳನ್ನು ಕ್ರೋಡೀಕರಿಸಿ ವರದಿ ತಯಾರಿಸಲಾಗುತ್ತದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

'ನಮ್ಮ ರಸ್ತೆ' ಕೈಪಿಡಿ

'ನಮ್ಮ ರಸ್ತೆ ಕೈಪಿಡಿ'ಯಲ್ಲಿ ರಸ್ತೆಯ ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ನಿರ್ವಹಣೆ ಕ್ಷೇತ್ರದಲ್ಲಿನ ಅತ್ಯುತ್ತಮ ಅಭ್ಯಾಸಗಳ ವಿವರಗಳನ್ನು ಸಚಿತ್ರವಾಗಿ ನೀಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 12,878.78 ಕಿ.ಮೀ. ಉದ್ದ ರಸ್ತೆಗಳು, ಪ್ರಮಾಣಿತ ಕಾರ್ಯವಿಧಾನದ ಪ್ರಕಾರ ಯಾವ ರೀತಿ ರಸ್ತೆಗಳು ಇರಬೇಕೆಂಬುದನ್ನು ತಿಳಿಸಲಾಗಿದೆ.

ಸುದ್ದಿ 2 ನಿಮಿಷ

ಸಾಂಸ್ಕೃತಿಕ ಸಂಘ–ಸಂಸ್ಥೆ ಧನಸಹಾಯಕ್ಕೆ ಆಗ್ರಹ

ಬೆಂಗಳೂರು: ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ 2024–25ನೇ ಸಾಲಿನ ಧನಸಹಾಯ ಒದಗಿಸಲು ಕೂಡಲೇ ಕ್ರಮವಹಿಸಬೇಕು ಎಂದು ಕರ್ನಾಟಕ ರಾಜ್ಯ ಸಾಹಿತಿ, ಕಲಾವಿದರ, ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟ ಸರ್ಕಾರಕ್ಕೆ ಆಗ್ರಹಿಸಿದೆ.

ಈ ಬಗ್ಗೆ ಒಕ್ಕೂಟದ ಪದಾಧಿಕಾರಿಗಳು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರಿಗೆ ಮನವಿ ಮಾಡಿದ್ದಾರೆ.

'ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿರುದ್ಧ ಮಾರ್ಚ್ 1ರಂದು ರವೀಂದ್ರ ಕಲಾಕ್ಷೇತ್ರದ ಮುಂದೆ ಪ್ರತಿಭಟನೆ ಮಾಡಲಾಗುವುದು' ಎಂದು ಒಕ್ಕೂಟದ ಕುಮಾರ್ ಕೆ.ಎಚ್. ಎಚ್ಚರಿಸಿದ್ದಾರೆ.

'ಸಂಘ–ಸಂಸ್ಥೆಗಳು ಸಂಕಷ್ಟಕ್ಕೆ ಸಿಲುಕಿವೆ. ಆದ್ದರಿಂದ ಧನಸಹಾಯಕ್ಕೆ ₹25 ಕೋಟಿ ಹಣವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಸೂಚಿಸಬೇಕು. ಕೂಡಲೇ ಧನಸಹಾಯ ಪ್ರಕ್ರಿಯೆಯನ್ನು ಕೈಗೊಳ್ಳಬೇಕು' ಎಂದು ಪತ್ರದಲ್ಲಿ ಮುಖ್ಯಮಂತ್ರಿಗೆ ಆಗ್ರಹಿಸಿದ್ದಾರೆ.

'ಬಿ' ಖಾತೆಗೆ ಸರ್ವರ್ ಕಾಟ



ದೊಡ್ಡಬಳ್ಳಾಪುರ: ಪೌರಾಡಳಿತ ಇಲಾಖೆಯ ಸರ್ವರ್‌ನಲ್ಲಿ ಗುರುವಾರ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ 'ಎ' ಮತ್ತು 'ಬಿ' ಖಾತೆ ಪಡೆಯಲು ಬಂದಿದ್ದ ನೂರಾರು ಜನರು ಇಡೀ ದಿನ ಸರದಿ ಸಾಲಿನಲ್ಲಿ ಪರದಾಡುವಂತಾಯಿತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕೌಂಟರ್ ಮುಂದೆ ಸಂಜೆವರೆಗೂ ಜನರು ಸಾಲುಗಟ್ಟಿ ನಿಂತಿದ್ದರು. ಹೆಚ್ಚಿನ ಜನರು ಬರುವ ಅಂದಾಜು ಇದ್ದರೂ ಹೆಚ್ಚುವರಿ ಕೌಂಟರ್ ತೆರೆಯದ ಕಾರಣ ದಟ್ಟಣೆ ಉಂಟಾಯಿತು.

ಮಹಿಳೆಯರು, ಹಿರಿಯ ನಾಗರಿಕರು, ಅಂಗವಿಕಲರಿಗೆ ಪ್ರತ್ಯೇಕ ಕೌಂಟರ್ ಇಲ್ಲದ ಕಾರಣ ಅವರು ಪರಿತಪಿಸಬೇಕಾಯಿತು. ಸಂಜೆಯಾದರೂ ಸರ್ವರ್ ಸಮಸ್ಯೆ ಸರಿ ಹೋಗದ ಕಾರಣ ಆಸ್ತಿ ತೆರಿಗೆ ಪಾವತಿಗೆ ರಶೀದಿ ಪಡೆಯಲು ಸಾಧ್ಯವಾಗಲಿಲ್ಲ.

'ಎ' ಮತ್ತು 'ಬಿ' ಖಾತೆಗೆ ಅರ್ಜಿ ಸಲ್ಲಿಸಲು ಆಸ್ತಿ ತೆರಿಗೆ ಪಾವತಿ ಕಡ್ಡಾಯ. ಅದಕ್ಕೂ ಮುನ್ನ ಸ್ವತ್ತಿನ ತೆರಿಗೆ, ಇತರ ಮಾಹಿತಿ ಒಳಗೊಂಡ ರಶೀದಿಯನ್ನು ಇಲಾಖೆಯ ವೆಬ್‌ಸೈಟ್ ಮೂಲಕ ಪಡೆಯಬೇಕು. ಸರ್ವರ್ ಸಮಸ್ಯೆಯಿಂದಾಗಿ ಇದು ಸಾಧ್ಯವಾಗಲಿಲ್ಲ.

ಕೋಳಿ ಅಂಗಡಿ ಮಾಲೀಕನ ಬಂಧನ, ಮತ್ತೊಬ್ಬ ಪರಾರಿ

ಡ್ರಗ್ಸ್ ಮಾರಾಟಕ್ಕೆ ಬಂದ ವಿದೇಶಿ ಪ್ರಜೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡಲು ಸ್ನೇಹಿತನ ಜತೆ ಕಾರಿನಲ್ಲಿ ಬಂದಿದ್ದ ವಿದೇಶಿ ಪ್ರಜೆಯನ್ನು ಕೊಲೆ ಮಾಡಿದ ಆರೋಪದಡಿ ಕೋಳಿ ಅಂಗಡಿ ಮಾಲೀಕನನ್ನು ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ನೈಜೀರಿಯಾದ ಅಡಿಯಾಕೊ ಮುಸಾಲಿಯೊ (40) ಕೊಲೆಯಾದ ವ್ಯಕ್ತಿ. ಯಾಸೀನ್ ಖಾನ್ ಬಂಧಿತ ಆರೋಪಿ.

ಮೃತನ ಬಳಿಯಿದ್ದ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. ಕೊಲೆ ಸಂಬಂಧ ನೈಜೀರಿಯಾ ರಾಯಭಾರಿ ಕಚೇರಿಗೆ ಮಾಹಿತಿ ನೀಡಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ಅಡಿಯಾಕೊ ಮುಸಾಲಿಯೊ ಸ್ನೇಹಿತನೊಂದಿಗೆ ಫೆಬ್ರುವರಿ 19ರಂದು ಬಾಗಲೂರಿನ ಬೆಳ್ಳಳ್ಳಿಗೆ ಕಾರಿನಲ್ಲಿ ಬಂದಿದ್ದ. ಮಾದಕ ವಸ್ತುಗಳನ್ನು ತಲುಪಿಸುವ ಸಲುವಾಗಿ ಗ್ರಾಹಕರ ಲೊಕೇಷನ್ ತೆಗೆದುಕೊಳ್ಳಲು ಅತ್ತಿಂದಿತ್ತ ಓಡಾಡುತ್ತಿದ್ದ. ಇದನ್ನು ಗಮನಿಸಿದ್ದ ಕೋಳಿ ಅಂಗಡಿ ಮಾಲೀಕ ಯಾಸೀನ್ ಖಾನ್, 'ಡ್ರಗ್ಸ್ ಮಾರಾಟ ಮಾಡಲು ಬಂದಿದ್ದೀರಾ' ಎಂದು ಪ್ರಶ್ನಿಸಿ, ಗಲಾಟೆ ಮಾಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.



ಯಾಸೀನ್ ಖಾನ್

'ಕೋಪಗೊಂಡ ಮುಸಾಲಿಯೊ, ಕೋಳಿ ಅಂಗಡಿಯಲ್ಲಿದ್ದ ಆಯುಧದಿಂದ ಹಲ್ಲೆ ಮಾಡಲು ಮುಂದಾಗಿದ್ದಾನೆ. ಇದರಿಂದ ಸಿಟ್ಟಾದ ಯಾಸೀನ್, ಮರದ ತುಂಡಿನಿಂದ ವಿದೇಶಿ ಪ್ರಜೆಯ ತಲೆಗೆ ಹೊಡೆದಿದ್ದಾನೆ. ಪರಿಣಾಮ ಆತ ಮೃತಪಟ್ಟಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಮೃತ ವ್ಯಕ್ತಿ ಭಾರತಕ್ಕೆ ಯಾವ ವೀಸಾದಡಿ, ಯಾವಾಗ ಬಂದಿದ್ದ, ಯಾರೊಂದಿಗೆ ವಾಸವಾಗಿದ್ದ ಎಂಬುದರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಮೃತನ ವಿರುದ್ಧ ಯಾವುದೇ ಅಪರಾಧ ಪ್ರಕರಣ ದಾಖಲಾಗಿಲ್ಲ. ಕೃತ್ಯದ ಸಂದರ್ಭದಲ್ಲಿ ಪರಾರಿಯಾಗಿರುವ ಮತ್ತೊಬ್ಬ ವಿದೇಶಿ ಪ್ರಜೆಗಾಗಿ ಹುಡುಕಾಟ ನಡೆಸಲಾಗುತ್ತಿದೆ' ಎಂದು ಹೇಳಿದರು.

ಪತ್ನಿಯ ಪ್ರಿಯಕರನ ಕೊಲೆ: ಮೂವರ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ಪತ್ನಿಯ ಮೇಲೆ ಹಲ್ಲೆ ನಡೆಸಿ, ಆಕೆಯ ಪ್ರಿಯಕರನನ್ನು ಕೊಲೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಮೂವರನ್ನು ಕಾಡುಗೋಡಿ ಪೊಲೀಸರು ಬಂಧಿಸಿದ್ದಾರೆ.

ಬಸ್ ಚಾಲಕ ಕಿಶೋರ್ (38) ಕೊಲೆಯಾದ ವ್ಯಕ್ತಿ. ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿರುವ ಅರುಂಧತಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅರುಂಧತಿ ಪತಿ ಯಲ್ಲಪ್ಪ, ಅವರ ಮಗಳು ಪೂಜಾ ಮತ್ತು ಸಹೋದರ ವೆಂಕಟರಮಣ ಅವರನ್ನು ಪೊಲೀಸರು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

'ಕಾಡುಗೋಡಿ ಬಳಿಯ ಮನೆಯೊಂದರಲ್ಲಿ ಗುರುವಾರ ಮಧ್ಯಾಹ್ನ ಅರುಂಧತಿ ಮತ್ತು ಕಿಶೋರ್ ಒಟ್ಟಿಗೆ ಇದ್ದರು. ಈ ಮಾಹಿತಿ ತಿಳಿದ ಯಲ್ಲಪ್ಪ, ತನ್ನ ಮಗಳು ಹಾಗೂ ಬಾಮೈದನ ಜತೆ ಅಲ್ಲಿಗೆ ತೆರಳಿ, ಕಿಶೋರ್ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿದ್ದರ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಪತ್ನಿ ಮೇಲೂ ಹಲ್ಲೆ ನಡೆಸಿದ್ದು, ಅವರು ತೀವ್ರವಾಗಿ ಗಾಯಗೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಮದುವೆಯಾಗಿರುವ ಕಿಶೋರ್ ಜತೆ ಅರುಂಧತಿ ಸಲುಗೆಯಿಂದ ಇದ್ದರು. ಈ ವಿಚಾರಕ್ಕೆ ಮನೆಯಲ್ಲಿ ಹಲವು ಬಾರಿ ಜಗಳ ನಡೆದಿತ್ತು. ಆತನಿಂದ ದೂರ ಇರುವಂತೆ ಪತ್ನಿಗೆ ಆರೋಪಿ ಎಚ್ಚರಿಕೆ ನೀಡಿದ್ದ. ಆದರೂ ಇಬ್ಬರು ಭೇಟಿಯಾಗುತ್ತಿದ್ದರು. ಇದರಿಂದ ಬೇಸತ್ತು ಕೃತ್ಯವೆಸಗಿರುವುದಾಗಿ ಆರೋಪಿ ತಿಳಿಸಿದ್ದಾನೆ ' ಎಂದು ಪೊಲೀಸರು ಹೇಳಿದರು.

ಪೊಲೀಸ್ ವಿಚಾರಣೆ ವೇಳೆ ಮಹಿಳೆ ಹೇಳಿಕೆ

'ಅತ್ತೆ ಕೊಲ್ಲಲು ಅಲ್ಲ, ನನಗೆ ಮಾತ್ರೆ ಕೇಳಿದ್ದು..'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತೆಯನ್ನು ಸಾಯಿಸಲು ಮಾತ್ರೆ ಕೊಡುವಂತೆ ವೈದ್ಯರೊಬ್ಬರಿಗೆ ಮಹಿಳೆಯು ವಾಟ್ಸ್ಆ್ಯಪ್ ಸಂದೇಶ ಕಳುಹಿಸಿದ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ.



ಸಂಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಭದ್ರಪ್ಪ ಬಡಾವಣೆಯಲ್ಲಿ ವಾಸವಿರುವ ವೈದ್ಯ ಸುನಿಲ್ ಹೆಬ್ಬಿ ಅವರ ದೂರು ಆಧರಿಸಿ ಪೊಲೀಸರು ಮಹಿಳೆಯ ವಿಚಾರಣೆ ನಡೆಸಿದ್ದಾರೆ.

'ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದು, ಮಾತ್ರೆಗಳನ್ನು ಪಡೆದು ನಾನೇ ಸಾಯಲು ಮುಂದಾಗಿದ್ದೆ' ಎಂದು ಮಹಿಳೆಯು ಹೇಳಿಕೆ ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

'ನಗರದ ಮಾಕಳಿಯಲ್ಲಿ ವಾಸವಾಗಿರುವ ಮಹಿಳೆಗೆ ಒಂದೂವರೆ ವರ್ಷದ ಹಿಂದೆ ಮದುವೆಯಾಗಿದ್ದು, ಒಂದು ಮಗುವಿದೆ. ಪತಿ ಕ್ಯಾಬ್ ಚಾಲಕರಾಗಿದ್ದಾರೆ. ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಮಹಿಳೆಯು, ಈ ಹಿಂದೆ ಎರಡು ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರು. ಅಲ್ಲದೆ, ಒಮ್ಮೆ ಮನೆ ಬಿಟ್ಟು ಹೋಗಿರುವುದು ವಿಚಾರಣೆ ವೇಳೆ ತಿಳಿದುಬಂದಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಅತ್ತೆ, ಸೊಸೆ ನಡುವೆ ಯಾವುದೇ ಭಿನ್ನಾಭಿಪ್ರಾಯವಿರಲಿಲ್ಲ ಎಂದು ಆಕೆಯ ಪತಿ ಸಹ ತಿಳಿಸಿದ್ದಾರೆ. ಖಿನ್ನತೆಯಿಂದ ಬಳಲುತ್ತಿರುವ ಮಹಿಳೆಯನ್ನು ಆಪ್ತ ಸಮಾಲೋಚನೆಗೆ ಒಳಪಡಿಸಬೇಕು ಎಂದು ವೈದ್ಯ ಸುನಿಲ್ ಶಿಫಾರಸು ಮಾಡಿದ್ದಾರೆ' ಎಂದು ಹೇಳಿದರು.

ಗೂಗಲ್ ಮೂಲಕ ವೈದ್ಯ ಸುನಿಲ್ ಅವರ ನಂಬರ್ ಪಡೆದಿದ್ದ ಮಹಿಳೆಯು ಕಳೆದ ಸೋಮವಾರ ವೈದ್ಯರಿಗೆ ಮೆಸೇಜ್ ಮಾಡಿ ತನಗೆ ಅತ್ತೆ ಹಿಂಸೆ ಕೊಡುತ್ತಿದ್ದು, ಆಕೆಯನ್ನು ಸಾಯಿಸಲು ಎರಡು ಮಾತ್ರೆ ಕೊಡುವಂತೆ ಕೇಳಿದ್ದರು. ಇದಕ್ಕೆ ನಿರಾಕರಿಸಿದ ಸುನಿಲ್, ನಾವು ಪ್ರಾಣ ಉಳಿಸುವವರು, ಪ್ರಾಣ ತೆಗೆಯುವವರು ಅಲ್ಲ ಎಂದು ಹೇಳಿದ್ದರು.

ಗಮಕ ವಾಚನ ಸ್ಪರ್ಧೆ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನವು 10ರಿಂದ 16 ವರ್ಷದೊಳಗಿನವರಿಗೆ ಮಾರ್ಚ್ 23ರಂದು ಗಮಕ ವಾಚನ ಸ್ಪರ್ಧೆ ಹಮ್ಮಿಕೊಂಡಿದೆ. ವಿವಿಧ ದತ್ತಿಗಳ ಆಶ್ರಯದಲ್ಲಿ ಸ್ಪರ್ಧೆ ನಡೆಯಲಿದೆ. ಸ್ಪರ್ಧಿಗಳು ಡಿ.ವಿ.ಜಿ. ಅವರ 'ಅಂತಃಪುರ ಗೀತೆ'ಯ ಯಾವುದಾದರೂ ಒಂದು ಪದ್ಯ ವಾಚಿಸಬೇಕಾಗುತ್ತದೆ.

ವಿಜೇತರಿಗೆ ಪ್ರಥಮ ಬಹುಮಾನ ₹4 ಸಾವಿರ, ದ್ವಿತೀಯ ₹3 ಸಾವಿರ ಹಾಗೂ ತೃತೀಯ ₹2 ಸಾವಿರ ನೀಡಲಾಗುತ್ತದೆ. ಅರ್ಜಿಗಳಿಗೆ ಆಸಕ್ತರು ಮಾರ್ಚ್ 15ರ ಸಂಜೆ 5 ಗಂಟೆಯೊಳಗೆ ಎನ್.ಆರ್. ಕಾಲೊನಿಯಲ್ಲಿ ಇರುವ ಪ್ರತಿಷ್ಠಾನದ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9972812127

ಪಿಎಸ್‌ಐ ಸೇರಿ ಮೂವರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಪ್ರೀತಿಯ ವಿಚಾರವನ್ನು ಪ್ರಶ್ನಿಸಿದ್ದಕ್ಕೆ ತಾಯಿ ಹಾಗೂ ಸಹೋದರಿಯರ ಮೇಲೆ ಹಲ್ಲೆ ನಡೆಸಿದ ರಾಮಮೂರ್ತಿನಗರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮಂಜುನಾಥ್ ಸೇರಿ ಮೂವರಿಗೆ ಕೆ.ಆರ್.ಪುರಂ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಹಲ್ಲೆಗೊಳಗಾದ ತಾಯಿ ಮಂಗಳಮ್ಮ ಅವರ ದೂರು ಆಧರಿಸಿ, ಪುತ್ರ ಪಿಎಸ್‌ಐ ಮಂಜುನಾಥ್, ಆತನ ಗೆಳತಿ ಜ್ಯೋತಿ ಹಾಗೂ ಬಸವಪ್ರಭು ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಕೃತ್ಯಕ್ಕೆ ಸಂಬಂಧಿಸಿದಂತೆ ಮೂರು ದಿನದೊಳಗಾಗಿ ಸಮಜಾಯಿಷಿ ನೀಡುವಂತೆ ನೋಟಿಸ್‌ನಲ್ಲಿ ಉಲ್ಲೇಖಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

'ದೊಡ್ಡಬಳ್ಳಾಪುರದ ಮಂಜುನಾಥ್ ಅವರು ಅನಿತಾ ಕುಮಾರಿ ಅವರನ್ನು ಪ್ರೀತಿಸಿ 2011ರಲ್ಲಿ ಮದುವೆಯಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ವರ್ಷದ ಹಿಂದೆ ಬೇರೆ ಮಹಿಳೆಯೊಬ್ಬರ ಜತೆ ಮಂಜುನಾಥ್ ಸಲುಗೆ ಬೆಳೆಸಿಕೊಂಡಿದ್ದರು. ಈ ಬಗ್ಗೆ ಮಗನಿಗೆ ಬುದ್ಧಿ ಹೇಳಿದರೂ ಆ ಮಹಿಳೆಯ ಸಹವಾಸ ಬಿಟ್ಟಿರಲಿಲ್ಲ' ಎಂದು ದೂರಿನಲ್ಲಿ ಮಂಗಳಮ್ಮ ಆರೋಪಿಸಿದ್ದಾರೆ.

ದೂರು: 'ಮನೆ ಬಳಿ ಬಂದು ಗಲಾಟೆ ಮಾಡಿದ್ದಾರೆ' ಎಂದು ಆರೋಪಿಸಿ ಮಂಗಳಮ್ಮ ಹಾಗೂ ಅವರ ಪುತ್ರಿಯರಾದ ಮಂಜುಳಾ, ಆಶಾ ವಿರುದ್ಧ ಜ್ಯೋತಿ ಅವರು ಕೆ.ಆರ್.ಪುರ ಠಾಣೆಗೆ ಕೆಲ ದಿನಗಳ ಹಿಂದೆ ದೂರು ನೀಡಿದ್ದರು.

'ಮಂಗಳಮ್ಮ ಹಾಗೂ ಅವರ ಪುತ್ರಿಯರು ಕೆ.ಆರ್.ಪುರದ ನನ್ನ ಮನೆ ಬಳಿ ಬಂದು ಗಲಾಟೆ ಮಾಡಿ, ಹಲ್ಲೆ ನಡೆಸಿದ್ದಾರೆ. ಮೂವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರು ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಮದರಸಾದಲ್ಲಿ ಬಾಲಕಿಯರ ಮೇಲೆ ಹಲ್ಲೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಗಡೆ ನಗರದಲ್ಲಿರುವ ಮದರಸಾದಲ್ಲಿ ಬಾಲಕಿಯರ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಪ್ರಾಂಶುಪಾಲರ ಮಗನನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಲ್ಕು ದಿನಗಳ ಹಿಂದೆ ನಡೆಸಿದ ಹಲ್ಲೆಯ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಜಾಲತಾಣದಲ್ಲಿ ಹರಿದಾಡಿತ್ತು. ಈ ಬಗ್ಗೆ ಮಕ್ಕಳ ಪೋಷಕರು ಮದರಸಾ ಎದುರು ಜಮಾವಣೆಗೊಂಡು, ಆರೋಪಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದರು.


ಘಟನೆ ಸಂಬಂಧ ಪೊಲೀಸರು ಮದರಸಾ ನಡೆಸುತ್ತಿದ್ದ ಮಾಲೀಕರ ಪುತ್ರ ಮೊಹಮ್ಮದ್ ಹಸನ್ (19) ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

'ಮದರಸಾದಲ್ಲಿ 200 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಕ್ಕಿ ಚೆಲ್ಲಾಡಿದ್ದರು, ಹೇಳಿದ ಕೆಲಸ ಮಾಡಲಿಲ್ಲ ಎಂಬ ಕಾರಣಕ್ಕೆ ಬಾಲಕಿಯರ ಮೇಲೆ ಆರೋಪಿ ಹಲ್ಲೆ ನಡೆಸಿರುವುದು ವಿಚಾರಣೆ ವೇಳೆ ಗೊತ್ತಾಗಿದೆ. ಈ ದೃಶ್ಯಗಳು ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಪರಿಶೀಲನೆ ನಡೆಸಲಾಗುತ್ತಿದೆ. ಅಲ್ಲದೇ ಶೌಚಾಲಯ ಕೊಠಡಿ, ಅಡುಗೆ ಕೋಣೆ ಸ್ವಚ್ಛತೆಗೂ ಮಕ್ಕಳನ್ನು ಬಳಸಿಕೊಳ್ಳುತ್ತಿದ್ದರು ಎಂದು ಪೋಷಕರು ಆರೋಪಿಸಿದ್ದಾರೆ. ಈ ಬಗ್ಗೆಯೂ ವಿಚಾರಣೆ ನಡೆಯುತ್ತಿದೆ' ಎಂದು ಪೊಲೀಸರು ತಿಳಿಸಿದರು.

₹441 ಕೋಟಿ ವೆಚ್ಚ • ಕೆಟಿಪಿಪಿ ಅಡಿ ಸದ್ಯವೇ ಟೆಂಡರ್ • ಕಾನೂನು ಸಚಿವ ಎಚ್‌.ಕೆ.ಪಾಟೀಲ

63 ಅಂಬೇಡ್ಕರ್ ವಿದ್ಯಾರ್ಥಿ ನಿಲಯ ಸ್ಥಾಪನೆ

ಪ್ರಜಾವಾಣಿ ವಾರ್ತೆ



ಎಚ್‌.ಕೆ.ಪಾಟೀಲ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ 63 ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿ ನಿಲಯಗಳಿಗೆ ₹441 ಕೋಟಿ ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ವಿವರ ನೀಡಿದರು. ಮೆಟ್ರಿಕ್ ಪೂರ್ವ 32 ಮತ್ತು ಮೆಟ್ರಿಕ್ ನಂತರದ 31 ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ನಿರ್ಮಿಸಲಾಗುವುದು. ಇದಕ್ಕಾಗಿ ಕೆಟಿಪಿಪಿ ಅಡಿ ಸದ್ಯವೇ ಟೆಂಡರ್ ಕರೆಯಲಾಗುವುದು ಎಂದು ತಿಳಿಸಿದರು.

- ಕಲ್ಯಾಣ ಕರ್ನಾಟಕ ಪ್ರದೇಶದ 306 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ರಾಷ್ಟ್ರೀಯ ಕೌಶಲ ಯೋಜನೆಯಡಿ 306 ವೃತ್ತಿ ತರಬೇತಿದಾರರು ಮತ್ತು 10 ಜನ ವೃತ್ತಿ ಸಂಯೋಜಕರನ್ನು ನಿಯೋಜಿಸಲಾಗುವುದು. ಇದಕ್ಕಾಗಿ ₹15.30 ಕೋಟಿ ವೆಚ್ಚ ಮಾಡಲಾಗುವುದು
- ₹79.80 ಕೋಟಿ ವೆಚ್ಚದಲ್ಲಿ ಸೆಮಿಕಂಡಕ್ಟರ್ ಫ್ಯಾಬ್‌ಲೆಸ್ ಆಕ್ಸಿಲರೇಟರ್ ಲ್ಯಾಬ್ ಸ್ಥಾಪನೆಗೆ ಒಪ್ಪಿಗೆ ನೀಡಲಾಗಿದೆ. ಇದಕ್ಕೆ ರಾಜ್ಯ ಸರ್ಕಾರ ₹50.33 ಕೋಟಿ ನೀಡಲಿದೆ. ಉಳಿದ ಮೊತ್ತ ಕೇಂದ್ರ ಸರ್ಕಾರ ನೀಡಲಿದ್ದು, 5 ವರ್ಷಗಳ ಅವಧಿಯಲ್ಲಿ ಕಾರ್ಯಗತಗೊಳ್ಳಲಿದೆ
- ವಿಜಯಪುರದಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ವಿಜಯಪುರ ಕಿರು ತಾರಾಲಯ ಯೋಜನೆಯ ಪರಿಷ್ಕೃತ ಕಾಮಗಾರಿ ₹12.88 ಕೋಟಿಗೆ ಒಪ್ಪಿಗೆ
- ಬಾಣಾವರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿ ಆಗಿ ಮೇಲ್ದರ್ಜೆಗೇರಿಸಲು ಸಮ್ಮತಿ
- ಕೇಂದ್ರ ಪುರಸ್ಕೃತ 'ಪ್ರಸಾದ್ 2.0' ಯೋಜನೆಯಡಿ ಸವದತ್ತಿ ಯಲ್ಲಮ್ಮ ದೇವಸ್ಥಾನದ ₹18.37 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ, ಮೈಸೂರು ಚಾಮುಂಡೇಶ್ವರಿ ಕ್ಷೇತ್ರವನ್ನು ₹61.99 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ, ಬೀದರ್‌ನ ಶ್ರೀಪಾಪನಾಶ ದೇವಸ್ಥಾನವನ್ನು ₹22.41 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೆ ಅನುಮತಿ.
- ವಸತಿರಹಿತ ಮೀನುಗಾರರಿಗೆ ರಾಜ್ಯ ಮೀನುಗಾರಿಕೆ ಕಲ್ಯಾಣ ಯೋಜನೆಯಡಿ ಮೀನುಗಾರರ ಮಾದರಿ ಗ್ರಾಮಗಳ ಅಭಿವೃದ್ಧಿಗಾಗಿ 10 ಸಾವಿರ ಮನೆಗಳನ್ನು ಮಂಜೂರು ಮಾಡಲು ಒಪ್ಪಿಗೆ
- ವಿವಿಧ ಇಲಾಖೆಗಳ ಕಾಮಗಾರಿಗಳಲ್ಲಿ ಪದೇ ಪದೇ ವೆಚ್ಚ ಪರಿಷ್ಕರಣೆ ಆಗುತ್ತಿರುವ ಬಗ್ಗೆ ನಿವೃತ್ತ ಅಭಿಯಂತರ ಗುರುಪ್ರಸಾದ್ ಅವರು ಸಲ್ಲಿಸಿರುವ ವರದಿಯ ಶಿಫಾರಸುಗಳ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಸಚಿವರ ಜತೆ ಚರ್ಚಿಸಿ ಮುಂದಿನ ಸಂಪುಟಕ್ಕೆ ಮಾಹಿತಿ ನೀಡಲು ಸೂಚಿಸಲಾಯಿತು
- ಮೈಸೂರಿನ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣವನ್ನು ₹20 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಅನುಮತಿ
- ಚಿಂತಾಮಣಿ ಮುರಗಮಲ್ಲ ಗ್ರಾಮದ ಹಜರತ್ ಫಖೀ-ಷಾ-ವಲಿ ದರ್ಗಾ ಅಭಿವೃದ್ಧಿಗೆ ₹31.99 ಕೋಟಿ

ಟಿಡಿಆರ್ ವಿವಾದ: ಕಾನೂನು ತಜ್ಞರ ಜತೆ ಚರ್ಚಿಸಲು ತೀರ್ಮಾನ

ಬೆಂಗಳೂರು ಅರಮನೆ ಟಿಡಿಆರ್ ಪ್ರಕರಣ ಸಂಬಂಧಿಸಿದಂತೆ ಕಾನೂನು ತಜ್ಞರ ಜತೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲು ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಹಿನ್ನಡೆ ಆದ ವಿಚಾರದ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ರಾಜ್ಯದ ಹಿತವನ್ನು ಕಾಪಾಡುವ ಉದ್ದೇಶದಿಂದ ಕಾನೂನು ತಜ್ಞರ ಜತೆ ಚರ್ಚಿಸಿ ಮುಂದುವರಿಯುವುದೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಒಂದು ವೇಳೆ ರಾಜವಂಶಸ್ಥರು ಮತ್ತು ಸರ್ಕಾರ ಕೋರ್ಟ್‌ನಿಂದ ಹೊರಗೆ ವಿವಾದವನ್ನು ಸೌಹಾರ್ದವಾಗಿ ಬಗೆಹರಿಸಿಕೊಳ್ಳಲು ಸುಪ್ರೀಂಕೋರ್ಟ್ ಸೂಚಿಸಿದರೆ ಪರಿಶೀಲಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮೂಲ ದಾವೆ ಇನ್ನೂ ಇತ್ಯರ್ಥವಾಗಿಲ್ಲ. ಅದನ್ನು ಆದಷ್ಟು ಬೇಗನೆ ಇತ್ಯರ್ಥ ಮಾಡಲು ಸುಪ್ರೀಂಕೋರ್ಟ್‌ಗೆ ಮತ್ತೊಮ್ಮೆ ಮನವಿ ಮಾಡಲಾಗುವುದು ಎಂದರು.

ನೋಟಿಸ್: ಯತ್ನಾಳ ಬಣ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಕೇಂದ್ರ ಶಿಸ್ತು ಸಮಿತಿ ನೀಡಿದ ನೋಟಿಸ್‌ಗೆ ತಲೆಕೆಡಿಸಿಕೊಳ್ಳದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಬಣದ ಹಾಲಿ ಹಾಗೂ ಮಾಜಿ ಶಾಸಕರು ಗುರುವಾರ ಮಾಜಿ ಸಚಿವ ಕುಮಾರ್ ಬಂಗಾರಪ್ಪ ನಿವಾಸದಲ್ಲಿ ಸಭೆ ಸೇರಿ, ಮುಂದಿನ ನಡೆ ಕುರಿತು ಸುದೀರ್ಘ ಚರ್ಚೆ ನಡೆಸಿದ್ದಾರೆ.

ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ. ಹರೀಶ್, ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ಮಾಜಿ ಸಂಸದ ಪ್ರತಾಪ್ ಸಿಂಹ ಸಭೆಯಲ್ಲಿ ಭಾಗವಹಿಸಿದ್ದರು. ವರಿಷ್ಠರು ನೀಡಿದ ನೋಟಿಸ್ ತಲುಪುವ ಮೊದಲೇ ಮಾಧ್ಯಮಗಳಲ್ಲಿ ಹರಿದಾಡಿದ ಘಟನೆಗೆ ಆಕ್ಷೇಪ ಹೊರಹಾಕಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ನಡೆಸುವ ಕುರಿತು ಸಾಕಷ್ಟು ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ನೋಟಿಸ್ ತಲುಪುವ ಮೊದಲೇ ಅದು ಮಾಧ್ಯಮಗಳಿಗೆ ತಲುಪುತ್ತದೆ. ಇದರ ಹಿಂದೆ ವಿಜಯೇಂದ್ರ ಕೈವಾಡವಿದೆ. ಹಿಂದೆ ಎರಡು ಬಾರಿ ನಕಲಿ ನೋಟಿಸ್ ಹರಿದಾಡಿತ್ತು. ವಿಜಯೇಂದ್ರ ಬಿಜೆಪಿಗೆ ಅನಿವಾರ್ಯ ಎಂದು ಬಿಂಬಿಸಿ ಕೆಲ ಮಾಧ್ಯಮಗಳು ಅವರ ಪರ ಕೆಲಸ ಮಾಡುತ್ತಿವೆ ಎಂದು ಹರಿಹಾಯ್ದಿದ್ದಾರೆ.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಕುರಿತು ನಿರ್ಧಾರ ಮಾಡಿಲ್ಲ. ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ರಾಜ್ಯಕ್ಕೆ ಬಂದು ಚುನಾವಣೆ ಪ್ರಕ್ರಿಯೆ ನಡೆಸುವುದಾದರೆ ನಾಮಪತ್ರ ಸಲ್ಲಿಕೆ ಬಗ್ಗೆ ಚರ್ಚಿಸುವ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಜಯೇಂದ್ರ ನಕಲಿ ನೋಟಿಸ್ ಕೊಡ, ನನಗೆ ನೋಟಿಸ್ ತಲುಪುವ ಮೊದಲೇ ಮಾಧ್ಯಮಗಳಿಗೆ ನೀಡಿದ. ಉತ್ತರವನ್ನೂ ಅವನ ಬಳಿಯೇ ಕೇಳಿ
ಬಸನಗೌಡ ಪಾಟೀಲ ಯತ್ನಾಳ್, ಶಾಸಕ

ವಕ್ಫ್ ಹೋರಾಟಕ್ಕೆ ಕಿಚ್ಚು ಹಚ್ಚಿದ್ದೇ ಶಾಸಕ ಬಸನಗೌಡ ಪಾಟೀಲ ಯತ್ನಾಳ. ಈಗ ಅವರದೇ ನೇತೃತ್ವದಲ್ಲಿ ವಕ್ಫ್ ವಿಚಾರದ ಚರ್ಚೆ ನಡೆಸಲು ಸಭೆ ಸೇರಿದ್ದೆವು
ಪ್ರತಾಪ್ ಸಿಂಹ, ಮಾಜಿ ಸಂಸದ

ಸಭೆ: ಸುರೇಶ್‌ಕುಮಾರ್ ಸಭಾತ್ಯಾಗ

ಕೆಂಪೇಗೌಡ ಬಡಾವಣೆಗೆ ದೊರಕದ ಸೌಕರ್ಯ, ಅಸಮಾಧಾನ

ಪ್ರಜಾವಾಣಿ ವಾರ್ತೆ



ಎಸ್‌. ಸುರೇಶ್ ಕುಮಾರ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಧೋರಣೆ ಖಂಡಿಸಿ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅರ್ಜಿ ಸಮಿತಿಯ ಸಭೆಯಿಂದ ಗುರುವಾರ ಸಭಾತ್ಯಾಗ ಮಾಡಿದ್ದಾರೆ.

'ಬಡಾವಣೆಯಲ್ಲಿ ನಿವೇಶನ ಹಂಚಿಕೆಯಾಗಿ ಒಂಬತ್ತು ವರ್ಷಗಳಾಗಿವೆ. ನಿವೇಶನ ಖರೀದಿಸಿದವರಿಗೆ ಮನೆ ಕಟ್ಟಿಕೊಳ್ಳಲು ಅಗತ್ಯವಾದ ರಸ್ತೆ, ಕುಡಿಯುವ ನೀರು, ವಿದ್ಯುತ್, ಒಳಚರಂಡಿ ಮತ್ತಿತರ ಮೂಲಸೌಕರ್ಯ ಕಲ್ಪಿಸಿಲ್ಲ. ಈ ಕುರಿತು ಅರ್ಜಿ ಸಮಿತಿಗೆ ದೂರು ನೀಡಲಾಗಿತ್ತು. ವಿಚಾರಣೆ ನಡೆಸಿ, ನಾಗರಿಕರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ಹಂಗಾಮಿ ಅಧ್ಯಕ್ಷ ಎಸ್‌.ಟಿ.ಸೋಮಶೇಖರ್ ಅಧ್ಯಕ್ಷತೆಯ ಸಮಿತಿ ಶಿಫಾರಸು ಮಾಡಬೇಕಿತ್ತು. 20 ದಿನಗಳ ಹಿಂದೆ ಅರ್ಜಿ ಸಮಿತಿಯಲ್ಲಿ ಉಪಸ್ಥಿತರಿದ್ದ ಬಿಡಿಎ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದೆ, ಸ್ಪಂದನೆ ದೊರೆತಿಲ್ಲ. ತಮ್ಮ ವೈಫಲ್ಯ ಮರೆಮಾಚಲು 20X30 ಅಳತೆಯ ನಿವೇಶನ ಕೊಂಡವರು ಮಾಡುತ್ತಿರುವ ಅಪಪ್ರಚಾರವನ್ನು ನಂಬಿ ಸಮಿತಿಯ ಸದಸ್ಯರು ಇಲ್ಲದ ವಿಷಯ ಪ್ರಸ್ತಾವ ಮಾಡುತ್ತಿದ್ದಾರೆ ಎಂಬ ಬಿಡಿಎ ಅಧಿಕಾರಿಗಳ ವರ್ತನೆ ವಿರುದ್ಧ ಆಕ್ರೋಶಕ್ಕೆ ಒಳಗಾದೆ. ಹಾಗಾಗಿ, ಸಭಾತ್ಯಾಗ ಮಾಡಬೇಕಾಯಿತು' ಎಂದು ಹೇಳಿದ್ದಾರೆ.

'ಬಡಾವಣೆಗೆ ಮೂಲಸೌಕರ್ಯಗಳನ್ನು ಒದಗಿಸುವ ಕುರಿತು ಮೂರು ವರ್ಷಗಳಲ್ಲಿ 11 ಸಭೆಗಳು ನಡೆದಿವೆ. 2022ರಲ್ಲಿ ನಡೆದಿದ್ದ ಸಮಿತಿ ಸಭೆಯಲ್ಲಿ ಸೌಕರ್ಯ ಒದಗಿಸಲು 2023ರ ಡಿಸೆಂಬರ್‌ವರೆಗೆ ಕಾಲಮಿತಿ ನಿಗದಿ ಮಾಡಲಾಗಿತ್ತು. ಇಂದಿಗೂ ಸಮಸ್ಯೆ ಬಗೆಹರಿದಿಲ್ಲ. ಗುರುವಾರ ನಡೆದ ಸಭೆಯಲ್ಲೂ ಸ್ಪಷ್ಟ ಭರವಸೆ ದೊರೆಯಲಿಲ್ಲ. ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವೂ ಸಹ ನಾಡಪ್ರಭು ಕೆಂಪೇಗೌಡ ಬಡಾವಣೆಯ ಅಭಿವೃದ್ಧಿಗೊಳಿಸುವ ಯೋಜನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಮನೆ ನಿರ್ಮಿಸಲು ಈ ಹಿಂದೆ ನೀಡಿದ್ದ ಐದು ವರ್ಷಗಳ ಅವಧಿಯನ್ನು ಈಗ ಮೂರು ವರ್ಷಗಳಿಗೆ ಇಳಿಸಿದೆ. ಇದು ಯಾವ ರೀತಿಯ ತರ್ಕ' ಎಂದು ಪ್ರಶ್ನಿಸಿದ್ದಾರೆ.

'ಕನ್ನಡ ಭಾಷಾ ಕಲಿಕಾ ಕಾಯ್ದೆ ಅನುಷ್ಠಾನ ಕಡೆಗಣನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷಾ ಕಲಿಕಾ ಕಾಯ್ದೆ–2015ರ ಸಮರ್ಪಕ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎದುರಾಗಿರುವ ಪ್ರಾಯೋಗಿಕ ಸಮಸ್ಯೆಗಳನ್ನು ಶಾಲಾ ಶಿಕ್ಷಣ ಇಲಾಖೆಯು ಪರಿಹರಿಸದಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಅವರು ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ. 'ಕಳೆದ ನವೆಂಬರ್ ತಿಂಗಳಲ್ಲಿ ಇಲಾಖೆಯ ಅಧಿಕಾರಿಗಳೊಂದಿಗೆ ಸುದೀರ್ಘ ಸಭೆ ನಡೆಸಿ, ಕನ್ನಡ ಭಾಷಾ ಕಲಿಕಾ ಕಾಯ್ದೆ–2015ರ ಸಮರ್ಪಕ ಅನುಷ್ಠಾನಕ್ಕೆ ಎದುರಾಗಿರುವ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸಲು ಸೂಚಿಸಲಾಗಿತ್ತು. ಆದರೆ, ಈವರೆಗೂ ಆ ಬಗ್ಗೆ ಕ್ರಮವಹಿಸಿಲ್ಲ. ಈ ಅಧಿನಿಯಮವು ಕಡ್ಡಾಯ ಶಿಕ್ಷಣ ಕಾಯ್ದೆಯ ಸ್ವರೂಪದ ಅಡಿಯಲ್ಲಿ ನಿರೂಪಿತವಾಗಿದ್ದು, ಖಾಸಗಿ ಶಾಲೆಗಳ ಕನ್ನಡ ಬೋಧನೆಯ ಕುರಿತಾದ ಅನ್ಯಮನಸ್ಕತೆಯನ್ನು ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ' ಎಂದು ತಿಳಿಸಿದ್ದಾರೆ.

'ಕೇಂದ್ರ ಪಠ್ಯಕ್ರಮ ಸೇರಿ ಇತರೆ ಪಠ್ಯಕ್ರಮಗಳ ಶಾಲೆಗಳಲ್ಲಿನ ಕನ್ನಡೇತರ ಮಕ್ಕಳಿಗೂ ಕನ್ನಡ ಕಲಿಸುವುದನ್ನು ಈ ಕಾಯ್ದೆಯು ಕಡ್ಡಾಯ ಮಾಡಿದೆ. ಇದರ ಅನುಷ್ಠಾನಕ್ಕೆ ಎದುರಾಗಿರುವ ಪ್ರಾಯೋಗಿಕ ಸಮಸ್ಯೆಗಳ ಪರಿಹಾರಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಮರೋಪಾದಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಈ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಿದ್ದರೂ ಇಲಾಖೆಯ ಅಧಿಕಾರಿಗಳ ಸ್ಪಂದನ ಆಶಾದಾಯಕವಾಗಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

'ಈ ಕಾಯ್ದೆಯ ಸಮರ್ಪಕ ಅನುಷ್ಠಾನಕ್ಕೆ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕೂಡಲೇ ಸಭೆ ಆಯೋಜಿಸಲು ಕ್ರಮ ವಹಿಸಬೇಕು' ಎಂದು ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

'ಪ್ರಯಾಣ ದರ ಏರಿಕೆ: ಹೋರಾಟದ ಎಚ್ಚರಿಕೆ'



ಬೆಂಗಳೂರು: ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಪ್ರಯಾಣದ ಸಮಯವನ್ನು ಉಳಿತಾಯ ಮಾಡುವುದಕ್ಕೆ ಮೆಟ್ರೊ ಸಹಕಾರಿಯಾಗಿತ್ತು. ಬಿಎಂಆರ್‌ಸಿಎಲ್ 'ನಮ್ಮ ಮೆಟ್ರೊ' ಪ್ರಯಾಣ ದರ ಏರಿಸಿರುವುದರಿಂದ ಆಶಯಗಳಿಗೆ ಧಕ್ಕೆಯಾಗಿದೆ. ಕೂಡಲೇ ಪ್ರಯಾಣ ದರ ಇಳಿಸಬೇಕು. ಇಲ್ಲದಿದ್ದರೆ ಹೋರಾಟ ಮಾಡಬೇಕಾಗುತ್ತದೆ ಎಂದು ಸಾರ್ವಜನಿಕರು ಎಚ್ಚರಿಸಿದ್ದಾರೆ.





ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದರಿಂದ ಎಲ್ಲ ವರ್ಗದ ಜನರಿಗೆ ಹೊರೆಯಾಗಿದೆ. ನಿತ್ಯ ಬೆಂಗಳೂರು ನಗರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು, ವಿದ್ಯಾರ್ಥಿಗಳು, ವ್ಯಾಪಾರಿಗಳು ಮೆಟ್ರೊದಲ್ಲಿ ಪ್ರಯಾಣಿಸುತ್ತಿದ್ದರು. ಈಗ ಪ್ರಯಾಣ ದರ ಹೆಚ್ಚಳ ಮಾಡಿರುವುದರಿಂದ ಎಲ್ಲರೂ ಬಸ್, ಸ್ವಂತ ವಾಹನಗಳನ್ನು ಬಳಕೆ ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಕ್ಷಭೇದ ಮರೆತು ಪ್ರಯಾಣ ದರ ಕಡಿತಗೊಳಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಬೇಕು.
ಸತೀಶ್, ನೆಲಮಂಗಲ



ವಿವೇಚನೆ ಇಲ್ಲದೆ, ಯಾವುದೇ ವೈಜ್ಞಾನಿಕ ಮಾನದಂಡಗಳಿಲ್ಲದೇ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದು ಖಂಡನೀಯ. ಸಾರ್ವಜನಿಕ ಸಾರಿಗೆಗಳ ಪ್ರಯಾಣ ದರ ಜನಸಾಮಾನ್ಯರ ಕೈಗೆಟಕುವಂತೆ ಇರಬೇಕು. ಆದರೆ, ಬಿಎಂಆರ್‌ಸಿಎಲ್ ಮೆಟ್ರೊ ಪ್ರಯಾಣ ದರ ಹೆಚ್ಚಿಸುವ ಮೂಲಕ ಮೆಟ್ರೊ ರೈಲನ್ನು ಬಿಳಿ ಆನೆಯನ್ನಾಗಿ ಮಾರ್ಪಡಿಸಿದೆ. ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು, ಪ್ರಯಾಣದ ಸಮಯ ಉಳಿತಾಯ ಮಾಡಲು ಮೆಟ್ರೊ ಸಹಕಾರಿ ಆಗಿತ್ತು. ಪ್ರಯಾಣ ದರ ಹೆಚ್ಚಿಸಿರುವುದರಿಂದ ಈ ಆಶಯಗಳಿಗೆ ಧಕ್ಕೆಯಾಗಿದೆ.
ಸುಘೋಷ ಸ. ನಿಗಳೆ, ಬನಸಿರಿ ವೇದಿಕೆ



ಮೆಟ್ರೊ ಪ್ರಯಾಣ ದರವನ್ನು ಅವೈಜ್ಞಾನಿಕವಾಗಿ ಹೆಚ್ಚಳ ಮಾಡಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗಿದೆ. ಮೆಟ್ರೊ ಎಂಬುದು ಜನ ಸೇವೆಗೆ ಇರಬೇಕು. ಆದರೆ ಬಿಎಂಆರ್‌ಸಿಎಲ್ ಲಾಭ ನಷ್ಟದ ಕುರಿತು ಲೆಕ್ಕ ಹಾಕುತ್ತಿರುವುದು ಖಂಡನೀಯ. ಸಂಬಂಧಪಟ್ಟವರು ಪರಿಷ್ಕೃತ ಮೆಟ್ರೊ ಪ್ರಯಾಣ ದರವನ್ನು ಕೈಬಿಟ್ಟು, ಹಿಂದಿನ ದರವನ್ನು ಮುಂದುವರೆಸಬೇಕು.
ಮರಿಸ್ವಾಮಿ ತಿಮ್ಮೇಗೌಡ, ಬಾಪೂಜಿನಗರ



ಜ್ಞಾನ ಭಾರತಿ ಮೆಟ್ರೊ ನಿಲ್ದಾಣದಿಂದ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣ ತಲುಪಲು ₹33 ಪ್ರಯಾಣ ದರವನ್ನು ಪಾವತಿಸುತ್ತಿದ್ದೆ. ಈಗ ₹60 ಪಾವತಿಸುತ್ತಿದ್ದೇನೆ. ಈ ಮಾರ್ಗದಲ್ಲಿ ಶೇಕಡ 97ರಷ್ಟು ಮೆಟ್ರೊ ಪ್ರಯಾಣ ದರ ಹೆಚ್ಚಿಸಿದ್ದಾರೆ. ಯಾವ ಆಧಾರದ ಮೇಲೆ ಹೆಚ್ಚಿಸಿದ್ದಾರೆ? ಬಿಎಂಆರ್‌ಸಿಎಲ್ ಲಾಭದ ಬಗ್ಗೆ ಚಿಂತನೆ ನಡೆಸದೇ ಸಾರ್ವಜನಿಕರಿಗೆ ಸೇವೆ ನೀಡುವ ಬಗ್ಗೆ ಚಿಂತನೆ ಮಾಡಬೇಕಿದೆ.
ಕಿರಣ್ ಕುಮಾರ್ ಕೆ.ಎಂ., ಜ್ಞಾನಭಾರತಿ

ಮಹಾಲಕ್ಷ್ಮಿ ಮೆಟ್ರೊ ನಿಲ್ದಾಣದಿಂದ ವಿಧಾನಸೌಧ ಮೆಟ್ರೊ ನಿಲ್ದಾಣಕ್ಕೆ ತಲುಪಲು ₹23.50 ಪಾವತಿಸುತ್ತಿದ್ದೆ. ಈಗ ಇದೇ ಮಾರ್ಗದ ಪ್ರಯಾಣ ದರವನ್ನು ₹40ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ನಾನು ಮೆಟ್ರೊ ತ್ಯಜಿಸಿ ದ್ವಿಚಕ್ರ ವಾಹನವನ್ನು ಬಳಕೆ ಮಾಡುತ್ತಿದ್ದೇನೆ. ಹಿಂದಿನ ಮೆಟ್ರೊ ದರವನ್ನು ಮುಂದುವರೆಸಬೇಕು. ಈ ಬಗ್ಗೆ ಜನಪ್ರತಿನಿಧಿಗಳು ಮಾತನಾಡದಿರುವುದು ದುರಂತ.
ಕರಿಬಸಪ್ಪ ಯು.ಎಂ., ನಂದಿನಿ ಲೇಔಟ್





ಆಡಳಿತ ನಡೆಸುವವರಿಗೆ ಹಾಗೂ ಅಧಿಕಾರಿ ವರ್ಗದವರಿಗೆ ಉಚಿತ ವಾಹನ ಸೌಲಭ್ಯವಿದೆ. ಹಣ ನೀಡಿ ರೈಲಿನಲ್ಲಿ, ಬಸ್‌ನಲ್ಲಿ ಪ್ರಯಾಣಿಸುವ ಜನಸಾಮಾನ್ಯರ ಕಷ್ಟ ಇವರಿಗೆ ಹೇಗೆ ಅರ್ಥವಾಗುತ್ತದೆ? ಬಿಎಂಆರ್‌ಸಿಎಲ್ ಮೆಟ್ರೊ ಪ್ರಯಾಣ ದರ ಹೆಚ್ಚಿಸಿರುವುದರಿಂದ ಜನ ಸಾಮಾನ್ಯರಿಗೆ ತೀವ್ರ ತೊಂದರೆಯಾಗುತ್ತಿದೆ. ಕೂಡಲೇ ಮೆಟ್ರೊ ಪ್ರಯಾಣ ದರ ಇಳಿಕೆ ಮಾಡದಿದ್ದರೆ ಜನ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ.
ಎ.ವಿ. ಶಾಮರಾವ್

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.
ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ಆನ್ವಯಿಕ ಸಂಶೋಧನೆ ವಿಚಾರಸಂಕಿರಣಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಆರ್‌ಐಟಿ) ನಡೆದ 'ಎಂಜಿನಿಯರಿಂಗ್ ವಿಜ್ಞಾನದಲ್ಲಿ ಆನ್ವಯಿಕ ಸಂಶೋಧನೆ' ವಿಚಾರಸಂಕಿರಣಕ್ಕೆ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಶಿವ ಉಮಾಪತಿ ಅವರು ಗುರುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಎಂಜಿನಿಯರಿಂಗ್ ವಿಜ್ಞಾನದಲ್ಲಿ ಅನ್ವಯಿಕ ಸಂಶೋಧನೆಯು ಪ್ರಾಯೋಗಿಕ ವಿಧಾನಗಳನ್ನು ಬಳಸಿಕೊಂಡು ಎಂಜಿನಿಯರಿಂಗ್ ಸಮಸ್ಯೆಗಳನ್ನು ಪರಿಹರಿಸುವ ಸಂಶೋಧನೆಯನ್ನು ಪ್ರತಿಪಾದಿಸುತ್ತದೆ. ಇದು ಮೆಕ್ಯಾನಿಕಲ್, ಸಿವಿಲ್, ಎಲೆಕ್ಟ್ರಿಕಲ್ ಹಾಗೂ ಕಂಪ್ಯೂಟರ್ ಎಂಜಿನಿಯರಿಂಗ್ ವಿಭಾಗಗಳಲ್ಲಿ ನಿರ್ದಿಷ್ಟ ಸವಾಲುಗಳನ್ನು ಎದುರಿಸಲು ಸಹಾಯಕವಾಗಲಿದೆ' ಎಂದು ಹೇಳಿದರು.



ವಿಚಾರಸಂಕಿರಣದಲ್ಲಿ 'ಐಸಿಎಆರ್‌ಇಎಸ್–2025 ಸ್ಮರಣ ಸಂಚಿಕೆ'ಯನ್ನು ಬಿಡುಗಡೆ ಮಾಡಲಾಯಿತು. ಆರ್‌ಐಟಿ ಪ್ರಾಂಶುಪಾಲ ಎನ್‌.ವಿ.ಆರ್‌. ನಾಯ್ಡು, ಶೈಕ್ಷಣಿಕ ಸಲಹೆಗಾರ ಕರಿಸಿದ್ಧಪ್ಪ, ಶಿವ ಉಮಾಪತಿ, ಎಂ.ಆರ್‌. ಸೀತಾರಾಮ್, ಕಾರ್ಯಕಾರಿ ನಿರ್ದೇಶಕ ಎಚ್‌.ವಿ. ಪಾರ್ಶ್ವನಾಥ, ಪ್ರಾಧ್ಯಾಪಕ ಎನ್‌.ಎಲ್‌. ರಮೇಶ್ ಉಪಸ್ಥಿತರಿದ್ದರು

ಆರ್‌ಐಟಿ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್ ಮಾತನಾಡಿ, ವಿಚಾರಸಂಕಿರಣಗಳು ವಿದ್ಯಾರ್ಥಿಗಳ ಜ್ಞಾನ ವೃದ್ಧಿಗೆ ಸಹಕಾರಿ ಆಗಲಿವೆ. ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದ ಜೊತೆಗೆ ಕೌಶಲ ಶಿಕ್ಷಣವನ್ನು ನೀಡಲಾಗುತ್ತದೆ. ಇದು ವಿದ್ಯಾರ್ಥಿಗಳಿಗೆ ಉದ್ಯೋಗ ಪಡೆದುಕೊಳ್ಳಲು ಅನುಕೂಲವಾಗಲಿದೆ' ಎಂದರು.

ವಿಚಾರಸಂಕಿರಣದಲ್ಲಿ 135 ಸಂಶೋಧಕರು, ಶೈಕ್ಷಣಿಕ ತಜ್ಞರು ತಮ್ಮ ವಿಚಾರಗಳನ್ನು ಮಂಡಿಸಿದರು.

'ಆನ್‌ಲೈನ್ ಜೂಜಿನ ವಿರುದ್ಧ ಕ್ರಮ ಕೈಗೊಳ್ಳಿ'

ಕೆಂಗೇರಿ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆನ್‌ಲೈನ್ ಜೂಜಿನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ ಎಂದು ಶಾಸಕ ಎಸ್‌.ಟಿ.ಸೋಮಶೇಖರ್ ಕಿಡಿಕಾರಿದರು.

ಕೆಂಗೇರಿ ಉಪನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಕಾಲೇಜಿನ ಸ್ಕೌಟ್ಸ್ ಅಂಡ್ ಗೈಡ್ಸ್, ಎನ್‌ಎಸ್‌ಎಸ್ ಘಟಕ, ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಹಾಗೂ ಸ್ವಾಭಿಮಾನಿ ಮಹಿಳಾ ಟ್ರಸ್ಟ್ ಸಹಯೋಗದೊಂದಿಗೆ ಆನ್‌ಲೈನ್ ಜೂಜಿನ ವಿರುದ್ಧ ಆಯೋಜಿಸಲಾಗಿದ್ದ ಕಾಲ್ನಡಿಗೆ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾಲೇಜು ಪ್ರಾಂಶುಪಾಲ ಲಕ್ಷ್ಮೀನಾರಾಯಣ, ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಲಕ್ಷ್ಮೀ ಪ್ರಭು, ವಿದ್ಯಾರ್ಥಿಗಳು ಇದ್ದರು.

ಚಿತ್ರಾವಳಿ



ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ 2023–24ರ ಲಾಭಾಂಶದಿಂದ ₹1 ಕೋಟಿ ದೇಣಿಗೆಯನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ನೀಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಸ್ಥೆಯ ಅಧ್ಯಕ್ಷ ಸತೀಶ್ ಕೃಷ್ಣ ಸೈಲ್ ಮತ್ತು ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರು ಚೆಕ್ ಹಸ್ತಾಂತರಿಸಿದರು. ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಅತೀಕುಲ್ಲಾ ಶರೀಫ್ ಮತ್ತು ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್‌. ನಂದೀಶ್ ಉಪಸ್ಥಿತರಿದ್ದರು



ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಬೆಂಗಳೂರಿನ ಟ್ರಯೋ ವರ್ಲ್ಡ್ ಅಕಾಡೆಮಿಯ ವ್ಯವಸ್ಥಾಪಕ ನಿರ್ದೇಶಕ ನವೀನ್ ಕೆ.ಎಂ ಅವರಿಗೆ 'ಬ್ಯುಸಿನೆಸ್ ವರ್ಲ್ಡ್ ಎಜುಕೇಶನ್ 40 ಅಂಡರ್ 40 ಪ್ರಶಸ್ತಿ'ಯನ್ನು ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು. ಹೈದರಾಬಾದ್‌ನ ಐಸಿಎಫ್‌ಎಐ ಗ್ರೂಪ್‌ನ ನಿರ್ದೇಶಕ ಡಾ. ಸುಧಾಕರ ರಾವ್, ಎನ್‌ಇಟಿಎಫ್ ಅಧ್ಯಕ್ಷ ಡಾ. ಅನಿಲ್ ಸಹಸ್ರಬುಧೆ, ಎಕ್ಸ್‌ಚೇಂಜ್–4 ಮೀಡಿಯಾ ಗ್ರೂಪ್ ಅಧ್ಯಕ್ಷ ಡಾ. ಅನುರಾಗ್ ಬಾತ್ರಾ, ಗುರುಗ್ರಾಮದ ಸನ್‌ಸಿಟಿ ವರ್ಲ್ಡ್ ಸ್ಕೂಲ್‌ನ ಪ್ರಾಂಶುಪಾಲರಾದ ರೂಪಾ ಚಕ್ರವರ್ತಿ ಉಪಸ್ಥಿತರಿದ್ದರು

ನಗರದಲ್ಲಿ ಇಂದು

ರಾಜ್ಯದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚಲು ಹೊರಟಿರುವ ರಾಜ್ಯ ಸರ್ಕಾರದ ನಿರ್ಧಾರದ ಕುರಿತು ಶಿಕ್ಷಣ ತಜ್ಞರ ದುಂಡುಮೇಜಿನ ಸಭೆ: ಆಯೋಜನೆ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಸ್ಥಳ: ಎಫ್‌ಕೆಸಿಸಿಐ ಸಭಾಂಗಣ, ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 10

ಗಿಳಿಯಾಲ್ ಜಯರಾಮ್ ಭಟ್ ಅವರ 'ರೂಪಾಂತರಿತ ನಿಸರ್ಗ' ಕಲಾಕೃತಿಗಳ ಪ್ರದರ್ಶನ: ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆಯ ಉದ್ಘಾಟನೆ: ಕೆ.ಎನ್. ಫಣೀಂದ್ರ, ಅತಿಥಿಗಳು: ಕೆ. ಅರವಿಂದ್ ಕಾಮತ್, ಪ್ರಶಾಂತ್ ವಿ.ಜಿ., ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ ಮೂರನೇ ಹಂತ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಾತೃಭಾಷಾ ದಿನದ ಅಂಗವಾಗಿ ಸಾಹಿತ್ಯ ವೇದಿಕೆ ಕಾರ್ಯಕ್ರಮ: ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಭಾಷಣಕಾರರು: ಅಜಯ್ ಕುಮಾರ್ ಸಿಂಗ್, ರೆಮಾ ಪ್ರಸನ್ನ ಪಿಶಾರೊಡಿ, ಪಾವಣ್ಣನ್, ಕಸ್ತೂರಿನಾಗ ಮುರಳಿ ಶಂಕರ್, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಾದೇಶಿಕ ಕಚೇರಿ, ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಅಂಗಳದಲ್ಲಿ ತಿಂಗಳ ಪುಸ್ತಕ 'ಪ್ರೊ.ಎಲ್. ಎಸ್. ಸಮಗ್ರ ಸಾಹಿತ್ಯಾವಲೋಕನ': ಮಾತನಾಡುವವರು: ರಾ.ನಂ. ಚಂದ್ರಶೇಖರ, ಉಪಸ್ಥಿತಿ: ವನಜಾಕ್ಷಿ ಹಳ್ಳಿಯವರ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಇ.ಬಿ. ಸಮುದಾಯ ಭವನದ ಎದುರು, ರಾಜಾಜಿನಗರ, ಬೆಳಿಗ್ಗೆ 11

ವಿಶ್ವ ತಾಯ್ನುಡಿ ದಿನಾಚರಣೆಯ ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಟಿ.ಎನ್. ಧ್ರುವಕುಮಾರ್, ಶಿವರಾಜ್, ಆರ್.ಎ. ಪ್ರಸಾದ್, ಆಯೋಜನೆ: ಕನ್ನಡ ಅನುಷ್ಠಾನ ಮಂಡಳಿ, ಸ್ಥಳ: ಡಾ. ರಾಜ್‌ಕುಮಾರ್ ತಾಂತ್ರಿಕ ಕುಟೀರದ ಎದುರು, ಕನ್ನಡ ಗಣಕ ಉಚಿತ ತರಬೇತಿ ಕೇಂದ್ರದ ಮುಂಭಾಗ, ಮಲ್ಲೇಶ್ವರ, ಬೆಳಿಗ್ಗೆ 11.30

ಮಾತೃಭಾಷಾ ದಿನ ಮತ್ತು ಕೆಂಪು ಪುಸ್ತಕ ದಿನ: 'ಕನ್ನಡದ ಮುಂದಿರುವ ಸವಾಲುಗಳು': ಪುರುಷೋತ್ತಮ ಬಿಳಿಮಲೆ, 'ಕನ್ನಡದಲ್ಲಿ ಓದುವ ಸಂಸ್ಕೃತಿ ಬೆಳೆಸುವ ಬಗೆ': ಬಸವರಾಜ ಕಲ್ಗುಡಿ, 'ಓದುವ ಖುಷಿ' ಮತ್ತು ಸಾಮಾಜಿಕ ಬದಲಾವಣೆ: ಜಿ.ಎನ್. ಮೋಹನ್, ಸ್ಥಳ: ಕ್ರಿಯಾ ಮಾಧ್ಯಮ ಪುಸ್ತಕ ಮಳಿಗೆ, ನೆಟ್ಟಕಲ್ಲಪ್ಪ ವೃತ್ತ, ಬಸವನಗುಡಿ, ಮಧ್ಯಾಹ್ನ 3.30ರಿಂದ



ಪುರುಷೋತ್ತಮ ಬಿಳಿಮಲೆ

'ಲಂಕೇಶರ ಗ್ರೀಕ್ ನಾಟಕಗಳ ಅನುವಾದಗಳು' ತಿಂಗಳ ಉಪನ್ಯಾಸ: ಸುರೇಶ್ ನಾಗಲಮಡಿಕೆ, ಪ್ರಸ್ತಾವನೆ: ನಾರಾಯಣ ಘಟ್ಟ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ, ಮಲ್ಲತ್ತಹಳ್ಳಿ, ಸಂಜೆ 5

'ಭಾರತ್ ಗಂಧರ್ವ ಯಾತ್ರಾ' 16ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: ಭಾರತೀಯ ಶಾಸ್ತ್ರೀಯ ಭಕ್ತಿ ಸಂಗೀತ ಗಾಯನ: ಸೂರ್ಯಗಾಯತ್ರಿ, ಪಿಟೀಲು: ಆದರ್ಶ ಅಜಯಕುಮಾರ್, ಮೃದಂಗ: ಪಿ.ವಿ. ಅನಿಲ್ ಕುಮಾರ್, ತಬಲಾ: ಪ್ರಶಾಂತ ಶಂಕರ, ಹೆಚ್ಚುವರಿ ತಾಳವಾದ್ಯ: ಶೈಲೇಶ್ ಮಾರರ್, ಗಾಯನ: ಆರ್ಯ ಅಂಬೇಕರ್, ತಬಲಾ: ಕಾತ್ರಿಕ್‌ಸ್ವಾಮಿ, ಹಾರ್ಮೋನಿಯಂ: ಮಹದೇವ, ಪಖ್ವಾಜ್: ಶುಭಂ, ಸೈಡ್ ರಿದಂ: ಸೂರ್ಯಕಾಂತ್, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 5.15ರಿಂದ

ಪುರಂದರ, ತ್ಯಾಗರಾಜರ ಸ್ಮರಣ ಸಂಗೀತೋತ್ಸವ: ಗಾಯನ: ಮಂಗಳಾ ಕಾರ್ತಿಕ್, ಎಸ್‌.ಎ. ಕಾರ್ತಿಕ್, ಕೊಳಲು ವಾದನ: ಅಮಿತ್ ನಾಡಿಗ್, ಆಯೋಜನೆ ಮತ್ತು ಸ್ಥಳ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.45ರಿಂದ

ಎಚ್.ಜಿ. ಶ್ರೀಧರ ಅವರ 'ಬಯಲು–ಅಲ್ಲಮನ ಕಥನ' ಪುಸ್ತಕ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಪುಸ್ತಕದ ಕುರಿತು: ಜಿ.ಬಿ. ಹರೀಶ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಅನೈತಿಕ ಸಂಬಂಧ ಆರೋಪ

ಕೊಲೆ ಆರೋಪಿಗೆ ಜಾಮೀನು ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪರಾಧಿಕ ನ್ಯಾಯಿಕ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುವಾಗ ಮತ್ತು ಪಾಟೀಸವಾಲಿನಲ್ಲಿ ಪ್ರಕರಣದ ಒಂದನೇ ಆರೋಪಿಯ ವಿರುದ್ಧದ ಸಾಕ್ಷ್ಯಗಳು ದುರ್ಬಲವಾಗಿವೆ' ಎಂಬ ಕಾನೂನಾತ್ಮಕ ತರ್ಕವನ್ನು ಮಾನ್ಯ ಮಾಡಿರುವ ಸೆಷನ್ಸ್ ನ್ಯಾಯಾಲಯ ಕೊಲೆ ಪ್ರಕರಣವೊಂದರ ಮೊದಲ ಆರೋಪಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಮೈಸೂರಿನ ರಿಯಲ್ ಎಸ್ಟೇಟ್ ಏಜೆಂಟ್ ಮಹಮ್ಮದ್ ಶಫಿ ಕೊಲೆ ಪ್ರಕರಣದ ಒಂದನೇ ಆರೋಪಿಯಾದ ಬೆಂಗಳೂರಿನ ಜಯನಗರದ ಅಫ್ಸರ್ ಖಾನ್ ಸಲ್ಲಿಸಿದ್ದ ನಿಯಮಿತ ಜಾಮೀನು



ಅರ್ಜಿಯನ್ನು 52ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶ ಗಂಗಪ್ಪ ಈರಪ್ಪ ಪಾಟೀಲ್ ಮಾನ್ಯ ಮಾಡಿದ್ದಾರೆ.

ಆರೋಪಿ ಪರ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರ, 'ದೋಷಾರೋಪ ಪಟ್ಟಿಯಲ್ಲಿ 80 ಸಾಕ್ಷಿಗಳನ್ನು ನಮೂದಿಸಲಾಗಿದೆ. ಈ ಸಾಕ್ಷಿಗಳ ವಿಚಾರಣೆ ಶೀಘ್ರ ಮುಗಿಯುವ ಸಾಧ್ಯತೆಯಿಲ್ಲ. ಅಂತೆಯೇ, ಮೊದಲ ಆರೋಪಿಯ ಅಪರಾಧವನ್ನು ದೃಢೀಕರಿಸುವ ಸಾಕ್ಷ್ಯಗಳು ದುರ್ಬಲವಾಗಿವೆ. ಹಾಗಾಗಿ, ಎರಡೂವರೆ ವರ್ಷಗಳಿಂದ ಜೈಲಿನಲ್ಲಿರುವ ಆರೋಪಿಯನ್ನು ನ್ಯಾಯಾಂಗ ಬಂಧನದಲ್ಲಿ ವಿಚಾರಣಾಧೀನ ಕೈದಿಯಾಗಿ ಮುಂದುವರಿಸುವುದು ಕಾನೂನಿಗೆ ವಿರೋಧವಾದುದು' ಎಂಬ ವಾದಾಂಶವನ್ನು ನ್ಯಾಯಾಲಯ ಪುರಸ್ಕರಿಸಿದೆ.

ಪ್ರಕರಣವೇನು?: 'ಕೊಲೆಯಾದ ಮಹಮ್ಮದ್ ಶಫಿ ಮತ್ತು ಅಫ್ಸರ್ ಖಾನ್ ಜೊತೆಯಾಗಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಏತನ್ಮಧ್ಯೆ, ತನ್ನ ಪತ್ನಿ ತಸ್ಲಿಮಾ ಬಾನು ಜೊತೆ ಅಫ್ಸರ್ ಖಾನ್ ಅನೈತಿಕ ಸಂಬಂಧ ಹೊಂದಿದ್ದಾನೆ ಎಂಬ ಬಗ್ಗೆ ಮಹಮ್ಮದ್ ಶಫಿ ಅಫ್ಸರ್ ಖಾನ್ ಜೊತೆ ವಾಗ್ವಾದ ನಡೆಸಿದ್ದರು. ಪರಿಣಾಮ ಸದ್ದುಗುಂಟೆಪಾಳ್ಯ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ 2021ರ ಮಾರ್ಚ್ 19ರಂದು ಮಹಮ್ಮದ್ ಶಫಿ ಕೊಲೆ ನಡೆದಿತ್ತು' ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಪ್ರಕರಣದಲ್ಲಿ ತಸ್ಲಿಮಾ ಬಾನು ಅವರನ್ನು ಎರಡನೇ ಆರೋಪಿಯನ್ನಾಗಿ ಮಾಡಿ, ಒಟ್ಟು 10 ಜನರ ವಿರುದ್ಧ ಪೊಲೀಸರು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಈ ಮೊದಲು ಅಫ್ಸರ್ ಖಾನ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಸೆಷನ್ಸ್ ನ್ಯಾಯಾಲಯ ಹಾಗೂ ಹೈಕೋರ್ಟ್ ತಿರಸ್ಕರಿಸಿದ್ದವು. ಏತನ್ಮಧ್ಯೆ, ಆರೋಪಿಗೆ ವೈದ್ಯಕೀಯ ಚಿಕಿತ್ಸೆಯ ಆಧಾರದಲ್ಲಿ ಸೆಷನ್ಸ್ ನ್ಯಾಯಾಲಯ ಮೂರು ತಿಂಗಳ ಕಾಲ ನಿಯಮಿತ ಜಾಮೀನು ನೀಡಿತ್ತು.

ರಾತ್ರಿ ವೇಳೆ ವಿದ್ಯುತ್ ಪೂರೈಕೆ ಮೊಸಳೆ ತಂದು ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ಅಫಜಲಪುರ (ಕಲಬುರಗಿ ಜಿಲ್ಲೆ): ಹೊಲದಲ್ಲಿದ್ದ ಮೊಸಳೆಯನ್ನು ಸೆರೆ ಹಿಡಿದ ರೈತರು ಅಫಜಲಪುರ ತಾಲ್ಲೂಕಿನ ಗೊಬ್ಬೂರ (ಬಿ) ಗ್ರಾಮದಲ್ಲಿರುವ ಜೆಸ್ಕಾಂನ ಶಾಖಾ ಕಚೇರಿಗೆ ತಂದು ಗುರುವಾರ ಪ್ರತಿಭಟಿಸಿದರು. ರಾತ್ರಿ ವೇಳೆ ಹೊಲಗಳಿಗೆ ವಿದ್ಯುತ್ ನೀಡುತ್ತಿರುವುದರಿಂದ ಜೀವಭಯದಿಂದಲೇ ಬೆಳೆಗೆ ನೀರು ಹಾಯಿಸಬೇಕಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಕಲಬುರಗಿ ತಾಲ್ಲೂಕಿನ ಗರೂರ ಗ್ರಾಮದ ಭೀಮಾ ನದಿಯ ಸಮೀಪದಲ್ಲಿರುವ ರೈತ ಲಕ್ಷ್ಮಣ ಪೂಜಾರಿ ಅವರು ನೀರು ಹಾಯಿಸುತ್ತಿದ್ದ ವೇಳೆ ಮೊಸಳೆ ಪ್ರತ್ಯಕ್ಷವಾಗಿತ್ತು. ಮೊಸಳೆಯನ್ನು ಹಗ್ಗದಿಂದ ಕಟ್ಟಿ ಎತ್ತಿನ ಬಂಡಿಗೆ ಹಾಕಿಕೊಂಡು ಜೆಸ್ಕಾಂ ಕಚೇರಿಗೆ ರೈತರು ಬಂದರು. ರಾತ್ರಿ ವೇಳೆ ತ್ರಿಫೇಸ್ ವಿದ್ಯುತ್ ನೀಡುತ್ತಿರುವುದರಿಂದ ಮೊಸಳೆ, ಹಾವುಗಳ ದಾಳಿಗೆ ರೈತರು ಸಿಲುಕಿಕೊಳ್ಳಬೇಕಿದೆ. ಬೆಳಗಿನಜಾವ 4ರ ಬದಲು ಬೆಳಿಗ್ಗೆ 6ರಿಂದ ತ್ರಿಫೇಸ್ ವಿದ್ಯುತ್ ಪೂರೈಸಬೇಕು ಎಂದು ಒತ್ತಾಯಿಸಿದರು.

ರೈತರು ಮೊಸಳೆ ತಂದ ವಿಚಾರವನ್ನು ತಿಳಿದ ದೇವಲಗಾಣಗಾಪುರ ಠಾಣೆಯ ಪಿಎಸ್ಐ ರಾಹುಲ್ ಪವಾಡೆ ಅವರು ಸ್ಥಳಕ್ಕೆ ಬಂದು ರೈತರ ಮನವೊಲಿಸಿ, ಅರಣ್ಯ ಅಧಿಕಾರಿಗಳ ಸುಪರ್ದಿಗೆ ಮೊಸಳೆಯನ್ನು ಒಪ್ಪಿಸಿದರು.

ನಂತರ ಅರಣ್ಯಾಧಿಕಾರಿಗಳು ಮೊಸಳೆಯನ್ನು ಕಲಬುರಗಿಯಲ್ಲಿರುವ ಕಿರು ಮೃಗಾಲಯಕ್ಕೆ ತಂದರು.

‘ಮೊಸಳೆಯು ಸುಮಾರು 10 ವರ್ಷ ಪ್ರಾಯದ್ದಾಗಿದ್ದು, ಆರೋಗ್ಯವಾಗಿದೆ. ಮೊಸಳೆಗೆ ರೈತರು ಯಾವುದೇ ತೊಂದರೆ ಮಾಡಿಲ್ಲ’ ಎಂದು ವಲಯ ಅರಣ್ಯಾಧಿಕಾರಿ ಸಂಜೀವಕುಮಾರ್ ಚವ್ಹಾಣ ‘ಪ್ರಜಾವಾಣಿ’ಗೆ ತಿಳಿಸಿದರು.

ಪರೀಕ್ಷಾ ಅಕ್ರಮ ತಡೆಗೆ ಕ್ರಮ

ಎಸ್ಎಸ್ಎಲ್‌ಸಿ, ದ್ವಿತೀಯ ಪಿಯು ಪರೀಕ್ಷೆಗೆ 16.09 ಲಕ್ಷ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಮಾರ್ಚ್ 1ರಿಂದ, ಎಸ್ಎಸ್ಎಲ್‌ಸಿ ಪರೀಕ್ಷೆ ಮಾರ್ಚ್ 21ರಿಂದ ಆರಂಭವಾಗಲಿದ್ದು, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ, ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಎಸ್ಎಸ್ಎಲ್‌ಸಿಗೆ 8.96 ಲಕ್ಷ, ಪಿಯು ಪರೀಕ್ಷೆಗೆ 7.13 ಲಕ್ಷ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ನಕಲು ತಡೆ ಹಾಗೂ ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಹಾಕಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷಾ ಕೊಠಡಿಗಳಲ್ಲಿ ವೆಬ್‌ಕಾಸ್ಟಿಂಗ್ ಜತೆಗೆ, ಹೊರಗೆ ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಇರಲಿದೆ.



ಕಲಿಕೆಯಲ್ಲಿ ಹಿಂದುಳಿದ 5 ಮತ್ತು 8ನೇ ತರಗತಿ ಮಕ್ಕಳನ್ನು ಅನುತ್ತೀರ್ಣಗೊಳಿಸುವ ಕೇಂದ್ರದ ಆದೇಶ ಕುರಿತು ಚರ್ಚಿಸಿ, ನಿರ್ಧರಿಸಲಾಗುವುದು

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ವಿದ್ಯಾರ್ಥಿಗಳಲ್ಲಿ ವೆಬ್‌ಕಾಸ್ಟಿಂಗ್ ಕುರಿತು ಜಾಗೃತಿ ಮೂಡಿಸಲಾಗಿದೆ. ಈ ಬಾರಿ ಎಲ್ಲರೂ ಧೈರ್ಯವಾಗಿ ಪರೀಕ್ಷೆ ಬರೆಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

15 ಸಾವಿರ ಶಿಕ್ಷಕ ನೇಮಕ: ಸರ್ಕಾರಿ ಶಾಲೆಗಳಿಗೆ 15 ಶಿಕ್ಷಕರ ನೇಮಕ ಹಾಗೂ 5 ಸಾವಿರ ಕೊಠಡಿ, ಶೌಚಾಲಯಗಳ ನಿರ್ಮಾಣಕ್ಕೆ ಅಗತ್ಯ ಅನುದಾನ ಒದಗಿಸಲು ಮುಖ್ಯಮಂತ್ರಿಗೆ ಮನವಿ ಮಾಡಲಾಗಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಘೋಷಿಸಿದ್ದ 8 ಸಾವಿರ ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯ ಮುಕ್ತಾಯ ಹಂತಕ್ಕೆ ತಲುಪಿದೆ ಎಂದು ಮಾಹಿತಿ ನೀಡಿದರು.

ಸರ್ಕಾರಿ ಮಕ್ಕಳಿಗೆ ವಾರದಲ್ಲಿ ನಾಲ್ಕು ದಿನ ಮೊಟ್ಟೆ ವಿತರಣೆಗೆ ಅಜೀಂ ಪ್ರೇಮ್‌ಜೀ ಫೌಂಡೇಷನ್ ನೆರವು ನೀಡಿದೆ. ಅದೇ ರೀತಿ ಸಿಎಸ್‌ಆರ್ ನಿಧಿ ಬಳಸಿಕೊಂಡು ಸರ್ಕಾರಿ ಶಾಲೆಗಳ ಅಭಿವೃದ್ಧಿ ಮಾಡಲಾಗುವುದು. ಜತೆಗೆ ಸರ್ಕಾರದ ಅನುದಾನವನ್ನೂ ಸದ್ಬಳಕೆ ಮಾಡಿಕೊಳ್ಳಲಾಗುವುದು ಎಂದರು.

ಉತ್ತೀರ್ಣತೆಯ ಕನಿಷ್ಠ ಅಂಕ ಶೇ 35

2024ಕ್ಕೂ ಹಿಂದೆ ಇದ್ದಂತೆ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಕನಿಷ್ಠ ಅಂಕವನ್ನು ಶೇ 35ಕ್ಕೆ ನಿಗದಿ ಮಾಡಲಾಗಿದೆ.

ವಿದ್ಯಾರ್ಥಿ ಮೂರು ವಿಷಯಗಳಲ್ಲಿ 35 ಅಂಕ ಪಡೆದಿದ್ದು, ಉಳಿದ ಮೂರು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೆ ಪ್ರತಿ ವಿಷಯದಲ್ಲೂ ಗರಿಷ್ಠ 10 ಕೃಪಾಂಕ ನೀಡಿ ತೇರ್ಗಡೆ ಮಾಡಲಾಗುತ್ತದೆ. ಉತ್ತೀರ್ಣದ ಕನಿಷ್ಠ ಮಾನದಂಡ ಹಿಂದಿನಂತೆ ಶೇ 35 ಅಂಕ ಇರುತ್ತದೆ ಎಂದು ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ವೆಬ್‌ಕಾಸ್ಟಿಂಗ್ ಪರಿಚಯಿಸಿದ ಪರಿಣಾಮ 2024ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಫಲಿತಾಂಶ ಕುಸಿದಿತ್ತು. ಹಾಗಾಗಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೃಪಾಂಕ ಪಡೆಯಲು ಇದ್ದ ಶೇ 35 ಅರ್ಹ ಅಂಕಗಳನ್ನು 25ಕ್ಕೆ ಇಳಿಸಿ, ಗರಿಷ್ಠ 20 ಕೃಪಾಂಕ ನೀಡಲಾಗಿತ್ತು.

ಸುದ್ದಿ 2 ನಿಮಿಷ

‘ಪ್ರಾದೇಶಿಕ ಅಸಮತೋಲನ: ಸೆಪ್ಟೆಂಬರ್‌ನಲ್ಲಿ ಸರ್ಕಾರಕ್ಕೆ ವರದಿ’

ಬೆಳಗಾವಿ: ‘ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕ ನಿರೀಕ್ಷೆಯಷ್ಟು ಅಭಿವೃದ್ಧಿ ಆಗಿಲ್ಲ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿ ಯಾವ ರೀತಿ ಅನುಷ್ಠಾನವಾಗಿದೆ ಎಂಬುದನ್ನು ಅಧ್ಯಯನ ನಡೆಸಿ, ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೆಪ್ಟೆಂಬರ್‌ನಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು’ ಎಂದು ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ ಪ್ರೊ.ಎಂ.ಗೋವಿಂದರಾವ್ ಅವರು ಹೇಳಿದರು.



‘ನಾಲ್ಕು ಜಿಲ್ಲೆಗಳಲ್ಲಿ ತಲಾ ಆದಾಯ, ರಾಜ್ಯದ ಒಟ್ಟಾರೆ ತಲಾ ಆದಾಯಕ್ಕಿಂತ ಹೆಚ್ಚಿದೆ. ಬೆಂಗಳೂರಿನ ತಲಾ ಆದಾಯವೂ ಹೆಚ್ಚಿದೆ. ಉಳಿದ ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಗತಿ ಕಂಡುಬಂದಿಲ್ಲ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ವರದಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜಕಾರಣಿಗಳು ಮತ್ತು ವಿವಿಧ ಕ್ಷೇತ್ರಗಳ ಪ್ರತಿನಿಧಿಗಳ ಅಭಿಪ್ರಾಯ ಪಡೆಯುತ್ತಿದ್ದೇವೆ. ಕಲಬುರಗಿ, ಬೆಳಗಾವಿಯಲ್ಲಿ ವಿಭಾಗ ಮಟ್ಟದ ಸಭೆ ಮಾಡಿದ್ದೇವೆ. ಮೈಸೂರು, ಬೆಂಗಳೂರಿನಲ್ಲಿ ವಿಭಾಗಮಟ್ಟದ ಸಭೆ ನಡೆದ ನಂತರ, ಜಿಲ್ಲಾಮಟ್ಟದಲ್ಲೂ ಸಭೆ ಮಾಡುತ್ತೇವೆ’ ಎಂದು ತಿಳಿಸಿದರು.

‘ಎಮ್ವಿ ಎನರ್ಜಿ: ₹15 ಸಾವಿರ ಕೋಟಿ ಹೂಡಿಕೆ’

ಬೆಂಗಳೂರು: ‘ಎಮ್ವಿ ಎನರ್ಜಿ ಕಂಪನಿಯು ತನ್ನ ಉತ್ಪಾದನಾ ಘಟಕ ಆರಂಭಿಸಲು ಹಂತಹಂತವಾಗಿ ₹15 ಸಾವಿರ ಕೋಟಿ ಹೂಡಲು ತೀರ್ಮಾನಿಸಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಉನ್ನತ ಗುಣಮಟ್ಟದ ಸೋಲಾರ್ ಫೋಟೋವೋಲ್ಟಾಯಿಕ್ ಕೋಶಗಳು ಮತ್ತು ಮಾಡ್ಯೂಲ್ ಉತ್ಪಾದನೆಗೆ ಹೆಸರಾಗಿರುವ ಬೆಂಗಳೂರಿನ ಕಂಪನಿಯ ಪ್ರತಿನಿಧಿಗಳ ಜತೆ ಸಚಿವರು ತಮ್ಮ ಕಚೇರಿಯಲ್ಲಿ ಗುರುವಾರ ಚರ್ಚೆ ನಡೆಸಿದರು.

‘ಈ ಕಂಪನಿಯು ಬೆಂಗಳೂರಿನ ಐಟಿಐಆರ್ ವಲಯದಲ್ಲಿ 120 ಎಕರೆ ಜಮೀನು ಕೇಳಿದೆ. ಮೊದಲ ಹಂತದಲ್ಲಿ ₹5 ಸಾವಿರ ಕೋಟಿ ಹೂಡಿಕೆ ಮಾಡಲಿದ್ದು, 5 ಗಿಗಾವಾಟ್ ಸಾಮರ್ಥ್ಯದ ಉತ್ಪಾದನೆ ಮಾಡಲಿದೆ. ಒಟ್ಟು ಯೋಜನೆಯಿಂದ 10 ಸಾವಿರ ಉದ್ಯೋಗ ಸೃಷ್ಟಿ ಆಗಲಿದೆ’ ಎಂದು ಸಚಿವರು ತಿಳಿಸಿದರು.

‘ಸೌರ ವಿದ್ಯುತ್ ಕ್ಷೇತ್ರದಲ್ಲಿ ಬೇಕಾಗುವ ಅಲ್ಯೂಮಿನಿಯಂ ಫ್ರೇಮ್, ಗಾಜು, ಇಪಿಇ, ಜೆಬಿ, ರಿಬ್ಬನ್ ಮತ್ತು ವೇಫರ್ ಉತ್ಪಾದನೆಗೆ ಈ ಕಂಪನಿ ಹೆಸರಾಗಿದೆ. ಇದರಿಂದ ಪರಿಸರ ಸ್ನೇಹಿ ಇಂಧನ ಮತ್ತು ಸುಸ್ಥಿರ ಅಭಿವೃದ್ಧಿ ಎರಡನ್ನೂ ಸಾಧಿಸಬಹುದು. ಎಮ್ವಿ ಎನರ್ಜಿ ಕಂಪನಿ ನಿರ್ದೇಶಕ ಸುಹಾಸ್ ದೊಂಥಿ, ವಾಣಿಜ್ಯ ವಹಿವಾಟು ವಿಭಾಗದ ಮುಖ್ಯಸ್ಥ ಸುಮಂತ್ ದೊಂಥಿ ಚರ್ಚೆಯಲ್ಲಿ ಭಾಗವಹಿಸಿದರು’ ಎಂದರು.

ಇತ್ತೀಚೆಗೆ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕಂಪನಿ ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು.



ಗಾಳಿಪಟ ಉತ್ಸವ... ಹುಬ್ಬಳ್ಳಿಯ ಹೊರವಲಯದ ಕುಸಗಲ್ ರಸ್ತೆಯ ಮೈದಾನದಲ್ಲಿ ಗುರುವಾರ ನಡೆದ ಗಾಳಿಪಟ ಉತ್ಸವದಲ್ಲಿ ಬಣ್ಣಬಣ್ಣದ ಗಾಳಿಪಟಗಳು ಬಾನಂಗಳದಲ್ಲಿ ಹಾರಾಡಿದವು

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ತರಬೇತಿ ಇಲ್ಲದೆಯೂ ಬಡ್ತಿ

ಆರ್‌ಟಿಒ ಇಲಾಖೆಯಲ್ಲಿ ತರಬೇತಿ ಪಡೆಯದ ಅಧಿಕಾರಿಗಳು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಸಂಚಾರ ನಿಯಮದ ತರಬೇತಿ ಇಲ್ಲದಿದ್ದರೂ, ಪ್ರಭಾವ ಬಳಸಿಕೊಂಡ ಕೆಲವು ಅಧಿಕಾರಿಗಳು ಸಾರಿಗೆ ಇಲಾಖೆಯಲ್ಲಿ ಪ್ರಮುಖ ಹುದ್ದೆ ನಿರ್ವಹಿಸುತ್ತಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಸಾರಿಗೆ ಇಲಾಖೆಯಲ್ಲಿ ಸಮವಸ್ತ್ರ ಧರಿಸುವ ಹುದ್ದೆಗಳಿಗೆ ನೇಮಕವಾದವರು ಅಥವಾ ಬಡ್ತಿ ಪಡೆದವರು ಶಿಸ್ತು, ಸಂಚಾರ ನಿಯಮ ತಿಳಿದುಕೊಳ್ಳುವುದಕ್ಕಾಗಿ ಮೂರು ತಿಂಗಳ ಪೊಲೀಸ್ ತರಬೇತಿ ಪಡೆಯಬೇಕು. ಈ ನಿಯಮ ‘ಪ್ರಭಾವ’ ಹೊಂದಿರುವವರಿಗೆ ಅನ್ವಯವಾಗುತ್ತಿಲ್ಲ ಎಂಬುದು ಅಸಮಾಧಾನಕ್ಕೆ ಕಾರಣವಾಗಿದೆ.

ಶಿವಮೊಗ್ಗದ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಯಲ್ಲಿ ಇತ್ತೀಚೆಗೆ ಅಧಿಕಾರಿಗಳೇ ಹೊಡೆದಾಡಿಕೊಂಡಿದ್ದು, ದೂರು, ಪ್ರತಿದೂರುಗಳು ದಾಖಲಾಗಿದ್ದವು. ಈ ಪ್ರಕರಣದ ಆರೋಪಿಗಳಲ್ಲಿ ಮೋಟಾರು ವಾಹನ ಹಿರಿಯ ನಿರೀಕ್ಷಕ ಮಲ್ಲೇಶಪ್ಪ ಅವರೂ ಒಬ್ಬರು. ಅವರಿಗೂ ಪೊಲೀಸ್ ತರಬೇತಿಯಾಗಿಲ್ಲ ಎಂಬುದು ಈ ಹಲ್ಲೆ ಪ್ರಕರಣದ ಬಳಿಕ ಗೊತ್ತಾಗಿದೆ.

ಇದಲ್ಲದೇ ಕಾರವಾರ, ಸಾಗರ, ಬೀದರ್, ಹಾಸನ, ಹುಣಸೂರು, ಜಯನಗರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ನಿರೀಕ್ಷಕರಾಗಿ, ಹಿರಿಯ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ರವಿ, ವಾಸುದೇವ, ಮಲಕರಿ ಸಿದ್ಧ ಬಿರಾದಾರ, ಪದ್ಮನಾಭ, ಮಹೇಶ್, ಶಿವಸ್ವಾಮಿ ಸಹಿತ ಅನೇಕರು ಪೊಲೀಸ್ ತರಬೇತಿಯನ್ನು ಪಡೆದಿಲ್ಲ ಎಂದು ಸಾರಿಗೆ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಪರಿಣಾಮಕಾರಿ ಕಾನೂನು ಜಾರಿ ಕಾರ್ಯತಂತ್ರಗಳು, ತುರ್ತು ಸಂದರ್ಭಗಳಲ್ಲಿ ಸಮನ್ವಯ ಮತ್ತು ರಸ್ತೆ ಸುರಕ್ಷತಾ ಸಮಸ್ಯೆಗಳನ್ನು ನಿಭಾಯಿಸುವುದನ್ನು ಪೊಲೀಸ್ ತರಬೇತಿಯು ಕಲಿಸಿಕೊಡುತ್ತದೆ. ಸಾರಿಗೆ ನೀತಿಗಳು, ನಿಯಮಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಸಾರಿಗೆ ವ್ಯವಸ್ಥೆಯ ಉತ್ತಮ ನಿರ್ವಹಣೆಗಾಗಿ ತರಬೇತಿ ಸಹಕಾರಿಯಾಗಿದೆ. ಜೊತೆಗೆ ಶಿಸ್ತು ಪಾಲನೆಯನ್ನು ಕೂಡ ಕಲಿಯುವುದರಿಂದ ಕಚೇರಿಗಳಲ್ಲಿ ಹಿರಿಯ ಅಧಿಕಾರಿಗಳು ಕಿರಿಯರೊಂದಿಗೆ, ಕಿರಿಯ ಅಧಿಕಾರಿಗಳು ಹಿರಿಯರೊಂದಿಗೆ ಹೇಗೆ ನಡವಳಿಕೆ ಹೊಂದಿರಬೇಕು ಎಂಬುದು ಗೊತ್ತಾಗುತ್ತದೆ. ಆದರೆ, ಅನೇಕ ನಿರೀಕ್ಷಕರು, ಹಿರಿಯ ನಿರೀಕ್ಷಕರು ಪ್ರಭಾವ ಬಳಸಿ ತರಬೇತಿಯಿಂದ ತಪ್ಪಿಸಿಕೊಂಡಿದ್ದಾರೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯೊಬ್ಬರು ದೂರಿದರು.

ವರದಿ ತರಿಸುತ್ತೇನೆ: ‘ನಾನು ಸಾರಿಗೆ ಆಯುಕ್ತನಾಗಿ ಅಧಿಕಾರ ವಹಿಸಿಕೊಂಡ ಬಳಿಕ ಯಾರೂ ತರಬೇತಿಯಿಂದ ತಪ್ಪಿಸಿಕೊಂಡಿಲ್ಲ. ಹಿಂದೆ ತಪ್ಪಿಸಿಕೊಂಡವರ ಬಗ್ಗೆ ವರದಿ ತರಿಸಿ ಪರಿಶೀಲನೆ ನಡೆಸಲಾಗುವುದು’ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ಪ್ರತಿಕ್ರಿಯಿಸಿದ್ದಾರೆ.

ಎಲ್ಲರಿಗೂ ಕಡ್ಡಾಯ ತರಬೇತಿ

‘ನಮ್ಮ ಸರ್ಕಾರ ಬರುವ ಮೊದಲು ಇವೆಲ್ಲ ನಡೆದಿವೆ. ಈಗ ಎಲ್ಲರಿಗೂ ತರಬೇತಿ ನೀಡಲಾಗುತ್ತಿದೆ. ಹೊಸಬರಿಗಷ್ಟೇ ಅಲ್ಲ, ಹಿಂದೆ ತರಬೇತಿ ಪಡೆಯದದವರನ್ನೂ ತರಬೇತಿಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸಿ.ಎಂ ಸಹಿ ನಕಲು ಮಾಡಿ ವಂಚನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಸರ್ಕಾರಿ ಅಧಿಕಾರಿಗಳ ಸಹಿನಕಲು ಮಾಡಿ, ನಕಲಿ ನೇಮಕಾತಿ ಆದೇಶ ಸೃಷ್ಟಿಸಿ ₹31 ಲಕ್ಷ ವಂಚಿಸಿದ ಆರೋಪದ ಮೇರೆಗೆ ತಾಲ್ಲೂಕಿನ ತಾವರೆಗೆರೆ ನಿವಾಸಿ ಎಚ್.ಸಿ.ವೆಂಕಟೇಶ್ ಎಂಬುವರ ವಿರುದ್ಧ ನಗರದ ಪೂರ್ವ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಂಡ್ಯ ಗಾಂಧಿನಗರದ ನೇತ್ರಾವತಿ ಮತ್ತು ಕಲ್ಲಹಳ್ಳಿಯ ಮಲ್ಲೇಶ್ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ‘ಆರೋಪಿಯು ವಿಧಾನಸೌಧದಲ್ಲಿ ಉದ್ಯೋಗದಲ್ಲಿರುವುದಾಗಿ ನಂಬಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕೆಲಸ ಕೊಡಿಸುವುದಾಗಿ ಒಬ್ಬರಿಂದ ₹12.24 ಲಕ್ಷ ಮತ್ತು ವಾಣಿಜ್ಯ ಇಲಾಖೆಯಲ್ಲಿ ಹಿರಿಯ ಅಧಿಕಾರಿ ಕೆಲಸ ಕೊಡಿಸುವುದಾಗಿ ಇನ್ನೊಬ್ಬರಿಂದ ₹19 ಲಕ್ಷ ಪಡೆದು ವಂಚಿಸಿದ್ದಾನೆ’ ಎಂದು ದೂರಲಾಗಿದೆ.

‘ಚಿತ್ರನಟ ದರ್ಶನ್ ಗೊತ್ತು, ಅವರೇ ನನಗೆ ಕಾರು ಕೊಟ್ಟಿದ್ದಾರೆ. ಸಚಿವ ಜಮೀರ್ ಅಹಮದ್ ಗೊತ್ತು ಎಂದು ಹಲವರನ್ನು ಯಾಮಾರಿಸಿದ್ದಾನೆ. ವಿಧಾನ ಸೌಧದಲ್ಲಿ ಸಚಿವರು, ಅಧಿಕಾರಿಗಳ ಕೊಠಡಿಗಳನ್ನು ತೋರಿಸಿ, ಸರ್ಕಾರಿ ಕಚೇರಿಗಳಿಗೆ ಕರೆಸಿ ವಂಚಿಸಿದ್ದಾನೆ’ ಎಂದು ಆರೋಪಿಸಲಾಗಿದೆ.

ಕೊಡಗು: ವರ್ಷದ ಮೊದಲ ಮಳೆ



ಮಡಿಕೇರಿ ತಾಲ್ಲೂಕಿನ ಕಕ್ಕಬ್ಬೆಯಲ್ಲಿ ಗುರುವಾರ ಮಳೆ ಸುರಿಯಿತು

ನಾಪೋಕ್ಲು (ಕೊಡಗು ಜಿಲ್ಲೆ): ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಕಕ್ಕಬ್ಬೆ ಗ್ರಾಮದಲ್ಲಿ ಗುರುವಾರ ವರ್ಷದ ಮೊದಲ ಮಳೆ ಸುರಿಯಿತು. ಸಂಜೆ ವೇಳೆಗೆ ದಟ್ಟವಾದ ಕಾರ್ಮೋಡಗಳು ಕವಿದು, ಗುಡುಗು ಸಹಿತ ಮಳೆಯಾಯಿತು.

ಬೇಸಿಗೆಗೂ ಮುನ್ನವೇ ವಿಪರೀತ ಸುಡುತ್ತಿದ್ದ ಬಿಸಿಲಿಗೆ ಹಾಗೂ ಕಾಫಿ ಹೂ ಅರಳಿಸಲು ಕೆಲವು ಬೆಳೆಗಾರರು ತುಂತುರು ನೀರಾವರಿ ಮೊರೆ ಹೋಗಿದ್ದರು. ಸದ್ಯ, ಈ ಭಾಗದಲ್ಲಿ ಸುರಿದ ಮಳೆಯು ಅವರಲ್ಲಿ ಸಂತಸ ಉಕ್ಕಿಸಿದೆ. ಆದರೆ, ಕಾಫಿ ಕೊಯ್ಲು ಇನ್ನೂ ಕೆಲವೆಡೆ ಮುಗಿದಿಲ್ಲ. ಕೊಯ್ಲಿನಲ್ಲಿ ನಿರತರಾಗಿರುವ ರೈತರಿಗೆ ಮಳೆಯಿಂದ ತೊಂದರೆ ಆಗಲಿದೆ.

‘ಏಪ್ರಿಲ್ – ಮೇ ಮಳೆ ಸಾಧ್ಯತೆ’

ಒಂದನೇ ಪುಟದಿಂದ...

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಈ ಹಿಂದಿನ ವರ್ಷಗಳಲ್ಲಿ ಕೈಗೊಂಡ ಕ್ರಮಗಳ ಜೊತೆಗೆ, ಕೈಗೊಳ್ಳಬಹುದಾದ ಹೆಚ್ಚುವರಿ ಕ್ರಮಗಳ ಕುರಿತು ಪೂರ್ವ ಸಿದ್ಧತೆ ಮಾಡಿಕೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೃಷ್ಣ ಬೈರೇಗೌಡ ಸೂಚಿಸಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸಭೆಯಲ್ಲಿದ್ದರು.

ಅರಣ್ಯ ಪಡೆ ಮುಖ್ಯಸ್ಥರಾಗಿ ಮೀನಾಕ್ಷಿ ನೇಗಿ



ಬೆಂಗಳೂರು: ಹುದ್ದೆ ನಿರೀಕ್ಷೆಯಲ್ಲಿದ್ದ ಐಎಫ್‌ಎಸ್ ಅಧಿಕಾರಿ ಮೀನಾಕ್ಷಿ ನೇಗಿ ಅವರನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ (ಅರಣ್ಯ ಪಡೆ ಮುಖ್ಯಸ್ಥರು) ನೇಮಿಸಿ ರಾಜ್ಯ ಸರ್ಕಾರ ಗುರುವಾರ ಅಧಿಸೂಚನೆ ಹೊರಡಿಸಿದೆ. ಕರ್ನಾಟಕದಲ್ಲಿ ಹುದ್ದೆಗೆ ಏರಿದ ಮೊದಲ ಮಹಿಳೆ.

ಉತ್ತರಾಖಂಡದ ಮುಸ್ಸೋರಿಯದವರಾದ ನೇಗಿ ಅವರು 1989ನೇ ಸಾಲಿನ ಕರ್ನಾಟಕ ಕೇಡರ್ ಅಧಿಕಾರಿ. ಅವರು 2021ರ ಫೆಬ್ರುವರಿಯಿಂದ 2023ರ ಮಾರ್ಚ್ 30ರವರೆಗೆ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾಂಪಾ (ಅರಣ್ಯೀಕರಣ ಪರಿಹಾರ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. 2023ರ ಏಪ್ರಿಲ್ 5ರಿಂದ ಅವರು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾರೆ.

ಐಎಫ್‌ಎಸ್ ಅಧಿಕಾರಿ ಸುಭಾಷ್ ಕೆ. ಮಲ್ಖೇಡೆ ಅವರನ್ನು ಹೆಚ್ಚುವರಿ ಹುದ್ದೆಯಿಂದ ಬಿಡುಗಡೆ ಮಾಡಿ ನೇಗಿ ಅವರನ್ನು ನೇಮಿಸಲಾಗಿದೆ.

ಇನ್‌ಸ್ಪೆಕ್ಟರ್‌ಗೆ ಮಾನವ ಹಕ್ಕು ಆಯೋಗ ನೋಟಿಸ್

ತಡರಾತ್ರಿವರೆಗೂ ಗರ್ಭಿಣಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ ಕಳವು ಪ್ರಕರಣದಲ್ಲಿ ಗರ್ಭಿಣಿ ಮತ್ತು ಅವರ ಒಂದೂವರೆ ವರ್ಷದ ಮಗುವನ್ನು ಠಾಣೆಯಲ್ಲಿ ತಡರಾತ್ರಿವರೆಗೂ ಇರಿಸಿ ವಿಚಾರಣೆ ನಡೆಸಿದ ಆರೋಪದ ಮೇರೆಗೆ ಮಾನವ ಹಕ್ಕುಗಳ ಆಯೋಗದ ಅಧಿಕಾರಿಗಳು ಕೆ.ಆರ್.ಪುರ ಪೊಲೀಸ್ ಇನ್‌ಸ್ಪೆಕ್ಟರ್‌ಗೆ ನೋಟಿಸ್ ಜಾರಿ ಮಾಡಿದ್ದಾರೆ.

ಮಂಗಳವಾರ ಸಂಜೆ 6 ಗಂಟೆಗೆ ಮಾನವ ಹಕ್ಕುಗಳ ಆಯೋಗದ ಡಿವೈಎಸ್ಪಿ ಸುಧೀರ್ ಹೆಗ್ಡೆ ಅವರ ನೇತೃತ್ವದಲ್ಲಿ ಪರಿಶೀಲನೆ ನಡೆಸಿದ ವೇಳೆ, ಗರ್ಭಿಣಿ ಮತ್ತು ಮಗುವನ್ನು ಠಾಣೆಯಲ್ಲೇ ಇರಿಸಿಕೊಂಡಿದ್ದು ಗೊತ್ತಾಗಿತ್ತು.

‘ಗರ್ಭಿಣಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಅವರಿಂದ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಠಾಣೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುವುದು. ಯಾವ ಪ್ರಕರಣದಲ್ಲಿ ಕರೆ ತರಲಾಗಿದೆ? ಎಷ್ಟು ಹೊತ್ತು ವಿಚಾರಣೆ ನಡೆಸಲಾಗಿದೆ ಎಂಬ ಮಾಹಿತಿ ನೀಡುವಂತೆ ಸೂಚಿಸಿ ಠಾಣಾಧಿಕಾರಿಗೆ ನೋಟಿಸ್ ನೀಡಲಾಗಿದೆ. ಜೊತೆಗೆ ಮಹಿಳಾ ಸ್ವಾಧಾರ ಗೃಹಕೇಂದ್ರದಿಂದ ಕೆಲವೊಂದು ಮಾಹಿತಿ ಕೇಳಲಾಗಿದೆ’ ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಕೆ.ಆರ್.ಪುರ ಠಾಣಾ ವ್ಯಾಪ್ತಿಯ ಸೀಗೆಹಳ್ಳಿ ಬಳಿ ಮನೆಯೊಂದರಲ್ಲಿ ವಾಸವಾಗಿದ್ದ ಸಂತ್ರಸ್ತೆಗೆ ಪಕ್ಕದ ಮನೆಯ ಮಹಿಳೆಯೊಬ್ಬರು ಮನೆಯ ಕೀ ಕೊಟ್ಟು ಹೋಗಿದ್ದರು. ಊರಿನಿಂದ ವಾಪಸ್ ಮನೆಗೆ ಬಂದಾಗ ಬೀರುವಿನಲ್ಲಿಟ್ಟಿದ್ದ ಚಿನ್ನದ ಸರ ಕಳವಾಗಿತ್ತು. ಈ ಬಗ್ಗೆ ಮಹಿಳೆಯು ಪೊಲೀಸರಿಗೆ ದೂರು ನೀಡಿದ್ದರು.

ಶಂಕೆಯ ಮೇರೆಗೆ ಸಂತ್ರಸ್ತ ಮಹಿಳೆಯನ್ನು ಠಾಣೆಗೆ ಸೋಮವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಕರೆದೊಯ್ದು ರಾತ್ರಿ11 ಗಂಟೆವರೆಗೂ ವಿಚಾರಣೆ ನಡೆಸಿದ್ದರು. ಬಳಿಕ ಮಹಿಳಾ ಸ್ವಾಧಾರ ಗೃಹಕೇಂದ್ರಕ್ಕೆ ಕಳುಹಿಸಿದ್ದರು. ಮಂಗಳವಾರ ಬೆಳಿಗ್ಗೆಯಿಂದ ಸಂಜೆವರೆಗೂ ವಿಚಾರಣೆ ನಡೆಸಿದ್ದರು ಎಂದು ಆರೋಪಿಸಲಾಗಿದೆ.

ಈ ಕುರಿತು ಸಂತ್ರಸ್ತೆ ಪತಿ ಭರತ್ ಅವರು ಠಾಣೆಗೆ ಹೋಗಿ ವಿಚಾರಿಸಿದಾಗ ಪೊಲೀಸರು ಸರಿಯಾಗಿ ಸ್ಪಂದಿಸಿರಲಿಲ್ಲ. ಪತ್ನಿ ಭೇಟಿಗೂ ಅವಕಾಶ ನೀಡಿರಲಿಲ್ಲ. ಹಾಗಾಗಿ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದರು.

‘ಮಾನವ ಹಕ್ಕುಗಳ ಆಯೋಗದ ಡಿವೈಎಸ್‌ಪಿ ಅವರು ಸಂಜೆ 4 ಗಂಟೆಗೆ ಠಾಣೆಗೆ ಭೇಟಿ ನೀಡಿದಾಗ ಗರ್ಭಿಣಿ ಹಾಗೂ ಮಗು ವೈದ್ಯಕೀಯ ಪರೀಕ್ಷೆಗಾಗಿ ಆಸ್ಪತ್ರೆಗೆ ತೆರಳಿದ್ದರು. ತಡರಾತ್ರಿವರೆಗೂ ವಿಚಾರಣೆ ನಡೆಸಿಲ್ಲ’ ಎಂದು ಕೆ.ಆರ್.ಪುರ ಠಾಣೆ ಇನ್‌ಸ್ಪೆಕ್ಟರ್ ತಿಳಿಸಿದ್ದಾರೆ.

10 ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.


ವರ್ಗಾವಣೆಗೊಂಡವರು:

- **ಗೋವಿಂದ ರೆಡ್ಡಿ**– ಜಂಟಿ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ
- **ಎಚ್.ವಿ. ದರ್ಶನ್**– ಹೆಚ್ಚುವರಿ ಆಯುಕ್ತ, ವಾಣಿಜ್ಯ ತೆರಿಗೆ (ಸರ್ವೀಸ್ ಅನಾಲಿಸಿಸ್ ವಿಂಗ್)
- **ಕೆ.ಎಂ. ಗಾಯತ್ರಿ**– ಮುಖ್ಯ ನಿರ್ವಹಣಾ ಅಧಿಕಾರಿ, ರಾಷ್ಟ್ರೀಯ ಜೀವನೋಪಾಯ ಮಿಷನ್
- **ಅಕ್ಷಯ್ ಶ್ರೀಧರ್**– ಉಪ ಕಾರ್ಯದರ್ಶಿ, ಡಿಪಿಎಆರ್
- **ಪದ್ಮ ಬಸವಂತಪ್ಪ**– ನಿರ್ದೇಶಕರು, ಸಾಮಾಜಿಕ ಲೆಕ್ಕ ಪರಿಶೋಧನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
- **ಉಕೇಶ್ ಕುಮಾರ್**– ಸಿಇಒ, ಮೈಸೂರು ಜಿಲ್ಲಾ ಪಂಚಾಯಿತಿ
- **ರಾಹುಲ್ ಶರಣಪ್ಪ ಸಂಕನೂರು**–ನಿರ್ದೇಶಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
- **ರುಚಿ ಬಿಂದಾಲ್**–ಸಿಇಒ, ಹಾವೇರಿ ಜಿಲ್ಲಾ ಪಂಚಾಯಿತಿ
- **ದಲ್ಜಿತ್ ಕುಮಾರ್**– ಉಪ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ
- **ಎಂ.ಡಿ. ಹ್ಯಾರಿಸ್ ಸುಮೈರ್**– ಸಿಇಒ, ಬಳ್ಳಾರಿ ಜಿಲ್ಲಾ ಪಂಚಾಯಿತಿ

ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಆದೇಶ

ಸಿ.ಟಿ. ರವಿ ಪ್ರಕರಣ: ತಡೆ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರನ್ನು ಅವಾಚ್ಯ ಪದದಿಂದ ನಿಂದಿಸಿ, ಅಶ್ಲೀಲ ಸನ್ನೆ ಬಳಸುವ ಮೂಲಕ ಮಾನಭಂಗ ಮಾಡಿದ್ದಾರೆ’ ಎಂದು ಆರೋಪಿಸಲಾದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರ ವಿರುದ್ಧದ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆಗೆ ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಹೈಕೋರ್ಟ್ ಇದೇ 24ರವರೆಗೆ ವಿಸ್ತರಿಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧದ ಬಾಗೇವಾಡಿ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಸಿ.ಟಿ. ರವಿ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ಫಿರ್ಯಾದುದಾರರಾದ ಲಕ್ಷ್ಮೀ ಹೆಬ್ಬಾಳಕರ ಪರ ವಕೀಲರು ವಾದ ಮಂಡನೆಗೆ ಕಾಲಾವಕಾಶ ಕೋರಿದರಿಂದ ನ್ಯಾಯಪೀಠ, ಅರ್ಜಿಯನ್ನು ಇದೇ 24ಕ್ಕೆ ಮುಂದೂಡಿ ಆದೇಶಿಸಿತು. ಅಂತೆಯೇ, ಅರ್ಜಿಯ ಮುಂದಿನ ವಿಚಾರಣೆವರೆಗೆ ಅರ್ಜಿದಾರರ ವಿರುದ್ಧದ ತಡೆಯಾಜ್ಞೆ ಆದೇಶವನ್ನು ವಿಸ್ತರಿಸಿತು.

ಕೃಷ್ಣಯ್ಯ ಶೆಟ್ಟಿ ಶಿಕ್ಷೆ ಅಮಾನತು

ಬೆಂಗಳೂರು: ಬ್ಯಾಂಕ್‌ಗೆ ವಂಚಿಸಿದ ಆರೋಪದಡಿಯ ಕ್ರಿಮಿನಲ್ ಪ್ರಕರಣದಲ್ಲಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಅವರಿಗೆ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ 3 ವರ್ಷಗಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ಅಮಾನತಿನಲ್ಲಿ ಇರಿಸಿದೆ.

ಈ ಸಂಬಂಧ ಕೃಷ್ಣಯ್ಯ ಶೆಟ್ಟಿ ಸಲ್ಲಿಸಿದ್ದ ಮೇಲ್ಮನವಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಕೃಷ್ಣಯ್ಯ ಶೆಟ್ಟಿ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರ ವಾದ ಆಲಿಸಿದ ನ್ಯಾಯಪೀಠ, ‘ಅರ್ಜಿದಾರರು ವಿಶೇಷ ನ್ಯಾಯಾಲಯ ವಿಧಿಸಿರುವ ದಂಡದ ಮೊತ್ತದಲ್ಲಿ ₹5.25 ಲಕ್ಷ ಮೊತ್ತವನ್ನು ಠೇವಣಿ ಇರಿಸಬೇಕು’ ಎಂದು ನಿರ್ದೇಶಿಸಿತು.

ಯುವ ಕಾಂಗ್ರೆಸ್‌ಗೆ ಮಂಜುನಾಥ್ ಅಧ್ಯಕ್ಷ

ಬೆಂಗಳೂರು: ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಎಚ್.ಎಸ್. ಮಂಜುನಾಥ್ ಅವರನ್ನು ನೇಮಿಸಲಾಗಿದೆ.



ಅಧ್ಯಕ್ಷರ ಆಯ್ಕೆಗಾಗಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಮಂಜುನಾಥ್ ಅವರು ಅತೀ ಹೆಚ್ಚು 5,67,343 ಮತಗಳನ್ನು ಗಳಿಸಿ ಮೊದಲ ಸ್ಥಾನ ಪಡೆದಿದ್ದರು. ನಂತರದ ಸ್ಥಾನಗಳನ್ನು ದೀಪಿಕಾ ರೆಡ್ಡಿ (2,95,705) ಮತ್ತು ಅಬ್ದುಲ್ ರಹಿಮಾನ್ (45,968) ಗಳಿಸಿದ್ದರು.

ನವದೆಹಲಿಯಲ್ಲಿರುವ ಯುವ ಕಾಂಗ್ರೆಸ್ ಕಚೇರಿಗೆ ಈ ಮೂವರನ್ನೂ ಆಹ್ವಾನಿಸಿ ಸಂದರ್ಶನ ನಡೆಸಲಾಗಿತ್ತು. ಯುವ ಕಾಂಗ್ರೆಸ್ ರಾಷ್ಟ್ರೀಯ ಘಟಕದ ಅಧ್ಯಕ್ಷ ಉದಯ್ ಭಾನು ಚಿಬ್ ನೇತೃತ್ವದ ಸಭೆಯಲ್ಲಿ ಮಂಜುನಾಥ್ ಹೆಸರನ್ನು ಅಧಿಕೃತವಾಗಿ ಘೋಷಿಸಲಾಗಿದೆ.

‘ಸಿದ್ದರಾಮಯ್ಯ ಅದೃಷ್ಟದ ರಾಜಕಾರಣಿ’

ಡಿಕೆಶಿ ಮುಖ್ಯಮಂತ್ರಿ ಆಗ್ತಾರೆ, ಯಾವಾಗ ಎಂದು ಹೇಳಲಾಗದು: ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿಕೆ

ಪ್ರಜಾವಾಣಿ ವಾರ್ತೆ


ಜಿ.ಟಿ. ದೇವೇಗೌಡ

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭವಿಷ್ಯ ಮತ್ತು ಅದೃಷ್ಟ ಎರಡೂ ಗಟ್ಟಿಯಾಗಿದೆ. ಅವರು ರಾಜಕಾರಣದಲ್ಲಿ ಇರುವವರೆಗೂ ಗಟ್ಟಿಯಾಗಿರುತ್ತಾರೆ’ ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ನಗರದಲ್ಲಿ ಗುರುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಡಿ.ಕೆ. ಶಿವಕುಮಾರ್ ಸಹ ಮುಖ್ಯಮಂತ್ರಿಯಾಗುತ್ತಾರೆ. ಯಾವಾಗ ಎಂದು ಹೇಳಲಾಗದು. ಈಗ ಸಿದ್ದರಾಮಯ್ಯ ಸಿ.ಎಂ ಆಗಲು ಶಿವಕುಮಾರ್ ಬೆಂಬಲ ನೀಡಿದ್ದಾರೆ. ಹಾಗೆಯೇ ಡಿಕೆಶಿ ಮುಖ್ಯಮಂತ್ರಿಯಾಗಬೇಕಾದರೆ ಸಿದ್ದರಾಮಯ್ಯ ಬೆಂಬಲ ಬೇಕು. ಯಾರೋ ಕೇವಲ ಹತ್ತು ಶಾಸಕರನ್ನಿಟ್ಟುಕೊಂಡು ಸಿ.ಎಂ ಆಗಲು ಆಗದು’ ಎಂದು ಪ್ರತಿಕ್ರಿಯಿಸಿದರು.

ಲೋಕಾಯುಕ್ತ ತನಿಖೆಯಲ್ಲಿ ಸಿದ್ದರಾಮಯ್ಯನವರಿಗೆ ಕ್ಲೀನ್‌ಚಿಟ್ ಕುರಿತು ಪ್ರತಿಕ್ರಿಯಿಸಿ, ‘ಎಫ್‌ಐಆರ್ ಆದ ಕೂಡಲೇ ಕೆಲವರು ಸಿದ್ದರಾಮಯ್ಯ ರಾಜೀನಾಮೆ ಕೇಳುತ್ತಿದ್ದರು. ಈ ಆರೋಪಕ್ಕೆ ಸಾಕ್ಷ್ಯ ಇಲ್ಲ ಎಂದು ಲೋಕಾಯುಕ್ತವೇ ಹೇಳಿದೆ. ಈಗ ಏನು ಹೇಳುತ್ತಾರೆ? ಎಫ್‌ಐಆರ್ ಆದ ತಕ್ಷಣ ರಾಜೀನಾಮೆ ಕೇಳುವುದು ತಪ್ಪೆಂದು ಹೇಳಿದ್ದೆ. ಅದನ್ನೇ ಮಹಾ ಅಪರಾಧ ಎಂದು ಬಿಂಬಿಸಿದ್ದರು. ಈಗ ಸತ್ಯ ಗೊತ್ತಾಗಿದೆ’ ಎಂದರು.

‘ಈ ಪ್ರಕರಣದಲ್ಲಿ ಲೋಕಾಯುಕ್ತರ ಮೇಲೆ ಪ್ರಭಾವ ಬೀರುವಂತಹದ್ದು ಏನೂ ಆಗಿಲ್ಲ. ಜಮೀನು ಕಳೆದುಕೊಂಡಿದ್ದಕ್ಕೆ ಪ್ರತಿಯಾಗಿ ನಿವೇಶನ ಕೇಳಿದ್ದರು. ಇಂತಹದ್ದೇ ಕಡೆ ನಿವೇಶನ ಕೊಡಿ ಎಂದು ಕೇಳಿರಲಿಲ್ಲ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಸೇರಿದಂತೆ ಯಾರೂ ಅಧಿಕಾರಿಗಳ ಮೇಲೆ ಪ್ರಭಾವ ಬೀರಿಲ್ಲ’ ಎಂದರು.

‘ಕಾಂಗ್ರೆಸ್ ಸರ್ಕಾರ ಲೋಕಾಯುಕ್ತ ಮುಚ್ಚಿಸಿ, ಎಸಿಬಿ ಮಾಡಿತ್ತು. ಬಿಜೆಪಿ ಮತ್ತೆ ಲೋಕಾಯುಕ್ತಕ್ಕೆ ಶಕ್ತಿ ನೀಡಿತು. ಈಗ ಅದೇ ಲೋಕಾಯುಕ್ತ ಅಧಿಕಾರಿಗಳು ವರದಿ ನೀಡಿದ್ದಾರೆ. ಲೋಕಾಯುಕ್ತ ಒಳ್ಳೆಯ ಕೆಲಸ ಮಾಡುತ್ತಿದೆ’ ಎಂದು ತಿಳಿಸಿದರು.

ಇದೇ ವರದಿ ಬರುತ್ತೆಂದು ಗೊತ್ತಿತ್ತು: ಶ್ರೀವತ್ಸ


ಟಿ.ಎಸ್.ಶ್ರೀವತ್ಸ

ಮೈಸೂರು: ‘ಲೋಕಾಯುಕ್ತ ಇದೇ ರೀತಿ ವರದಿ ಕೊಡುತ್ತದೆ ಎಂಬುದು ಗೊತ್ತಿತ್ತು. ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಗ್ಧರು, ಏನೂ ತಪ್ಪು ಮಾಡಿಲ್ಲ ಎಂಬುದಾದರೆ 14 ನಿವೇಶನಗಳನ್ನೇಕೆ ವಾಪಸ್ ಕೊಟ್ಟರು’ ಎಂದು ಬಿಜೆಪಿ ಶಾಸಕ ಟಿ.ಎಸ್. ಶ್ರೀವತ್ಸ ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಲೋಕಾಯುಕ್ತಕ್ಕೆ ಎಲ್ಲ ದಾಖಲೆ ಕೊಟ್ಟಿದ್ದೆವು. ಮುಖ್ಯಮಂತ್ರಿ ಒತ್ತಡದಿಂದ ಲೋಕಾಯುಕ್ತ ವರದಿ ಸಿದ್ಧವಾಗಿದೆ. ‘ಬಿ’ ರಿಪೋರ್ಟ್ ಕೊಟ್ಟಿರುವುದನ್ನು ಖಂಡಿಸುತ್ತೇವೆ’ ಎಂದರು.

‘ಲೋಕಾಯುಕ್ತಕ್ಕೆ ಇದ್ದ ಮರ್ಯಾದೆಯನ್ನು ಜಿಲ್ಲಾಮಟ್ಟದ ಲೋಕಾಯುಕ್ತ ಅಧಿಕಾರಿ ಕಳೆದಿದ್ದಾರೆ’ ಎಂದು ಆರೋಪಿಸಿದರು.

‘ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮುಡಾದ 141 ಕಡತ ತೆಗೆದುಕೊಂಡು ಹೋಗಿದ್ದಾರೆ. ಅದರಲ್ಲೇ ಮುಖ್ಯಮಂತ್ರಿ ಕುಟುಂಬದ ಸಾಕ್ಷ್ಯ ಇರಬಹುದು’ ಎಂದು ತಿಳಿಸಿದರು.

‘ಮುಡಾ ಪ್ರಕರಣ ಬಿಜೆಪಿ- ಜೆಡಿಎಸ್‌ನ ಕುತಂತ್ರ’

ಬೆಂಗಳೂರು: ‘ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಲಿನ ಆರೋಪ ಬಿಜೆಪಿ ಮತ್ತು ಜೆಡಿಎಸ್‌ನ ಕುತಂತ್ರವಾಗಿದ್ದು, ಅದು ಹೆಚ್ಚು ದಿನ ನಡೆಯುವುದಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಯಾವ ದಾಖಲೆಯಲ್ಲೂ ಸಿದ್ದರಾಮಯ್ಯ ಅವರ ಸಹಿ ಇಲ್ಲದಿರುವಾಗ, ಸಂಬಂಧವೇ ಇಲ್ಲದಿರುವಾಗ ಅವರ ಪಾತ್ರ ಹೇಗೆ ಬರುತ್ತದೆ’ ಎಂದು ಪ್ರಶ್ನಿಸಿದರು.

‘ಆಸ್ತಿ ಕಳೆದುಕೊಂಡವರು ಪರಿಹಾರ ಕೇಳುವುದು ಸಹಜ. ಮುಡಾದವರು ಕೊಟ್ಟಿದ್ದಾರೆ. ನಮಗೆ ಇಂಥದ್ದೇ ಜಾಗದಲ್ಲಿ ನಿವೇಶನ ಕೊಡಿ ಎಂದು ಅವರು ಕೇಳಿಲ್ಲ. ಆದರೂ ಅನಗತ್ಯ ಗೊಂದಲ ಬೇಡ ಎಂದು ಅವರು ಮುಡಾ ಕೊಟ್ಟಿದ್ದ ನಿವೇಶನಗಳನ್ನು ವಾಪಸ್ ನೀಡಿದ್ದಾರೆ’ ಎಂದರು.

‘ಮುಡಾ ವಿಚಾರದಲ್ಲಿ ಬಿಜೆಪಿಯವರು ಹೋರಾಟ ಮಾಡಲಿ. ದೆಹಲಿಯಿಂದ ವಕೀಲರನ್ನು ಕರೆಸಿ ವಾದ ಮಂಡಿಸಲು ನಮಗೆ ಗೊತ್ತಿಲ್ಲವೇ’ ಎಂದರು.

‘ಸಿಬಿಐಗೆ ಕೊಡುವ ಅಗತ್ಯವಿಲ್ಲ’

‘ಮುಡಾ ಪ್ರಕರಣವನ್ನು ಲೋಕಾಯುಕ್ತ ತನಿಖೆ ನಡೆಸುತ್ತಿರುವುದರಿಂದ ಸಿಬಿಐಗೆ ಕೊಡುವ ಅಗತ್ಯ ಇಲ್ಲ. ಒಂದೇ ಪ್ರಕರಣವನ್ನು ಎರಡು ಸಂಸ್ಥೆಗಳು ತನಿಖೆ ಮಾಡುವುದು ಆಗಬಾರದು. ಇದು ಕಾನೂನಿಗೆ ವಿರುದ್ಧ ಎಂದು ಹೈಕೋರ್ಟ್ ಹೇಳಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಮುಡಾ ಪ್ರಕರಣದಲ್ಲಿ ಆರೋಪ ಮೇಲ್ನೋಟಕ್ಕೆ ಕಂಡುಬಂದ ಕಾರಣ ತನಿಖೆ ಮಾಡುವಂತೆ ಲೋಕಾಯುಕ್ತಕ್ಕೆ ಹೈಕೋರ್ಟ್ ಸೂಚಿಸಿತ್ತು. ಆ ರೀತಿ ಏನೂ ಇಲ್ಲ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ಲೋಕಾಯುಕ್ತ ಸ್ವತಂತ್ರ ಸಂಸ್ಥೆ. ಹೀಗಾಗಿ, ಈ ರೀತಿ ನಡೆದುಕೊಳ್ಳುವಂತೆ ಹೇಳಲು ಆಗುತ್ತದೆಯೇ’ ಎಂದೂ ಪ್ರಶ್ನಿಸಿದರು.

‘ಲೋಕಾಯುಕ್ತ ತನಿಖೆಯನ್ನು ಪ್ರಶ್ನಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಬಿಜೆಪಿಯವರು ಯೋಚಿಸಲಿ. ಬಿಜೆಪಿಯವರಿಗೆ ಪರವಾದ ತೀರ್ಪು ಬಂದಾಗ ತನಿಖಾ ಸಂಸ್ಥೆ ಸರಿ ಇರುತ್ತದೆ. ವಿರುದ್ಧವಾದ ತೀರ್ಪು ಬಂದಾಗ ಸರಿ ಇರುವುದಿಲ್ಲ. ಇದೆಂತಹ ರಾಜಕೀಯ’ ಎಂದು ಪ್ರಶ್ನಿಸಿದರು.



45 ವರ್ಷದಿಂದ ರಾಜಕೀಯ ಮಾಡಿರುವ ಸಿದ್ದರಾಮಯ್ಯ ಮನಸ್ಸು ಮಾಡಿದ್ದರೆ 1,400 ಸೈಟು ಮಾಡಬಹುದಿತ್ತು. ಆದರೆ ಇಳಿ ವಯಸ್ಸಿನಲ್ಲಿ ಒಂದು ಮನೆ ಕಟ್ಟುತ್ತಿದ್ದಾರೆ

ಕೆ. ಹರೀಶ್ ಗೌಡ, ಕಾಂಗ್ರೆಸ್ ಶಾಸಕ

‘ಪರಿಶಿಷ್ಟರ ಪರ ಜನಾಂದೋಲನ’

ಪ್ರಜಾವಾಣಿ ವಾರ್ತೆ


ವಿಜಯೇಂದ್ರ

ಬೆಂಗಳೂರು: ಪರಿಶಿಷ್ಟ ಜಾತಿ, ಪಂಗಡಗಳಿಗೆ ನಿರಂತರವಾಗಿ ಅನ್ಯಾಯವಾಗುತ್ತಿದ್ದು, ರಾಜ್ಯದಾದ್ಯಂತ ಜನಾಂದೋಲನ ಹಮ್ಮಿಕೊಳ್ಳಲಾಗುವುದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ ದುರ್ಬಳಕೆ ತಡೆಗೆ ಆಗ್ರಹಿಸಿ ರಾಜ್ಯ ಸರ್ಕಾರದ ವಿರುದ್ಧ ಜನಾಂದೋಲನ ಹಮ್ಮಿಕೊಳ್ಳುವ ಕುರಿತು ಗುರುವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

‘ಪರಿಶಿಷ್ಟ ಸಮುದಾಯಗಳ ಧ್ವನಿಯಾಗಿ ಬಿಜೆಪಿ ಹೋರಾಟ ರೂಪಿಸಲಿದೆ. ಸ್ವಂತ ಬಲದಿಂದ ಅಧಿಕಾರಕ್ಕೆ ಬರಲು, ಶೋಷಿತ ಜನರ ಪರವಾಗಿ ನಾವು ಧ್ವನಿ ಎತ್ತುವುದು ಅನಿವಾರ್ಯ. ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ನಾಯಕರು ಅಹಿಂದ ಜಪ ಮಾಡುತ್ತಿದ್ದಾರೆ. ಆದರೆ, ಅಹಿಂದ ಸಮುದಾಯ ಸೇರಿದಂತೆ ಪರಿಶಿಷ್ಟ ಜಾತಿ, ಪಂಗಡಗಳಿಗೆ ಅನ್ಯಾಯ ಮಾಡುತ್ತಿದ್ದಾರೆ’ ಎಂದು ದೂರಿದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಗೆ 2024–25ರ ಬಜೆಟ್‌ನಲ್ಲಿ ₹39,914 ಕೋಟಿ ಘೋಷಿಸಿದ್ದರು. ಆದರೆ, ಬಿಡುಗಡೆ ಮಾಡಿರುವುದು ₹23,485 ಕೋಟಿ. ಅದರಲ್ಲಿ ₹20,404 ಕೋಟಿ ಮಾತ್ರ ವೆಚ್ಚವಾಗಿದೆ. ಅವರಿಗೆ ಮೀಸಲಾದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿದ್ದಾರೆ. ಸರ್ಕಾರದ ಇಂತಹ ನಡೆಯ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ ಎಂದರು.

ನೀರಾವರಿ, ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ನೀಡಬೇಕಿರುವ ಬಾಕಿ ₹ 6 ಸಾವಿರ ಕೋಟಿ ಇದೆ. ‘ಸರ್ಕಾರದಲ್ಲಿ ಹಣದ ಕೊರತೆ ಇಲ್ಲ’ ಎನ್ನುವ ಮುಖ್ಯಮಂತ್ರಿ, ಬಾಕಿ ಹಣ ಏಕೆ ಬಿಡುಗಡೆ ಮಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಅರವಿಂದ ಬೆಲ್ಲದ, ಸಿ.ಸಿ .ಪಾಟೀಲ, ಮಾನಪ್ಪ ವಜ್ಜಲ್, ದುರ್ಯೋಧನ ಐಹೊಳೆ, ಚಂದ್ರು ಲಮಾಣಿ, ಮಾಜಿ ಶಾಸಕ ಎನ್. ಮಹೇಶ್, ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯದ ಅಧ್ಯಕ್ಷ ಸಿಮೆಂಟ್ ಮಂಜು, ಎಸ್‌ಟಿ ಮೋರ್ಚಾ ರಾಜ್ಯದ ಅಧ್ಯಕ್ಷ ಬಂಗಾರು ಹನುಮಂತು ಉಪಸ್ಥಿತರಿದ್ದರು.

‘ಮುಂದಿನ ಚುನಾವಣೆಗೆ ನನ್ನ ನಾಯಕತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ನಾಯಕತ್ವದಲ್ಲಿ ಮುಂದಿನ ಚುನಾವಣೆ ನಡೆಯಲಿದೆ ಎನ್ನುವ ಮೂಲಕ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೊಸ ದಾಳ ಉರುಳಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಶಿವಕುಮಾರ್ ಬಳಿಯಿಂದ ಕಿತ್ತುಕೊಳ್ಳಬೇಕು ಎಂಬ ಉದ್ದೇಶದಲ್ಲಿ ದಲಿತ ಸಚಿವರು ನಡೆಸುತ್ತಿರುವ ಚಟುವಟಿಕೆ ಹಾಗೂ ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಬದಲಾವಣೆಯ ಸುದ್ದಿಗಳು ಹರಿದಾಡುತ್ತಿರುವ ಹೊತ್ತಿನಲ್ಲಿ ಅವರು ಈ ರೀತಿಯ ಹೇಳಿಕೆ ನೀಡಿದ್ದಾರೆ.

ಆಗಿದ್ದಿಷ್ಟು: ಗುರುವಾರ ನಡೆದ ಸರ್ಕಾರಿ ನೌಕರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ‘ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಒಪಿಎಸ್ ಜಾರಿ ಮಾಡುತ್ತೇವೆ. ನೀವು ಬಿಟ್ಟರೂ ಈ ವಿಚಾರವನ್ನು ನಾವು ಬಿಡುವುದಿಲ್ಲ. ಆದರೆ, ಸ್ವಲ್ಪ ತಾಳ್ಮೆಯಿರಲಿ’ ಎಂದರು. ಆಗ ನೌಕರರು, ‘ಡಿಕೆ–ಡಿಕೆ’ ಎಂದು ಕೂಗಿದರು.

‘ನಾನು ಮುಂದಿನ ಬಾರಿ ಚುನಾವಣೆಗೆ ನಿಂತಾಗ, ನನ್ನ ನಾಯಕತ್ವದಲ್ಲಿ ನಡೆದಾಗ ದಯವಿಟ್ಟು ಈ ಪದವನ್ನು ಉಪಯೋಗಿಸಿ. ನಾನು ವಿಧಾನ ಸೌಧದಲ್ಲಿ ಇರುವವನೇ. ನಾನು ಇನ್ನು ಎಂಟತ್ತು ವರ್ಷ ಬಿಟ್ಟು ಹೋಗುವುದಿಲ್ಲ. ನನ್ನ ಆರೋಗ್ಯ ಇನ್ನೂ ಗಟ್ಟಿಯಾಗಿದೆ. ನನ್ನ ಮೇಲೆ ನಂಬಿಕೆಯಿಡಿ’ ಎಂದು ಮಾರ್ಮಿಕವಾಗಿ ಹೇಳಿದರು.

‘ನಾನು 1989ರಿಂದ ವಿಧಾನಸಭೆಯಲ್ಲಿ ಇದ್ದೇನೆ. ಕಾರ್ಯಾಂಗದ ಭಾಗವಾಗಿ ನೀವಿದ್ದೀರಿ. ನಿಮ್ಮ ಜವಾಬ್ದಾರಿಯ ಅರಿವು ನನಗಿದೆ. ನಾನು ಕೂಡ ಬಡ ನೌಕರನಂತೆ 38 ವರ್ಷಗಳಿಂದ ಸೇವೆ ಮಾಡುತ್ತಿದ್ದೇನೆ. ಶಾಸಕನಾಗಿ ಸರ್ಕಾರದ ವೇತನ ಪಡೆದಿದ್ದೇನೆ. ನನಗೂ ಪಿಂಚಣಿ ಬರುತ್ತದೆ’ ಎಂದರು.

‘ವೇಣುಗೋಪಾಲ್ ಜೊತೆ ರಾಜಕೀಯ ಚರ್ಚೆಸಿಲ್ಲ’

ಪ್ರಜಾವಾಣಿ ವಾರ್ತೆ


ಜಿ.ಪರಮೇಶ್ವರ

ಬೆಂಗಳೂರು: ‘ಯಾವುದೇ ರಾಜಕೀಯ ಕಾರ್ಯಸೂಚಿ ಇಟ್ಟುಕೊಂಡು ದೆಹಲಿಗೆ ಹೋಗಿರಲಿಲ್ಲ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಜೊತೆಗೂ ರಾಜಕೀಯ ವಿಚಾರಗಳನ್ನು ಮಾತನಾಡಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎಐಸಿಸಿ ಹೊಸ ಕಚೇರಿ ಉದ್ಘಾಟನೆಗೆ ಹೋಗಿರಲಿಲ್ಲ. ಹೀಗಾಗಿ, ಅದನ್ನು ನೋಡಲು ಹೋಗಿದ್ದೆ. ಈ ವೇಳೆ ವೇಣುಗೋಪಾಲ್ ಅವರನ್ನು ಮಾತನಾಡಿಸಿಕೊಂಡು ಬಂದಿದ್ದೇನೆ. ಅವರನ್ನು ಹೊರತುಪಡಿಸಿ ಬೇರೆ ಯಾರನ್ನೂ ಭೇಟಿ ಮಾಡಿಲ್ಲ’ ಎಂದರು.

‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಅಥವಾ ಮುಖ್ಯಮಂತ್ರಿ ಹುದ್ದೆ ಕುರಿತು ಎಲ್ಲಿಯೂ ಮಾತನಾಡಿಲ್ಲ. ಶೋಷಿತರ ಸಮಾವೇಶ ಹಮ್ಮಿಕೊಳ್ಳುವ ಬಗ್ಗೆಯೂ ಮಾತನಾಡಿಲ್ಲ. ಆ ರೀತಿ ಕಾರ್ಯಸೂಚಿ ಇರುತ್ತಿದ್ದರೆ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುತ್ತಿದ್ದೆ’ ಎಂದರು.

ಕ್ಲೀನ್‌ಚಿಟ್‌ನಿಂದ ಸಂತೋಷ: ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಡಾ ಪ್ರಕರಣದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರಿಗೆ ಕಳಂಕ ತರಲು ವಿಪಕ್ಷಗಳು ರಾಜಕೀಯ ಪಿತೂರಿ ನಡೆಸಿದ್ದವು. ಸಿದ್ದರಾಮಯ್ಯಗೆ ಕ್ಲೀನ್‌ಚಿಟ್ ಸಿಕ್ಕಿರುವುದು ಸಂತೋಷ ತಂದಿದೆ’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಸಿದ್ದರಾಮಯ್ಯ ಮೊದಲಿನಿಂದಲೂ ಗಟ್ಟಿಯಾಗಿದ್ದರು. ಅವರ ಆತ್ಮಸಾಕ್ಷಿ ಎಂದೂ ತಪ್ಪು ಮಾಡಿಲ್ಲವೆಂದು ಹೇಳುತ್ತಿತ್ತು. ನಮಗೂ ಅವರು ತಪ್ಪು ಮಾಡಿಲ್ಲವೆಂದು ಗೊತ್ತಿತ್ತು’ ಎಂದರು.

‘ಸಿಎಂ ಬದಲಾವಣೆ ಪ್ರಶ್ನೆಯೇ ಮುಂದಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಬೇಕೆಂದು ಶಾಸಕರು ಮುದ್ರೆಯೊತ್ತಿದ್ದಾರೆ. ಹೈಕಮಾಂಡ್ ಅದನ್ನು ನಿರ್ದೇಶಿಸಿದೆ. ಅವರ ಸ್ಥಾನದಲ್ಲಿ ಗಟ್ಟಿಯಾಗಿದ್ದಾರೆ’ ಎಂದರು.

‘ದಲಿತ ಸಮಾವೇಶ ಮಾಡುವುದಾದರೆ ದೊಡ್ಡ ಮಟ್ಟದಲ್ಲಿ ಸಭೆ ಮಾಡಲಿದ್ದೇವೆ’ ಎಂದು ಹೇಳಿದ ಅವರು, ‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹೈಕಮಾಂಡ್ ತೀರ್ಮಾನಿಸಲಿದೆ. ಸಚಿವ ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯಿಸಲಾರೆ’ ಎಂದರು.



ಸೌಹಾರ್ದದ ಬೆಳಕು...

ಹಿಂದೂ ಹಾಗೂ ಮುಸ್ಲಿಮರ ಭಾವೈಕ್ಯದ ತಾಣವಾದ ಕೊಪ್ಪಳದ ಮೋತಿ ಕೆರೆ ದಂಡೆಯಲ್ಲಿರುವ ಹಜರತ್ ಮರ್ದಾನಲಿ ದರ್ಗಾದಲ್ಲಿ ಉರುಸಿನ ಸಂಭ್ರಮ ಮನೆ ಮಾಡಿದೆ. ದರ್ಗಾವನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಿದ ಚಿತ್ರಣ ಗುರುವಾರ ರಾತ್ರಿ ಕಂಡುಬಂದಿದ್ದು ಹೀಗೆ ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ರಾಜ್ಯ ಸರ್ಕಾರಿ ನೌಕರರ ಸಮಾವೇಶದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಪಾದನೆ

‘ನಿರ್ದಿಷ್ಟ ದಿನವೇ ಗೃಹಲಕ್ಷ್ಮಿ ಹಣ ಪಾವತಿ ಎಂದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಲೆಗಳೆಲ್ಲ ಗಗನಕ್ಕೆ ಏರಿದ್ದವು. ಆದಾಯ ಪಾತಾಳಕ್ಕೆ ಇಳಿದಿತ್ತು. ಇಂಥ ಸಮಯದಲ್ಲಿ ಪ್ರತಿ ಕುಟುಂಬದ ಮಹಿಳೆಗೆ ₹ 2000 (ಗೃಹಲಕ್ಷ್ಮಿ) ನೀಡಲು ನಿರ್ಧರಿಸಿದ್ದೆವು. ನಿರ್ದಿಷ್ಟವಾಗಿ ಇಂಥದ್ದೇ ದಿನ ಪಾವತಿ ಮಾಡುವುದಾಗಿ ಹೇಳಿರಲಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರ ಹಾಗೂ ಜಿಲ್ಲೆ–ತಾಲ್ಲೂಕು ಶಾಖೆಗಳ ನಿರ್ದೇಶಕರು, ಪದಾಧಿಕಾರಿಗಳ ಸಮಾವೇಶದಲ್ಲಿ ಗುರುವಾರ ಅವರು ಮಾತನಾಡಿದರು.

‘ಮಹಿಳೆಯರ ಖಾತೆಗೆ ಹಣ ಹಾಕುತ್ತೇವೆ. ನಾವೇನು ಯಾರಿಗೂ ತಪ್ಪಿಸುವುದಿಲ್ಲ. ಅಧಿಕಾರಿಗಳು ಆದಾಯ ಸಂಗ್ರಹಿಸಿ ನೀಡಿದ ಹಾಗೇ ಜನರ ಖಾತೆಗೆ ಹಾಕುತ್ತಾ ಹೋಗುತ್ತೇವೆ. 4 ಕೋಟಿ ಜನರಿಗೆ ಸಹಾಯ ಮಾಡುವುದಕ್ಕಾಗಿಯೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ’ ಎಂದು ಅವರು ಹೇಳಿದರು.

‘ನನಗೆ ಜಾತಿ ಮೇಲೆ ನಂಬಿಕೆ ಇಲ್ಲ. ಎಲ್ಲ ಜಾತಿ, ಸಮುದಾಯಗಳು ಬೇಕು. ಮಾನವೀಯತೆಯ ಮೇಲೆ ನಂಬಿಕೆ ಇಟ್ಟಿದ್ದೇನೆ. ನೌಕರರನ್ನು ಬಲಿ ಕೊಡುವುದಿಲ್ಲ. ನೀವು ಕೂಡ ನಂಬಿಕೆ ಉಳಿಸಿಕೊಂಡು ಜನರ ಕೆಲಸ ಮಾಡಬೇಕು’ ಎಂದು ಸಲಹೆ ನೀಡಿದರು.

‘ಪ್ರಜಾಸ್ನೇಹಿ ಆಡಳಿತ ಕಾರ್ಯಾಗಾರ’ದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಮಾತನಾಡಿ, ‘ಮೂಲಸೌಕರ್ಯದ ಕೊರತೆ, ಸಿಬ್ಬಂದಿ ಕೊರತೆ ಇನ್ನಿತರ ಸಮಸ್ಯೆಗಳಿಂದ ಜನರಿಗೆ ಸೇವೆ ನೀಡಲು ಸಮಸ್ಯೆಯಾಗಿ ಲೋಕಾಯುಕ್ತಕ್ಕೆ ಪ್ರಕರಣಗಳು ಬಂದಾಗ ನಾವು ಮಾನವೀಯ ದೃಷ್ಟಿಯಿಂದ ನೋಡುತ್ತೇವೆ. ಆದರೆ, ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡುವ ನಿರ್ಲಕ್ಷ್ಯಗಳು ಅಥವಾ ಕೆಲಸಗಳು ನಡೆದರೆ ಕ್ರಮ ಕೈಗೊಳ್ಳುತ್ತೇವೆ’ ಎಂದು ಎಚ್ಚರಿಸಿದರು.

ಮಾಹಿತಿ ಹಕ್ಕು ಅಧಿನಿಯಮ (2005) ಸವಾಲುಗಳು–ಪರಿಹಾರಗಳು ಬಗ್ಗೆ ಕಲಬುರಗಿ ಪೀಠ ಮಾಹಿತಿ ಆಯೋಗದ ಆಯುಕ್ತ ರವೀಂದ್ರ ಗುರುನಾಥ ಧಾಕಪ್ಪ ಮಾತನಾಡಿ, ‘ಕಾಯ್ದೆಯನ್ನು ಶೇ 90ರಷ್ಟು ಸರ್ಕಾರಿ ನೌಕರರು ಓದದೇ ಇರುವುದರಿಂದ ಮಾಹಿತಿ ಹಕ್ಕು ಎಂದ ಕೂಡಲೇ ಅಲರ್ಜಿ ತರಹ ವರ್ತಿಸುತ್ತಿದ್ದಾರೆ. ನೌಕರರ ನಡುವೆ ಒಗ್ಗಟ್ಟು ಇಲ್ಲದೇ ಒಬ್ಬರು ಇನ್ನೊಬ್ಬರ ಮೇಲೆ ಮಾಹಿತಿ ಹಕ್ಕು ಅರ್ಜಿ ಹಾಕಿಸುವ ಕಾರ್ಯಗಳೂ ನಡೆಯುತ್ತಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

ಮಾಹಿತಿ ಹಕ್ಕಿನ ಅಡಿಯಲ್ಲಿ ಮೂರು ರೀತಿಯ ಅರ್ಜಿಗಳು ಬರುತ್ತವೆ. ವೈಯಕ್ತಿಕ ಸಮಸ್ಯೆಯ ಕಾರಣಕ್ಕೆ, ಸಾರ್ವಜನಿಕ ಹಿತಾಸಕ್ತಿಗಾಗಿ ಹಾಗೂ ಉದರ ನಿಮಿತ್ತಕ್ಕೆ ಅರ್ಜಿಗಳು ಬರುತ್ತವೆ. ಯಾವ ರೀತಿಯದ್ದು ಎಂದು ಅರ್ಜಿ ನೋಡಿದ ಕೂಡಲೇ ಗುರುತಿಸಬೇಕು. ಯಾವುದು ಮಾಹಿತಿ ನೀಡಬಹುದು ಎಂಬುದರ ಕಾನೂನಿನ ಅರಿವು ಇದ್ದರೆ ಮಾಹಿತಿ ಒದಗಿಸುವುದು ಕಷ್ಟದ ಕೆಲಸವಲ್ಲ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಆಯೋಜಿಸಿದ್ದ 'ಪ್ರಜಾಸ್ನೇಹಿ ಆಡಳಿತ ಕಾರ್ಯಾಗಾರ’ವನ್ನು ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಕಲಬುರ್ಗಿ ಪೀಠದ ರಾಜ್ಯ ಮಾಹಿತಿ ಆಯೋಗದ ಆಯುಕ್ತ ರವೀಂದ್ರ ಗುರುನಾಥ ಧಾಕಪ್ಪ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ. ಎಸ್. ಷಡಾಕ್ಷರಿ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು ಪ್ರಜಾವಾಣಿ ಚಿತ್ರ

‘ವರದಿ ಬಂದ ಬಳಿಕ ಒಪಿಎಸ್ ಜಾರಿಗೆ’ ಕ್ರಮ’

ಹೊಸ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ರದ್ದು ಮಾಡಿ, ಹಳೆ ಪಿಂಚಣಿ ಯೋಜನೆಯನ್ನು (ಒಪಿಎಸ್) ಜಾರಿ ಮಾಡಬೇಕು ಎಂಬುದು ಸರ್ಕಾರಿ ನೌಕರರ ಪ್ರಮುಖ ಬೇಡಿಕೆಯಾಗಿದೆ. ಅದಕ್ಕಾಗಿ ಅಂಜುಂ ಪರ್ವೇಜ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವರ್ಚುವಲ್ ರೂಪದಲ್ಲಿ ಪಾಲ್ಗೊಂಡ ಅವರು, ‘ಎನ್‌ಪಿಎಸ್ ಸಮಿತಿಯೊಂದಿಗೆ ಅಂತಿಮ ಸಭೆ ನಡೆಸಲಾಗಿದೆ. ಅವರು ನೀಡುವ ವರದಿಯನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ ಒಪಿಎಸ್ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ₹ 1 ಕೋಟಿ ವಿಮೆ ಸೌಲಭ್ಯ ಹಾಗೂ ಕಡಿಮೆ ಬಡ್ಡಿಯಲ್ಲಿ ಸಾಲಸೌಲಭ್ಯ ನೀಡುವ ಯೋಜನೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ. ಶೀಘ್ರವೇ ಸರ್ಕಾರಿ ಆದೇಶ ಹೊರಡಿಸಿ ಜಾರಿಗೆ ತರಲಾಗುವುದು ಎಂದರು.

ಕೆಪಿಎಸ್‌ಸಿ: ನೇಮಕ ಪ್ರಕ್ರಿಯೆಗೆ ತಡೆ

ಒಂದನೇ ಪುಟದಿಂದ...

‘ಈ ಹಿಂದಿನ ದೋಷಗಳನ್ನು ಸರಿಪಡಿಸದೆ ಮುಖ್ಯ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ಹೇಗೆ ಅಧಿಸೂಚನೆ ಹೊರಡಿಸಿದೆ’ ಎಂದು ಪ್ರಶ್ನಿಸಿರುವ ಪೀಠವು, ‘ಇಂತಹ ಸನ್ನಿವೇಶದಲ್ಲಿ ಮುಖ್ಯ ಪರೀಕ್ಷೆಗೆ ಕೆಪಿಎಸ್‌ಸಿ ಹೊರಡಿಸಿರುವ ಅಧಿಸೂಚನೆಯನ್ನು ಅಮಾನತಿಯಲ್ಲಿ ಇರಿಸುವುದೇ ಸೂಕ್ತ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.


‘ಮೇಲ್ನೋಟಕ್ಕೆ ಪ್ರಶ್ನೆಪತ್ರಿಕೆಗಳನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡುವಾಗ ದೋಷಗಳಾಗಿರುವುದು ಕಂಡು ಬಂದಿದೆ. ಆಯೋಗವೂ ಇದನ್ನು ಒಪ್ಪಿಕೊಂಡು ಆ ಬಗ್ಗೆ ಪರಿಶೀಲಿಸಲು ತಜ್ಞರ ಸಮಿತಿ ರಚನೆ ಮಾಡಿತ್ತು. ಅಂತೆಯೇ, ಸಮಿತಿ ನೀಡಿರುವ ವರದಿಯಲ್ಲಿ, ಪ್ರಶ್ನೆಪತ್ರಿಕೆ ಭಾಷಾಂತರದಲ್ಲಿ ದೋಷಗಳಾಗಿವೆ ಎಂಬುದನ್ನು ದೃಢಪಡಿಸಿದೆ. ಈ ವಿಚಾರವನ್ನು ಬಗೆಹರಿಸುವಂತೆಯೂ ಸಲಹೆ ನೀಡಿದೆ’ ಎಂಬ ಅಂಶವನ್ನು ಪೀಠವು ಉಲ್ಲೇಖಿಸಿದೆ.

ನ್ಯಾ.ದೇಸಾಯಿ ಡಿಬಾರ್ ಆದೇಶ ವಜಾ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮುಡಾ ಪ್ರಕರಣದ ತನಿಖೆಗೆ ನೇಮಕವಾಗಿದ್ದ ಆಯೋಗದ ಮುಖ್ಯಸ್ಥರು
- ಕೇಂದ್ರದ ಆದೇಶ ವಜಾ



ಬೆಂಗಳೂರು: ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಆರೋಪಕ್ಕೆ ಸಂಬಂಧಿಸಿದ ತನಿಖೆ ನಡೆಸಲು ರಾಜ್ಯ ಸರ್ಕಾರ ನೇಮಿಸಿರುವ ಏಕಸದಸ್ಯ ನ್ಯಾಯಾಂಗ ಆಯೋಗದ ಮುಖ್ಯಸ್ಥ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಮೂರು ವರ್ಷಗಳ ಕಾಲ ಕೇಂದ್ರ ಸರ್ಕಾರದ ಎಲ್ಲ ನೇಮಕಾತಿಗಳಿಂದ ಡಿಬಾರ್ ಮಾಡಿ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಸಂಬಂಧ ನ್ಯಾಯಮೂರ್ತಿ ಪದ್ಮರಾಜ ನೇಮಿಚಂದ್ರ ದೇಸಾಯಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪುರಸ್ಕರಿಸಿದೆ. ಡಿಬಾರ್ ಮಾಡಿ ಸಾರ್ವಜನಿಕ ಕುಂದುಕೊರತೆ, ಪಿಂಚಣಿ ಹಾಗೂ ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯ 2024ರ ನವೆಂಬರ್ 7ರಂದು ಹೊರಡಿಸಿದ್ದ ಆದೇಶವನ್ನು ವಜಾಗೊಳಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರ ವಾದವನ್ನು ಮಾನ್ಯ ಮಾಡಿರುವ ನ್ಯಾಯಪೀಠ, ‘ದೇಸಾಯಿ ಅವರನ್ನು ಡಿಬಾರ್ ಮಾಡುವ ಮುನ್ನ ಸಚಿವಾಲಯ ನ್ಯಾಯಮೂರ್ತಿ ದೇಸಾಯಿ ಅವರ ಒಪ್ಪಿಗೆ ಪಡೆದಿಲ್ಲ. ಅಲ್ಲದೇ, ಅವರ ನೇಮಕಾತಿ ಅಂತಿಮವಾದ ಬಳಿಕ 15 ದಿನ ಕಾಲಾವಕಾಶ ನೀಡಿ ನೋಟಿಸ್ ನೀಡಬೇಕಿತ್ತು. ಅದನ್ನೂ ಮಾಡಿಲ್ಲ. ಈ ಪ್ರಕ್ರಿಯೆ ಪಾಲಿಸದೇ ಕೇಂದ್ರ ಸರ್ಕಾರವು ಡಿಬಾರ್ ಆದೇಶ ಮಾಡಬಾರದಿತ್ತು’ ಎಂದು ಅಭಿಪ್ರಾಯಪಟ್ಟಿದೆ.

ಡಿಬಾರ್ ಮಾಡುವ ನಿರ್ಧಾರವನ್ನು ಕೇಂದ್ರ ಸಚಿವ ಸಂಪುಟದ ನೇಮಕಾತಿ ಸಮಿತಿಯು ಕೈಗೊಂಡಿತ್ತು. ಇದರನ್ವಯ ನ್ಯಾಯಮೂರ್ತಿ ದೇಸಾಯಿ ಅವರನ್ನು ಸರ್ಕಾರದ ಯಾವುದೇ ಸ್ವಾಯತ್ತ, ಶಾಸನಬದ್ಧ ಅಥವಾ ನಿಯಂತ್ರಣ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಲು 2024ರ ಅಕ್ಟೋಬರ್ 21ರಿಂದ ಪೂರ್ವಾನ್ವಯವಾಗುವಂತೆ ಡಿಬಾರ್ ಮಾಡಿ ಆದೇಶ ಹೊರಡಿಸಲಾಗಿತ್ತು. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

‘ಸಿದ್ದರಾಮಯ್ಯ ದೋಷಮುಕ್ತ’

ಒಂದನೇ ಪುಟದಿಂದ...

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ, ಬಾಮೈದ ಮಲ್ಲಿಕಾರ್ಜುನ ಹಾಗೂ ವಿವಾದಿತ ಜಮೀನಿನ ಮೂಲ ಮಾಲೀಕ ದೇವರಾಜು ಅವರಿಗೆ ನಿರ್ದಿಷ್ಟ ಆರೋಪಗಳಿಂದ ಮುಕ್ತಿ ನೀಡಲಾಗಿದೆ.

ಆರೋಪಕ್ಕೆ ಸಂಬಂಧಿಸಿದಂತೆ 50ಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ನಡೆಸಿ ಸಿದ್ಧಪಡಿಸಲಾಗಿರುವ ಒಟ್ಟು 27 ಸಂಪುಟಗಳ ವರದಿಯು ಎಲ್ಲ ದಸ್ತಾವೇಜುಗಳೂ ಸೇರಿದಂತೆ ಒಟ್ಟು 11 ಸಾವಿರ ಪುಟಗಳನ್ನು ಒಳಗೊಂಡಿದೆ. ಈ ಕಂತೆಯನ್ನು ತನಿಖಾಧಿಕಾರಿ ಹಾಗೂ ಮೈಸೂರು ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ಅವರು ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರಿಗೆ ಸಲ್ಲಿಸಿದರು.

ಆರೋಪಿ ಗಡಿಪಾರಿಗೆ ಸಿದ್ಧತೆ: ಆಕ್ಷೇಪಣೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಸ್ಲಿಂ ಧರ್ಮದ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ ಪೋಸ್ಟ್ ಹರಿಬಿಟ್ಟ ಪ್ರಕರಣದ ಆರೋಪಿ ಸತೀಶ್ ಅವರ ಗಡಿಪಾರಿಗೆ ಪೊಲೀಸ್ ಇಲಾಖೆ ಸಿದ್ಧತೆ ನಡೆಸಿದ್ದು, ಕಾರಣ ಕೇಳಿ ನೋಟಿಸ್ ನೀಡಿದೆ. ಸತೀಶ್ ಆಕ್ಷೇಪಣೆ ಸಲ್ಲಿಸಿದ್ದಾರೆ.

‘ಪ್ರಕರಣದಲ್ಲಿ ನ್ಯಾಯಾಲಯವು ಜಾಮೀನು ನೀಡಿದ್ದು, ಈಗ ನಿಮಗೆ ಜೀವಹಾನಿ ಹಾಗೂ ಆಸ್ತಿ ನಷ್ಟ ಉಂಟಾಗುವ ಸಾಧ್ಯತೆಯಿರುವ ಕುರಿತು ಗುಪ್ತಚರ ಇಲಾಖೆಯಿಂದ ಮಾಹಿತಿ ದೊರಕಿದ್ದು, ಕಿಡಿಗೇಡಿಗಳು ಮತ್ತೆ ಗಲಭೆ ಉಂಟುಮಾಡುವ ಸಾಧ್ಯತೆಯಿದೆ. ಹೀಗಾಗಿ ನಿಮ್ಮನ್ನು ನಿರ್ದಿಷ್ಟ ಅವಧಿಗೆ ಗಡಿಪಾರು ಮಾಡಲು ಉದಯಗಿರಿ ಠಾಣೆ ಇನ್‌ಸ್ಪೆಕ್ಟರ್ ಸುಧಾಕರ್ ಮನವಿ ಮಾಡಿದ್ದಾರೆ’ ಎಂದು ನೋಟಿಸ್‌ನಲ್ಲಿ ಡಿಸಿಪಿ ಎಂ.ಮುತ್ತುರಾಜ್ ತಿಳಿಸಿದ್ದಾರೆ.

‘ನಿಮ್ಮನ್ನು ಗಡಿಪಾರು ಮಾಡಬಾರದೆಂಬುದಕ್ಕೆ ವಿವರಣೆಗಳಿದ್ದರೆ ಡಿಸಿಪಿ ನ್ಯಾಯಾಲಯಕ್ಕೆ ಹಾಜರಾಗಿ ಮಾಹಿತಿ ನೀಡಬೇಕು. ಇಲ್ಲದಿದ್ದಲ್ಲಿ ಏಕಪಕ್ಷೀಯವಾಗಿ ಮುಂದಿನ ಕ್ರಮ ಜರುಗಿಸುತ್ತೇವೆ’ ಎಂದು ಉಲ್ಲೇಖಿಸಲಾಗಿತ್ತು.

ವಿಚಾರಣೆಯಲ್ಲಿ ಭಾಗಿ: ಆರೋಪಿ ಹಾಗೂ ಅವರ ಪರ ವಕೀಲ ಅ.ಮಾ. ಭಾಸ್ಕರ್ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಗುರುವಾರ ಸಂಜೆ ವಿಚಾರಣೆಗೆ ಹಾಜರಾಗಿದ್ದರು.

ಮೌಲ್ವಿ ಬಂಧನ: ಉದಯಗಿರಿ ಠಾಣೆಗೆ ಮುಸ್ಲಿಂ ಯುವಕರು ಕಲ್ಲೆಸೆಯುವ ಮುನ್ನ ಪ್ರಚೋದನಕಾರಿಯಾಗಿ ಮಾತನಾಡಿದ್ದ ಆರೋಪದ ಮೇರೆಗೆ ಮೌಲ್ವಿ ಮುಫ್ತಿ ಮುಷ್ತಾಕ್ ಅವರನ್ನು ಸಿಸಿಬಿ ಪೊಲೀಸರು ಗುರುವಾರ ಬೆಳಿಗ್ಗೆ ರಾಜೇಂದ್ರ ನಗರದ ಮನೆಯಲ್ಲಿ ಬಂಧಿಸಿದರು. ವಿಚಾರಣೆ ನಡೆಸಿದ ಜಿಲ್ಲಾ ಕೋರ್ಟ್ 14 ದಿನ ನ್ಯಾಯಾಂಗ ಬಂಧನ ವಿಧಿಸಿತು.

ಹೊಸಪೇಟೆ: 5 ತಿಂಗಳಿನಿಂದ ಪ್ರೌಢಶಾಲೆ ಶಿಕ್ಷಕರಿಗೆ ಅಕ್ಕಿ ಸಾಗಣೆ ಹೊಣೆ

ಕಿರಿಯರ ಅನ್ನದಲ್ಲೇ ಹಿರಿ ಮಕ್ಕಳಿಗೆ ಪಾಲು

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): ಸರ್ಕಾರಿ ಪ್ರೌಢಶಾಲೆಗಳ 9, 10ನೇ ತರಗತಿಯ ವಿದ್ಯಾರ್ಥಿಗಳಿಗೆ ಬಿಸಿಯೂಟ ಸಿದ್ಧಪಡಿಸಲು 5 ತಿಂಗಳಿನಿಂದ ಸಮರ್ಪಕವಾಗಿ ಪಡಿತರ ಪೂರೈಕೆ ಆಗುತ್ತಿಲ್ಲ. ಇದರ ಪರಿಣಾಮ ಪ್ರಾಥಮಿಕ ಶಾಲೆಗಳಿಗೆ ವಿತರಿಸಲಾಗುವ ಅಕ್ಕಿಯನ್ನು ತರಿಸಿಕೊಂಡು ಬಿಸಿಯೂಟ ಸಿದ್ಧಪಡಿಸಲಾಗುತ್ತಿದೆ. ಐದು ತಿಂಗಳಿನಿಂದ ಈ ಪರಿಸ್ಥಿತಿಯಿದೆ.

‘ಪಡಿತರ ಪೂರೈಕೆಯಲ್ಲಿ ಸಮಸ್ಯೆ ಆಗಿದೆ. ಅದಕ್ಕೆ ಸಮೀಪದ ಪ್ರಾಥಮಿಕ ಶಾಲೆ ಅಥವಾ ಗೋದಾಮಿನಿಂದ ಹೊಂದಾಣಿಕೆ ಮಾಡಿಕೊಂಡು, ಅಕ್ಕಿಯನ್ನು ನಮ್ಮ ವಾಹನದಲ್ಲಿ ತಂದು ಬಿಸಿಯೂಟ ತಯಾರಿಸುತ್ತೇವೆ’ ಎಂದು ಶಿಕ್ಷಕರು ತಿಳಿಸಿದರು.

‘1ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಅಕ್ಕಿ, ಬೇಳೆ, ಎಣ್ಣೆ ಪೂರೈಕೆಯಲ್ಲಿ ಕೊರತೆ ಆಗಿಲ್ಲ. 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಅಕ್ಕಿ ಪೂರೈಕೆಯಲ್ಲಿ ವ್ಯತ್ಯಾಸವಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಶೇ 100ರಷ್ಟು ಹಾಜರಾತಿ ಇರುವುದಿಲ್ಲ. ಅಲ್ಲಿ ಉಳಿಯುವ ಹೆಚ್ಚುವರಿ ಅಕ್ಕಿ ಪ್ರೌಢಶಾಲೆಗಳಿಗೆ ವಿತರಿಸಿ, ಹೊಂದಾಣಿಕೆ ಮಾಡುತ್ತಿದ್ದೆವು. ಬಿಸಿಯೂಟಕ್ಕೆ ಸಮಸ್ಯೆ ಆಗಿಲ್ಲ’ ಎಂದು ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ಶೇಖರ್ ಹೊರಪೇಟೆ ತಿಳಿಸಿದರು.

'ಬಿಸಿಯೂಟ ಅಕ್ಕಿ ಪೂರೈಕೆಯಲ್ಲಿ ಯಾಕೆ ನಿರ್ಲಕ್ಷ್ಯ? ಶಿಕ್ಷಕರು ಬೇರೆಡೆಯಿಂದ ಅಕ್ಕಿ ಮೂಟೆ ಹೊತ್ತು ತರಬೇಕೆ? ನಾನು ನಾಲ್ಕು ತಿಂಗಳಿನಿಂದ ನನ್ನ ಕಾರಿನಲ್ಲೇ ಅಕ್ಕಿಯನ್ನು ಶಾಲೆಗೆ ತರುತ್ತಿದ್ದೇನೆ. ಪೂರೈಕೆ ವ್ಯವಸ್ಥೆ ಸರಿ ಮಾಡಲು ಆಗಲ್ಲವೇ’ ಎಂದು ಹೆಸರು ಹೇಳಲು ಇಚ್ಛಿಸದ ಪ್ರೌಢಶಾಲೆ ಶಿಕ್ಷಕರೊಬ್ಬರು ತಿಳಿಸಿದರು.

‘ಜಿಲ್ಲೆಯಲ್ಲಿ ಎಲ್ಲರಿಗೂ ಬಿಸಿಯೂಟ ಸಿಗುತ್ತಿದೆ. ಕೆಲ ಶಾಲೆಗಳಲ್ಲಿ ಶಿಕ್ಷಕರೇ ಹೊಂದಾಣಿಕೆ ಮಾಡಿಕೊಂಡು ಅಕ್ಕಿ ತಂದು, ಬಿಸಿಯೂಟಕ್ಕೆ ತೊಂದರೆ ಆಗದಂತೆ ನೋಡಿಕೊಂಡಿರಬಹುದು. ಅದು ನನ್ನ ಗಮನಕ್ಕೆ ಬಂದಿಲ್ಲ’ ಎಂದು ಜಿಲ್ಲಾ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷೆ ಅಕ್ಕಮಹಾದೇವಿ ಹೇಳಿದರು.


ಸಾಂದರ್ಭಿಕ ಚಿತ್ರ

9ನೇ ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಅಕ್ಕಿ ಪೂರೈಸಲು ಸರ್ಕಾರ ಕ್ರಮ ಕೈಗೊಂಡಿದೆ. ಅಕ್ಕಿಯನ್ನು ಶೀಘ್ರ ತರಿಸಿಕೊಂಡು ಪ್ರಾಥಮಿಕ ಶಾಲೆಗಳ ಬಾಕಿ ತೀರಿಸಲಾಗುವುದು

ಶೇಖರ್ ಹೊರಪೇಟೆ
ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ

ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಬಿಸಿಯೂಟಕ್ಕೆ ಸಮಸ್ಯೆ ಆಗಿಲ್ಲ, ಕಷ್ಟ ಆಗಿದೆ ಎಂಬ ಬಗ್ಗೆ ಶಿಕ್ಷಕರೂ ನನ್ನ ಬಳಿ ದೂರು ನೀಡಿಲ್ಲ

ವೆಂಕಟೇಶ ರಾಮಚಂದ್ರಪ್ಪ
ಉಪ ನಿರ್ದೇಶಕ
ಶಾಲಾ ಶಿಕ್ಷಣ ಇಲಾಖೆ, ವಿಜಯನಗರ

‘ರವಿ, ಹೆಬ್ಬಾಳಕರ ಪ್ರಕರಣ ಶೀಘ್ರ ಇತ್ಯರ್ಥ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮತ್ತು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಪ್ರಕರಣವನ್ನು ನೀತಿ ನಿರೂಪಣೆ ಸಮಿತಿಗೆ ಒಪ್ಪಿಸಲಾಗಿದ್ದು, ಶೀಘ್ರವೇ ಬಗೆಹರಿಯಲಿದೆ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

‘ನೀತಿ ನಿರೂಪಣೆ ಸಮಿತಿಯ ಸಭೆ ಇನ್ನೂ ಕರೆದಿಲ್ಲ. ಈ ನಡುವೆಯೇ ನಾನು ಅವರಿಬ್ಬರ ಜೊತೆ ದೂರವಾಣಿ ಸಂಪರ್ಕದಲ್ಲಿದ್ದು, ಸಮಸ್ಯೆ ಪರಿಹರಿಸಲು ಪ್ರಯತ್ನಿಸುವೆ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಸಚಿವೆ ಲಕ್ಷ್ಮಿ ಅವರಿಗೆ ಆರೋಗ್ಯ ಸುಧಾರಿಸಿದೆ. ಸಿ.ಟಿ.ರವಿ ಮತ್ತು ಲಕ್ಷ್ಮಿ ಹೆಬ್ಬಾಳಕರ ಇಬ್ಬರನ್ನೂ ಜೊತೆಯಲ್ಲೇ ಕೂರಿಸಿಕೊಂಡು, ಪ್ರಕರಣವನ್ನು ಇತ್ಯರ್ಥಪಡಿಸುವೆ. ಭಾವೋದ್ವೇಗದಿಂದ ಇಂತಹ ಸಮಸ್ಯೆ ಸೃಷ್ಟಿ ಆಗುತ್ತದೆ’ ಎಂದರು.

‘ಕೇಳಿದ್ದಕ್ಕಿಂತ ಹೆಚ್ಚು ಕನ್ನಡಿಗರಿಗೆ ಉದ್ಯೋಗ’

ಪ್ರಜಾವಾಣಿ ವಾರ್ತೆ


ಎಂ.ಬಿ.ಪಾಟೀಲ

ಕೋಲಾರ: ಕೈಗಾರಿಕೋದ್ಯಮಗಳು ಸ್ಥಳೀಯ ಕನ್ನಡಿಗರಿಗೆ ಕೇಳಿದ್ದಕ್ಕಿಂತ ಹೆಚ್ಚು ಉದ್ಯೋಗಾವಕಾಶ ಕಲ್ಪಿಸಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಜರ್ಮನಿಯ ಕ್ರೋನ್ಸ್ ಕಂಪನಿ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ₹315 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಬಾಟ್ಲಿಂಗ್ ಯಂತ್ರಗಳ ತಯಾರಿಕಾ ಘಟಕ ನಿರ್ಮಾಣಕ್ಕೆ ಗುರುವಾರ ಶಂಕು ಸ್ಥಾಪನೆ ನೆರವೇರಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಕಾರ್ಖಾನೆಗಳಲ್ಲಿ ‘ಸಿ’ ಹಾಗೂ ‘ಡಿ’ ದರ್ಜೆಯ ನೌಕರಿ ಮಾತ್ರ ನೀಡಲಾಗುತ್ತಿದೆ ಎಂಬ ತಪ್ಪು ಕಲ್ಪನೆ ಇದೆ. ಶೇ 65ರಷ್ಟು ‘ಎ’ ಮತ್ತು ‘ಬಿ’ ದರ್ಜೆಯ ಉದ್ಯೋಗಗಳನ್ನು ಸ್ಥಳೀಯ ಕನ್ನಡಿಗರಿಗೆ ನೀಡಲಾಗಿದೆ ಎಂದು ಅವರು ಸಮರ್ಥಿಸಿಕೊಂಡರು.

ಬೆಂಗಳೂರಿನಲ್ಲಿ ನಡೆದ ಹೂಡಿಕೆದಾರರ ಸಮಾವೇಶದಲ್ಲಿ ಒಪ್ಪಂದ ಆಗಿರುವ ಪೈಕಿ ಶೇ 70ರಷ್ಟು ಹೂಡಿಕೆ ಬೆಂಗಳೂರಿನಿಂದ ಹೊರಗಡೆ ರಾಜ್ಯದ ಇತರ ಕಡೆ ಆಗಲಿದೆ. ಹೂಡಿಕೆದಾರರೊಂದಿಗೆ ಎರಡು ದಿನ ಸಮಾಲೋಚನೆ ನಡೆಸಿದ ನಂತರ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಹೇಳಿದರು.

ಅಕ್ರಮ ಫೈನಾನ್ಸ್: ಮನೆ, ಕಚೇರಿ ಮೇಲೆ ಪೊಲೀಸ್ ದಾಳಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಮೈಕ್ರೊ ಫೈನಾನ್ಸ್ ಹೆಸರಿನಲ್ಲಿ ಜಿಲ್ಲೆಯಾದ್ಯಂತ ಅಕ್ರಮವಾಗಿ ಕಿರುಸಾಲ, ಬಡ್ಡಿ ವ್ಯವಹಾರ (ಲೇವಾದೇವಿ) ನಡೆಸುತ್ತಿದ್ದ 104 ವ್ಯಕ್ತಿಗಳ ಮನೆ ಮತ್ತು ಕಚೇರಿಗಳ ಮೇಲೆ ಜಿಲ್ಲಾ ಪೊಲೀಸರು ದಾಳಿ ನಡೆಸಿದ್ದಾರೆ.


ಲಕ್ಷ್ಮಣ ನಿಂಬರಗಿ

ದಾಳಿ ವೇಳೆ 37 ಜನರ ಬಳಿ ಅನಧಿಕೃತ ಲೇವಾದೇವಿಗೆ ಸಂಬಂಧಿಸಿದ ನಗದು ಹಣ, ಖಾಲಿ ಬಾಂಡ್, ಚೆಕ್, ಕ್ರಯ ಪತ್ರ, ಪಹಣಿ ಪತ್ರ ಮತ್ತು ಬ್ಯಾಂಕ್ ಪಾಸ್‌ಬುಕ್‌ಗಳು ಸೇರಿದಂತೆ ಇತರೆ ಮಹತ್ವದ ದಾಖಲೆಪತ್ರಗಳು ಸಿಕ್ಕಿವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘₹62.29 ಲಕ್ಷ ನಗದು, 55 ಗ್ರಾಂ ಚಿನ್ನಾಭರಣ, 489 ಖಾಲಿ ಬಾಂಡ್, 285 ಖಾಲಿ ಚೆಕ್, 95 ಪಾಸ್‌ಬುಕ್, 26 ಕರಾರು ಪತ್ರ ಮತ್ತು 245 ಇತರೆ ದಾಖಲಾತಿಗಳನ್ನು ವಶಕ್ಕೆ ಪಡೆಯಲಾಗಿದೆ. ಎಲ್ಲವನ್ನೂ ಜಿಲ್ಲಾಧಿಕಾರಿ ಕಚೇರಿಗೆ ಸಲ್ಲಿಸಿ, ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ನಿರ್ಮಲಾನಂದನಾಥ ಸ್ವಾಮೀಜಿ 12ನೇ ಪಟ್ಟಾಭಿಷೇಕ ಮಹೋತ್ಸವ

‘ಅಧರ್ಮದ ಕೈಗೆ ವಿಜ್ಞಾನ ಸಿಕ್ಕರೆ ಹಾನಿ’

ಪ್ರಜಾವಾಣಿ ವಾರ್ತೆ


ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಗುರುವಾರ 2025ನೇ ಸಾಲಿನ ‘ವಿಜ್ಞಾತಂ ಪ್ರಶಸ್ತಿ’ಯನ್ನು ಜುನಾ ಅಖಾಡದ ಆಚಾರ್ಯ ಮಹಾಮಂಡಲೇಶ್ವರರಾದ ಸ್ವಾಮಿ ಅವಧೇಶಾನಂದ ಗಿರಿ ಮಹಾರಾಜ್ ಅವರಿಗೆ ಪ್ರದಾನ ಮಾಡಲಾಯಿತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ನಿರ್ಮಲಾನಂದನಾಥ ಸ್ವಾಮೀಜಿ, ಶಾಸಕ ಶರತ್ ಬಚ್ಚೇಗೌಡ, ಸಂಸದ ಕೆ.ಸುಧಾಕರ್ ಮತ್ತು ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ನಾಗಮಂಗಲ (ಮಂಡ್ಯ): ಇಲ್ಲಿನ ಆದಿಚುಂಚನಗಿರಿ ಮಠದಲ್ಲಿ ಗುರುವಾರ 2025ನೇ ಸಾಲಿನ ‘ವಿಜ್ಞಾತಂ ಪ್ರಶಸ್ತಿ’ಯನ್ನು ಜುನಾ ಅಖಾಡದ ಆಚಾರ್ಯ ಮಹಾಮಂಡಲೇಶ್ವರರಾದ ಅವಧೇಶಾನಂದ ಗಿರಿ ಮಹಾರಾಜ್ ಅವರಿಗೆ ಪ್ರದಾನ ಮಾಡಲಾಯಿತು.

ಮಠದ ಬಿ.ಜಿ.ಎಸ್ ಸಭಾಂಗಣದಲ್ಲಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರ 12ನೇ ವಾರ್ಷಿಕ ಪಟ್ಟಾಭಿಷೇಕೋತ್ಸವದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ವಿಜ್ಞಾನ–ತಂತ್ರಜ್ಞಾನ ಯಾವಾಗಲೂ ಧರ್ಮದ ಜೊತೆಗೆ ಇರಬೇಕು. ವಿಜ್ಞಾನ ವಿವೇಕಿಗಳ ಕೈಯಲ್ಲಿ ಇದ್ದರೆ ಮಾತ್ರ ಸುರಕ್ಷಿತವಾಗಿರುತ್ತದೆ. ನಾವು ಧರ್ಮದ ಜೊತೆಗೆ ವಿಜ್ಞಾನವನ್ನು ತೆಗೆದುಕೊಂಡು ಹೋದಾಗ ಸಮಾಜವು ಅಭಿವೃದ್ಧಿ ಆಗುತ್ತದೆ. ಆದರೆ, ಅಧರ್ಮದ ಕೈಗೆ ವಿಜ್ಞಾನ ಸಿಕ್ಕರೆ ಸಮಾಜಕ್ಕೆ ಹಾನಿ ಉಂಟಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

‘ವಿಜ್ಞಾನ ಮತ್ತು ಧರ್ಮಗಳು ಒಟ್ಟಿಗೆ ಹೋದರೆ ಎಂಥ ಪರಿಣಾಮಗಳನ್ನು ಪಡೆಯಲು ಸಾಧ್ಯವೆಂಬುದಕ್ಕೆ ವಿಜ್ಞಾತಂ ಉತ್ಸವ ಸಾಕ್ಷಿಯಾಗಿದೆ. ವಿಜ್ಞಾನಕ್ಕೂ ಮಠಕ್ಕೂ ಏನು ಸಂಬಂಧ? ನಾವೆಲ್ಲರೂ ಮಠವೆಂದರೆ ಧರ್ಮದ ಮಾರ್ಗದಲ್ಲಿ ಜನ ನಡೆಯುವಂತೆ ಮಾಡುವುದೆಂದು ತಿಳಿದಿದ್ದೇವೆ. ಆದರೆ, ನಿರ್ಮಲಾನಂದನಾಥ ಸ್ವಾಮೀಜಿ ಅವರು ಮಠಕ್ಕೂ ಮತ್ತು ವಿಜ್ಞಾನ–ತಂತ್ರಜ್ಞಾನಕ್ಕೂ ಇರುವ ಸಂಬಂಧವನ್ನು ವಿಜ್ಞಾತಂ ಉತ್ಸವದಲ್ಲಿ ತೋರಿಸಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿ, ‘ವಿಜ್ಞಾತಂ ಎಂಬುದು ವಿಜ್ಞಾನ, ಜ್ಞಾನ ಮತ್ತು ತಂತ್ರಜ್ಞಾನದ ಸಮ್ಮಿಲನ. ವಿಜ್ಞಾನ ಹಾಗೂ ತಂತ್ರಜ್ಞಾನವು ಜ್ಞಾನದ ಜೊತೆಗೆ ಸೇರಬೇಕು. ಆಗ ಮಾತ್ರವೇ ಅಭಿವೃದ್ಧಿ ಸಾಧ್ಯವಾಗಲಿದೆ’ ಎಂದು ಹೇಳಿದರು.

ಚಿಕ್ಕಬಳ್ಳಾಪುರ ಸಂಸದ ಕೆ.ಸುಧಾಕರ್ ಮತ್ತು ಹೊಸಕೋಟೆ ಕ್ಷೇತ್ರದ ಶಾಸಕ ಶರತ್ ಬಚ್ಚೇಗೌಡ ಅವರು ಉಪಸ್ಥಿತರಿದ್ದರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ, ವಿಭಾಗ ಸಂಖ್ಯೆ–2 ಆಲಮೇಲ–586202.
ದೂರವಾಣಿ ಸಂ:08488–232298.
ಇ–ಮೇಲ್:kbjnleealmel@gmail.com

ಸಂ:ಕೃಭಾಜನಿನಿ/ಇಂಶಾಕಾ/ವಿ–2/ಆಲಮೇಲ/ಪಿಬಿ/ಟೆಂಡರ್–1/ಹೊರಗುತ್ತಿಗೆ/2024–25/1064 ದಿನಾಂಕ:17.02.2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ ಇಂಶಾಕಾ, ವಿಭಾಗ ಸಂ: 2, ಆಲಮೇಲ ಇವರು ಲಂಪಸಂಪ್ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಕೆಟಿಪಿಪಿ ಕಾಯ್ದೆ ನಿಯಮ–28 ರನ್ವಯ ದ್ವಿ ಲಕೋಟೆ ಪದ್ಧತಿಯುನ್ನು ಅನುಸರಿಸಲಾಗುವುದು.ಕರ್ನಾಕಟ ರಾಜ್ಯ ಕಾರ್ಮಿಕಇಲಾಖೆಯಡಿ ನೊಂದಾಯಿತ ಫರ್ಮ್/ ಏಜೆನ್ಸಿಗಳಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕಾಮಗಾರಿ ಹೆಸರು: Providing Man Power services such as 1) Typist 2) Attender and 3) Peon for various offices of KBJNL IBC Division No-02 Almel for the period of One year. **ಟೆಂಡರ್‌ಗಿಟ್ಟ ಮೊತ್ತ ರೂ. 11.18** ಲಕ್ಷಗಳು ಇ.ಎಂ.ಡಿ. ಮೊತ್ತ ರೂ. 22,400/–

ಕಾಮಗಾರಿ ಹೆಸರು: Procuring Outsource Staff such as Typist, Peon for sub division & Driver for divison office under Executive Engineer KBJNL IBC Division No-02 Almel. **ಟೆಂಡರ್‌ಗಿಟ್ಟ ಮೊತ್ತ ರೂ. 9.04** ಲಕ್ಷಗಳು ಇ.ಎಂ.ಡಿ. ಮೊತ್ತ ರೂ. 18,100/–

ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ ವೆಬ್‌ಸೈಟ್‌ನಲ್ಲಿ http://kppp.karnataka.gov.in ಪಡೆದುಕೊಳ್ಳಬಹುದು.

ಟೆಂಡರಿನ ವಿವಿಧ ಹಂತಗಳು: 1) ಟೆಂಡರ್ ಡಾಕ್ಯೂಮೆಂಟನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ ಮತ್ತು ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸಲು ಕಾಲಾವಧಿಯು **ದಿನಾಂಕ: 21.02.2025 ರಿಂದ 07.03.2025 ರ ಸಾಯಂಕಾಲ 4.30 ಗಂಟೆಯವರೆಗೆ.** 2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 10.03.2025 ಬೆಳಿಗ್ಗೆ 11.00 ಗಂಟೆ.** 3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 17.03.2025 ಬೆಳಿಗ್ಗೆ 11.00 ಗಂಟೆ.**

ಟಿಪ್ಪಣಿ: 1) ಮೇಲೆ ತಿಳಿಸಿದ ದಿನಾಂಕಗಳು ಸಾರ್ವಜನಿಕ ರಜಾ ದಿನವಾದಲ್ಲಿ ಅಥವಾ ಹಾಗೆ ಘೋಷಿಸಿದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು. 2) ಷರತ್ತಿನ ಟೆಂಡರುಗಳನ್ನು ನಿರಾಕರಿಸಲಾಗುವುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು, ಟೆಂಡರುಗಳನ್ನು ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 3) ಹೆಚ್ಚಿನ ವಿವರಗಳಿಗಾಗಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಐಬಿಸಿ ವಿಭಾಗ ನಂ.2, ಆಲಮೇಲ.

ವಾಸಾಸಂಇ/ವಿಜಯಪುರ/710/ಕೆಎಸ್‌ಎಂಸಿಎ/2024–25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು–560001, ಕರ್ನಾಟಕ, ಇಂಡಿಯಾ.
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080–25586321
E-mail: ho@kspcb.gov.in, Website: https://kspcb.karnataka.gov.in

ಸಂಖ್ಯೆ: ಮಾನಿಮಂ/310/ಹಿಪಅ/ಗಣಿ/ಪಸಾಸ/2024–25/4874 ನಾಂಕ : 19.02.2025

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಮೆ. ಎ.ಸಿ.ಸಿ. ಲಿಮಿಟೆಡ್(ವಾಡಿ ಸಿಮೆಂಟ್ ವರ್ಕ್ಸ್) ರವರು ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಇಂಗಳಗಿ ಹಾಗು ರಾವೂರು ಗ್ರಾಮಗಳಲ್ಲಿ ಅಸ್ತಿತ್ವದಲ್ಲಿರುವ 471.03 ಹೆಕ್ಟೇರ್ ಗಣಿ ಗುತ್ತಿಗೆ ಪ್ರದೇಶದಲ್ಲಿ ವಾರ್ಷಿಕ 7.72 ಮಿಲಿಯನ್ ಟನ್ ಸಾಮರ್ಥ್ಯದ ಲೈಮ್‌ಸ್ಟೋನ್ ಮತ್ತು ಶೇಲ್ ಉತ್ಪಾದನೆ ಜೊತೆಗೆ ವಾರ್ಷಿಕ 5.0 ಲಕ್ಷ ಕ್ಯೂ. ಮಿ. (ಗರಿಷ್ಠ) ಸಾಮರ್ಥ್ಯದ ತ್ಯಾಜ್ಯ/ಮೇಲ್ಮಣ್ಣು ಹಾಗು ಅಸ್ತಿತ್ವದಲ್ಲಿರುವ ಮೂರು 850 ಟಿ.ಪಿ.ಹೆಚ್., 1000 ಟಿ.ಪಿ.ಹೆಚ್. ಹಾಗೂ 1200 ಟಿ.ಪಿ.ಹೆಚ್. ಸಾಮರ್ಥ್ಯದ ಸುಣ್ಣದ ಕಲ್ಲಿನ ಕ್ರಷರ್‌ಗಳನ್ನು ಸ್ಥಾಪಿಸಿದ್ದು, ಸದರಿ ಯೋಜನೆಗೆ ಕೇಂದ್ರ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಂದ ಪರಿಸರ ವಿಮೋಚನಾ ಪತ್ರ ಸಂಖ್ಯೆ: J-11015/7/2000-IA.II(M), ದಿನಾಂಕ:07.09.2000 ರಂದು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 1994ರ ಅಡಿಯಲ್ಲಿ ಈಗಾಗಲೇ ಪಡೆದಿರುತ್ತಾರೆ. ಪ್ರಸ್ತುತ, MoEF&CC ಹೊರಡಿಸಿರುವ ಜ್ಞಾಪನ ಪತ್ರ ದಿನಾಂಕ:06.04.2018ರ ಪ್ರಕಾರ, ಯೋಜನ ಪ್ರವರ್ತಕರು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006ರ ಅಡಿಯಲ್ಲಿ ಪರಿಸರ ಅನುಮತಿಯನ್ನು ಮರುಮೌಲೀಕರಿಸಲು ಉದ್ದೇಶಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ, ಉತ್ಪಾದನಾ ಸಾಮರ್ಥ್ಯ ಮತ್ತು ಗಣಿ ಗುತ್ತಿಗೆ ಪ್ರದೇಶದಲ್ಲಿ ಯಾವುದೇ ಹೆಚ್ಚಳವಿರುವುದಿಲ್ಲ. ಈ ಯೋಜನೆಯು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006ರ ಮತ್ತು ಅದರ ನಂತರದ ತಿದ್ದುಪಡಿಗಳ ಪ್ರಕಾರ “A” ಪ್ರವರ್ಗಕ್ಕೆ ಸೇರುತ್ತದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ:14.09.2006ರ (ತಿದ್ದುಪಡಿ ದಿನಾಂಕ:01.12.2009) ಪ್ರಕಾರ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಕೇಂದ್ರ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: F. No. IA-J11015/153/2018-IA-II(M), ದಿನಾಂಕ: 29.01.2021 ಮತ್ತು ತಿದ್ದುಪಡಿಯ ದಿನಾಂಕ: 09.06.2022 ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ ದಿನಾಂಕ:28.01.2025ರ ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಕಲಬುರಗಿ ಇವರ ಪತ್ರ ದಿನಾಂಕ: 28.01.2025ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕಳಕಂಡಂತಿವೆ.

1. ಕಂಪನಿಯ ಹೆಸರು ಮತ್ತು ವಿಳಾಸ: ಮೆ. ಎ.ಸಿ.ಸಿ. ಲಿಮಿಟೆಡ್, ವಾಡಿ ಸಿಮೆಂಟ್ ವರ್ಕ್ಸ್, ವಾಡಿ ಅಂಚೆ, ಕಲಬುರಗಿ ಜಿಲ್ಲೆ–585225.

2. ಉದ್ದೇಶಿತ ಯೋಜನೆಯ ಸ್ಥಳ : ಇಂಗಳಗಿ ಹಾಗೂ ರಾವೂರು ಗ್ರಾಮ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ.

3. ಉದ್ದೇಶಿತ ಯೋಜನೆಯ ವಿವರ : ಮೆ. ಎ.ಸಿ.ಸಿ. ಲಿಮಿಟೆಡ್(ವಾಡಿ ಸಿಮೆಂಟ್ ವರ್ಕ್ಸ್) ರವರು ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ಇಂಗಳಗಿ ಹಾಗು ರಾವೂರು ಗ್ರಾಮಗಳಲ್ಲಿ ಅಸ್ತಿತ್ವದಲ್ಲಿರುವ 471.03 ಹೆಕ್ಟೇರ್ ಗಣಿ ಗುತ್ತಿಗೆ ಪ್ರದೇಶದಲ್ಲಿ ವಾರ್ಷಿಕ 7.72 ಮಿಲಿಯನ್ ಟನ್ ಸಾಮರ್ಥ್ಯದ ಲೈಮ್‌ಸ್ಟೋನ್ ಮತ್ತು ಶೇಲ್ ಉತ್ಪಾದನೆ ಜೊತೆಗೆ ವಾರ್ಷಿಕ 5.0 ಲಕ್ಷ ಕ್ಯೂ. ಮಿ. (ಗರಿಷ್ಠ) ಸಾಮರ್ಥ್ಯದ ತ್ಯಾಜ್ಯ/ಮೇಲ್ಮಣ್ಣು ಹಾಗು ಅಸ್ತಿತ್ವದಲ್ಲಿರುವ ಮೂರು 850 ಟಿ.ಪಿ.ಹೆಚ್., 1000 ಟಿ.ಪಿ.ಹೆಚ್. ಹಾಗೂ 1200 ಟಿ.ಪಿ.ಹೆಚ್. ಸಾಮರ್ಥ್ಯದ ಸುಣ್ಣದ ಕಲ್ಲಿನ ಕ್ರಷರ್‌ಗಳನ್ನು ಸ್ಥಾಪಿಸಿದ್ದು, ಸದರಿ ಯೋಜನೆಗೆ ಕೇಂದ್ರ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಂದ ಪರಿಸರ ವಿಮೋಚನಾ ಪತ್ರ ಸಂಖ್ಯೆ: J-11015/7/2000-IA.II(M), ದಿನಾಂಕ:07.09.2000 ರಂದು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 1994ರ ಅಡಿಯಲ್ಲಿ ಈಗಾಗಲೇ ಪಡೆದಿರುತ್ತಾರೆ. ಪ್ರಸ್ತುತ, MoEF&CC ಹೊರಡಿಸಿರುವ ಜ್ಞಾಪನ ಪತ್ರ ದಿನಾಂಕ:06.04.2018ರ ಪ್ರಕಾರ, ಯೋಜನ ಪ್ರವರ್ತಕರು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006ರ ಅಡಿಯಲ್ಲಿ ಪರಿಸರ ಅನುಮತಿಯನ್ನು ಮರುಮೌಲೀಕರಿಸಲು ಉದ್ದೇಶಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ, ಉತ್ಪಾದನಾ ಸಾಮರ್ಥ್ಯ ಮತ್ತು ಗಣಿ ಗುತ್ತಿಗೆ ಪ್ರದೇಶದಲ್ಲಿ ಯಾವುದೇ ಹೆಚ್ಚಳವಿರುವುದಿಲ್ಲ.

4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ : 25.03.2025 (ಮಂಗಳವಾರ), ಸಮಯ : ಬೆಳಗ್ಗೆ 11:00 ಗಂಟೆ, ಸ್ಥಳ: ಯೋಜನಾ ಸ್ಥಳ, ಮೆ. ಎ.ಸಿ.ಸಿ ಲಿಮಿಟೆಡ್, ಸರ್ವೆ. ನಂ. 129, ಹೊಸ ಗಣಿ ಕಛೇರಿ, ವಾಡಿ ಇಂಗಳಗಿ ರಸ್ತೆ, ಹಳೆ ಘಟಕದ ಪಕ್ಕ, ವಾಡಿ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ.

5. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ : (ಅ) ಜಿಲ್ಲಾಧಿಕಾರಿಗಳ ಕಛೇರಿ, ಕಲಬುರಗಿ ಜಿಲ್ಲೆ, ಕಲಬುರಗಿ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕಲಬುರಗಿ ಜಿಲ್ಲೆ, ಕಲಬುರಗಿ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕಲಬುರಗಿ ಜಿಲ್ಲೆ, ಕಲಬುರಗಿ. (ಈ) ತಹಶೀಲ್ದಾರರ ಕಾರ್ಯಲಯ, ಚಿತ್ತಾಪುರ ತಾಲ್ಲೂಕು, ಕಲಬುರಗಿ ಜಿಲ್ಲೆ. (ಉ) ಗ್ರಾಮ ಪಂಚಾಯತ್ ಕಾರ್ಯಾಲಯ, ಇಂಗಳಗಿ ಗ್ರಾಮ ಪಂಚಾಯತ್, ಚಿತ್ತಾಪುರ ತಾಲ್ಲೂಕು (ಊ) ಗ್ರಾಮ ಪಂಚಾಯತ್ ಕಾರ್ಯಾಲಯ, ರಾವೂರು ಗ್ರಾಮ ಪಂಚಾಯತ್, ಚಿತ್ತಾಪುರ ತಾಲ್ಲೂಕು. (ಋ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ. (ಎ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. (ಏ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, “ಪರಿಸರ ಭವನ”, ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **https://kspcb.karnataka.gov.in/** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ: ಪಿಬಿ/5054 ರಾಹೆ/ಜಿಮುರ/ಅಧಿಸೂಚನೆ: 2024–25/2811 ದಿನಾಂಕ: 18.02.2025

ಇ–ಟೆಂಡರ್ ಅಧಿಸೂಚನೆ IFT-KW-3/4 ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ) (ಅಲ್ಪಾವಧಿ) (ಎರಡನೇ ಕರೆ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ. ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. **ಒಟ್ಟು 5 ಕಾಮಗಾರಿಗಳು**

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ **ದಿನಾಂಕ: 27–02–2025 (16.00 ಗಂಟೆಗೆ)** (2) ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 28–02–2025 (16.00 ಗಂಟೆವರೆಗೆ)** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 01–03–2025 (16.30 ಗಂಟೆವರೆಗೆ)** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 03–03–2025 (16.00 ಗಂಟೆವರೆಗೆ)**

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ,
ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/ADK/KSMCA/908/24-25 dt.20.02.2025

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ ಮತ್ತು ಗುಣ ಆಶ್ವಾಸನೆ)
9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.

ನಂ. ಬೆಂಜಮಂ/ಮುಅ(ವಿ&ಗುಆ)/ಅಮುಅ/ತಾಂಸ/4050/2024–25 ದಿನಾಂಕ: 20.02.2025

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ **ಪ್ರಸ್ತಾವಿತ ಕಾವೇರಿ ನೀರನ್ನು ತುಂಬಿಸುವ ಕೇಂದ್ರಗಳಿಗೆ ಮತ್ತು ಜಿಎಲ್‌ಆರ್‌ನಲ್ಲಿ ಭರ್ತಿಯಾದ ಮಟ್ಟವನ್ನು ನಿರ್ಧರಿಸಲು ಐಒಟಿ ಮತ್ತು ಆರ್‌ಎಫ್‌ಐಡಿ ಆಧಾರಿತ ತಾಂತ್ರಿಕತೆ ಒದಗಿಸುವ ಕಾಮಗಾರಿಗಾಗಿ** ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಮೊತ್ತ: **ರೂ. 330.44 ಲಕ್ಷಗಳು**. ಇಎಂಡಿ: **ರೂ. 4,96,000/–**.
ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **07.03.2025**ರ ಸಂಜೆ **4:00** ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **10.03.2025** ರಂದು ಸಂಜೆ **4:05** ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ವಿನ್ಯಾಸ ಮತ್ತು ಗುಣ ಆಶ್ವಾಸನೆ)

DIPR/CP/MIA/5225/2024-25

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಸಅಸಂ/ಟೆಂಡರ್/ಸಿಆರ್–01/24–25 ದಿ: 17.02.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2025–26 ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಡಿಯಲ್ಲಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ ಪ್ರದೇಶಗಳಲ್ಲಿ ನೆಡುತೋಪು ರಚನೆ, ನೆಡುತೋಪು ನಿರ್ವಹಣೆ ಹಾಗೂ ಸಸಿಗಳ ನಿರ್ವಹಣೆ ಕಾಮಗಾರಿ" ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2024–25 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:07–03–2025 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/147/02/1690

ಕರ್ನಾಟಕ ಸರ್ಕಾರ
ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿ ರಾವ್ ರಸ್ತೆ, ಮೈಸೂರು.

ಸಂಖ್ಯೆ: ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ-16/2024-25 ದಿನಾಂಕ: 10.02.2025

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಸರ್ವಿಸ್ ಕಾಮಗಾರಿ: 1) **ಟೆಂಡರ್ ಪ್ರಕಟಣೆ ಸಂಖ್ಯೆ.: ಟಿಎನ್–65/2024–25, ದಿನಾಂಕ: 10.02.2025. ಒಟ್ಟು ಕಾಮಗಾರಿಗಳು: 01. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 99.00.** ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 10.02.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 17.02.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 18.02.2025 ಸಂಜೆ 5.30 ಗಂಟೆಗೆ.**

2) **ಟೆಂಡರ್ ಪ್ರಕಟಣೆ ಸಂಖ್ಯೆ.: ಟಿಎನ್–67/2024–25, ದಿನಾಂಕ: 12.02.2025. ಒಟ್ಟು ಕಾಮಗಾರಿಗಳು: 52. ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ): 937.87.** ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 12.02.2025 ರಿಂದ 13.02.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 20.02.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 21.02.2025 ಸಂಜೆ 5.30 ಗಂಟೆಗೆ.**

ಸೇವಾ ಟೆಂಡರ್: 3) **ಟೆಂಡರ್ ಪ್ರಕಟಣೆ ಸಂಖ್ಯೆ.: ಟಿಎನ್–68/2024–25, ದಿನಾಂಕ: 120.02.2025. ಒಟ್ಟು ಕಾಮಗಾರಿಗಳು: 01.** ಕೆಪಿಪಿ ಪೋರ್ಟಲ್ ಟೆಂಡರ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 12.02.2025 ಬೆಳಗ್ಗೆ 11.00 ರ ನಂತರ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19.02.2025 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ **ದಿನಾಂಕ: 20.02.2025 ಸಂಜೆ 5.30 ಗಂಟೆಗೆ.**

ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ **(https://kppp.karnataka.gov.in)** ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು (ಪೂರ್ವ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

DIPR/MYS/RO/1327/2024-25

ಪ್ರಧಾನ ಇಂಜಿನಿಯರ್‌ರವರ ಕಛೇರಿ, ಪಿ.ಆರ್.ಎ.ಎಂ.ಸಿ., ಪಿ.ಡಬ್ಲ್ಯೂ.ಡಿ., ಬೆಂಗಳೂರು–560001
ಸಂಖ್ಯೆ: ಪ್ರಿಂ/ಲೋಇ/40/ಪಿಆರ್‌ಎಎಂಸಿ/2024–25/1317 ದಿನಾಂಕ: 19.02.2025

ಟೆಂಡರ್ ಪ್ರಕಟಣೆ

ಬೆಂಗಳೂರಿನಲ್ಲಿ ಒಂದು ಕಟ್ಟಡ ಕಾಮಗಾರಿಗೆ ಟೆಂಡರ್ ಅನ್ನು ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಕೆಪಿಪಿ ಪೋರ್ಟಲ್ (www.kppp.karnataka.gov.in) ನಿಂದ ದಿನಂಕ: 20.02.2025 ರಂದು ಅಪರಾಹ್ನ 05:30ರ ನಂತರ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ, ಲೋ.ಇ. ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/5210/ಆಕಾರ್/2024–25

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ

ಸಂಖ್ಯೆ.ಇ.ಒ/ಎಸ್.ಪಿ.ಒ/ಕೆಪಿಪಿಪಿ/19/2024–25 ದಿನಾಂಕ: 18–02–2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳು ಸರಬರಾಜು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: ಪ್ರಿ–ಬಿಡ್ ಮೀಟಿಂಗ್ **ದಿನಾಂಕ: 28.02.2025 ರಂದು ಬೆಳಿಗ್ಗೆ 11:30 ಕ್ಕೆ** ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 04.03.2025 ಸಂಜೆ 4:00 ಗಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06.03.2025 ರ ಬೆಳಿಗ್ಗೆ 10:30 ಕ್ಕೆ** ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ: 08.03.2025ರ ಬೆಳಿಗ್ಗೆ 10:30 ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಸೂಚನೆ: ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: **91-8046010000, + 91-8068948777 support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/RO5209/AAPL/2024-25

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS
ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಮೊದಲ ಮಹಡಿ ಸಂಖ್ಯೆ 59, ಕುಮಾರ ಪಾರ್ಕ್ ಪಶ್ಚಿಮ ವಿಸ್ತರಣೆ, ರೈಲ್ವೆ ಪ್ಯಾರಲಲ್ ರೋಡ್, ಶೇಷಾದ್ರಿಪುರಂ, ಬೆಂಗಳೂರು 560020

ಸಂಖ್ಯೆ: KSEDCL/ITS-GOODS/COM/2024-25 ದಿನಾಂಕ: 21.02.2025

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), 1) ಸಮ್ಮೇಳನ ಸಭಾಂಗಣಕ್ಕೆ ಸ್ಮಾರ್ಟ್ ಟಿವಿ, ಕ್ಯಾಮೆರಾ, ಮೈಕ್ರೊಫೋನ್, ವ್ಯವಸ್ಥೆಗಳ ಪೂರೈಕೆ ಮತ್ತು ಸ್ಥಾಪನೆ ಮಾಡಲು ಸಂಸ್ಥೆಗಳನ್ನು ಆಯ್ಕೆ ಮಾಡಲು ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವಂತೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080–2222 5645 / 8105844665)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ವಿಸ್ತರಿಸಲಾದ ಕೊನೆಯ ದಿನಾಂಕ
1	KEONICS/2024-25/IND0287	i. ಸಮ್ಮೇಳನ ಸಭಾಂಗಣಕ್ಕೆ ಸ್ಮಾರ್ಟ್ ಟಿವಿ, ಕ್ಯಾಮೆರಾ, ಮೈಕ್ರೊಫೋನ್, ವ್ಯವಸ್ಥೆಗಳ ಪೂರೈಕೆ ಮತ್ತು ಸ್ಥಾಪನೆ	28.02.2025

DIPR/CP/BCPL/5221/2024-25
ಸಹಿ/– ನಿರ್ದೇಶಕರು (ಹಣಕಾಸು)

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Pho: 08194-234488 Email:-eerdwsd.chd@gmail.com

ನಂ.ಗ್ರಾ.ನೀ.ಸ.&ನೈ./ವಿ/ಚಿ/ಸ್ವಭಾಕೋ/2024–25/1210 ದಿನಾಂಕ:–19.02.2025

ಕೊಟೇಷನ್ ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿತ್ರದುರ್ಗ ವ್ಯಾಪ್ತಿಯ ಹಿರಿಯೂರು ತಾಲ್ಲೂಕಿನ ಧರ್ಮಪುರ ಮತ್ತು ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 2024–25 ನೇ ಸಾಲಿನ ಸ್ವಚ್ಛ ಭಾರತ್ ಕೋಷ್ ಯೋಜನೆಯಡಿ ಬೂದು ನೀರು ಹಾಗೂ ಮಲ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ನೂತನ ತಾಂತ್ರಿಕತೆಯನ್ನು ಒಳಗೊಂಡಿರುವ 800 KLD capacity Absolute vermi Filter Technology for Sewage Treatment ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ, ಸದರಿ 02 ಕಾಮಗಾರಿಗಳ ವಿಸ್ತ್ರತ ಯೋಜನಾ ವರದಿಯನ್ನು ತಯಾರಿಸುವ ಸಲುವಾಗಿ Absolute Vermi Filter ಘಟಕಕ್ಕೆ ಅವಶ್ಯಕವಿರುವ ಈ ಕೆಳಕಂಡ ಐಟಂಗಳ ದರವನ್ನು ಪಡೆಯಲು ಕೊಟೇಷನ್ ಪ್ರಕಣೆಯನ್ನು ಹೊರಡಿಸಲಾಗಿದೆ. 1) Sundry Items-Chain pulley block for pump sitting. 2) Food grade crates for media filling and vermincompost or specific material sheet for handing 4) Submersible Pump 5) Strainer/Filter for silt removal 6) Sundry items. Rotarneter for flow measurement 7) Organic Media to support vermicompost and filtration 8) Bio filter Bed Covering 9) Enzymes for earthworm breeding. 10) Earthworms 11) Inorganic Media/Stone pebbles fitvation bed. 12) Ozone generator 13) MCC Panel & Electrical works 14) Sprinklers and Valves for Bio filter bed and mechanical 15) Transportation, Erection& Commissioning of complete 800KLD Biofiter system. 16) MS Prefab Modular Portable Cabin for office 17) MS Prefab Modular Portable Cabin for electrical room 18) MS Prefab Modular Portable Cabin for washroom. ಅದ್ದುದರಿಂದ ಅವಶ್ಯಕವಿರುವ ಯಂತ್ರೋಪಕರಣಗಳ ಮಾರುಕಟ್ಟೆ ದರಗಳನ್ನು ದಿನಾಂಕ: 28.02.2025 ರಂದು ಸಂಜೆ 4.00 ಗಂಟೆಯ ಒಳಗೆ ಮೊಹರಾದ ಲಕೋಟೆಯಲ್ಲಿ ಅಥವಾ ಕಛೇರಿ ಇ–ಮೇಲ್ ವಿಳಾಸವಾದ eerstwad.cho@ormail.com ಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು, ನಮೂದಿಸುವ ದರಗಳು ಜಿ.ಎಸ್.ಟಿ, ಸರಕು ಸಾಗಾಣೆ ಹಾಗೂ ಇತರೆ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

DIPR/CTA/KSMCA/626/2024-25

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ–590018, ಕರ್ನಾಟಕ, ಭಾರತ

ಕ್ರಮ ಸಂಖ್ಯೆ: ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2024–25/ಐ.ಎಫ್.ಟಿ.ನಂ.89/6026
ದಿನಾಂಕ: 19/02/2025

ಟೆಂಡರ ಪ್ರಕಟಣೆ–ದ್ವಿಲಕೋಟಿ ಪದ್ಧತಿ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ ಡಾಕ್ಯುಮೆಂಟ ಕೆ.ಡಬ್ಲ್ಯೂ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ದ್ವಿಲಕೋಟಿ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ. **ಕಾಮಗಾರಿ ಹೆಸರು:** ವಿತಾವಿಯ VIAT ಮುದ್ದೇನಹಳ್ಳಿ ಕ್ಯಾಂಪಸ್‌ನಲ್ಲಿಯ D–3 ಬ್ಲಾಕ್‌ಗೆ ತರಗತಿಯ ಡೆಸ್ಕಗಳು, ಲೆಕ್ಚರ್ ರೈಟಿಂಗ್ ಬೋರ್ಡಗಳು, ಟೇಬಲ್, ಕುರ್ಚಿಗಳು, ಕ್ಯಾಮರಾಗಳು ಮತ್ತು ಪ್ರೋಜೆಕ್ಟರ್‌ಗಳನ್ನು ಪೂರೈಸಿ ಒದಗಿಸಿ ಸ್ಥಾಪಿಸುವ **ಕಾಮಗಾರಿ ಮೊತ್ತ ರೂ. 87,03,562/ (ತೆರಿಗೆ ರಹಿತ)** ಈ ಕಾಮಗಾರಿಗೆ ಇದೇ ತರಹದ 50% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ **ದಿನಾಂಕ: 24–02–2025 ರಿಂದ** ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ಡಿಐಪಿಆರ್/ಬೆಳಗಾವಿ/1737/ಅಡ್ವರ್ಟೋ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆಂಗೇರಿ ವಿಭಾಗ,
ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ ಕಛೇರಿ ಕಟ್ಟಡ, ಸಿಎ ನಂ.3, 1ನೇ ಮುಖ್ಯರಸ್ತೆ, ಹೊರ ವರ್ತುಲ ರಸ್ತೆ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು–560060.

ಸಂಖ್ಯೆ: ಕಾಅ/ಕೆಂಗೇರಿ/ಟೆಂಡರ್/19/2024–25 ದಿನಾಂಕ: 20–02–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	ದ್ವಿ–ಲಕೋಟೆ ಪದ್ಧತಿ – (1ನೇ ಕರೆ)
1	ದೊಡ್ಡಬಿದ್ದರಕಲ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ. 26, ದೊಡ್ಡಬಿದ್ದರಕಲ್ಲು ಇಲ್ಲಿನ ನವಿಲು ನಗರ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
2	ದೊಡ್ಡಬಿದ್ದರಕಲ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ. 26, ದೊಡ್ಡಬಿದ್ದರಕಲ್ಲು ಇಲ್ಲಿನ ಬಸವೇಶ್ವರ ಬಡಾವಣೆ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.51, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
3	ದೊಡ್ಡಬಿದ್ದರಕಲ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ. 26, ದೊಡ್ಡಬಿದ್ದರಕಲ್ಲು ಇಲ್ಲಿನ ಕರಿಹೋಬನಹಳ್ಳಿ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.51, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
4	ದೊಡ್ಡಬಿದ್ದರಕಲ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ. 26, ದೊಡ್ಡಬಿದ್ದರಕಲ್ಲು ಇಲ್ಲಿನ ರೆಡ್ಡಿ ಲೇಔಟ್ ಹಾಗೂ ಮಾತ್ರುಶ್ರೀ ಲೇಔಟ್ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.51, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
5	ದೊಡ್ಡಬಿದ್ದರಕಲ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ. 27, ಲಿಂಗಧೀರನಹಳ್ಳಿ ಇಲ್ಲಿನ ಚೇತನ್ ಸರ್ಕಲ್ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
6	ದೊಡ್ಡಬಿದ್ದರಕಲ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ. 27, ಲಿಂಗಧೀರನಹಳ್ಳಿ ಇಲ್ಲಿನ ದೊಡ್ಡಣ್ಣ ಲೇಔಟ್ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
7	ಹೇರೋಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 28, ಹೇರೋಹಳ್ಳಿ ಇಲ್ಲಿನ ವೀರಭದ್ರೇಶ್ವರನಗರ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.51, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
8	ಹೇರೋಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 28, ಹೇರೋಹಳ್ಳಿ ಇಲ್ಲಿನ ಬೆನಗಲೂರಪ್ಪ ಬಡಾವಣೆ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.51, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
9	ಹೇರೋಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 28, ಹೇರೋಹಳ್ಳಿ ಇಲ್ಲಿನ ಮುದ್ದಯನಪಾಳ್ಯ, ರಾಘವೇಂದ್ರ ಬಡಾವಣೆ, ಗಣೇಶ ಫಾರಂ, ಮುನೇಶ್ವರ ಬಡಾವಣೆ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.51, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
10	ಹೇರೋಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 28, ಹೇರೋಹಳ್ಳಿ ಇಲ್ಲಿನ ಪ್ರಸನ್ನ ಲೇಔಟ್ ಹಾಗೂ ವಿಘ್ನೇಶ್ವರ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.51, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
11	ಹೇರೋಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 29, ಉಳ್ಳಾಲ ಇಲ್ಲಿನ ನಿಸರ್ಗ ಲೇಔಟ್, ಹೆಚ್.ಎಂ.ಟಿ ಲೇಔಟ್, ಉಪ್ಕರ್ ಲೇಔಟ್ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**
12	ಹೇರೋಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 29, ಉಳ್ಳಾಲ ಇಲ್ಲಿನ ಬಸಪ್ಪ ಲೇಔಟ್, ಎ.ಜಿ.ಎಸ್ ಲೇಔಟ್, ಬಸವೇಶ್ವರ ಬಡಾವಣೆ, ನೀಲಕಂಠೇಶ್ವರ ಬಡಾವಣೆ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 399.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,99,500/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **24–02–2025 ರಂದು ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **27–02–2025 ರಂದು ಮಧ್ಯಾಹ್ನ 3.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ ವಲಯ, ಬೆಂಗಳೂರು – 560098 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **03–03–2025 ರಂದು ಸಂಜೆ 4.00 ಗಂಟೆವರೆಗೆ.** 4) ಬಿಡ್‌ಗಳನ್ನು ತೆರೆಯುವ ದಿನಾಂಕ: **04–03–2025 ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬಿಬಿಎಂಪಿ.

ಸಿನಿಮಾ ಪುರವಣಿ



ಪ್ರಿಯಾ ವಾರಿಯರ್, ಶ್ರೇಯಸ್ ಮಂಜು

‘ಒಳ್ಳೆಯ ಪ್ರಯತ್ನ ಸೋತಾಗ ಭಯವಾಗುತ್ತೆ’

ಶ್ರೇಯಸ್ ಮಂಜು, ಪ್ರಿಯಾ ವಾರಿಯರ್ ಅಭಿನಯದ ವಿಷ್ಣುಪ್ರಿಯಾ ಚಿತ್ರ ಇಂದು (ಫೆ.21) ತೆರೆ ಕಾಣುತ್ತಿದೆ. ಚಿತ್ರ ಹಾಗೂ ಸಿನಿಪಯಣ ಕುರಿತು ಶ್ರೇಯಸ್ ಮಾತನಾಡಿದ್ದಾರೆ.

ವಿನಾಯಕ ಕೆ.ಎಸ್

- **ಚಿತ್ರದಲ್ಲಿ ಕಾಲೇಜು ಹುಡುಗನ ಪಾತ್ರವೇ?**

1990ರ ಕಾಲಘಟ್ಟದ ಪ್ರೇಮಕಥೆಯಿದು. ಮುಗ್ಧ ಹುಡುಗನೊಬ್ಬ ಪ್ರೀತಿಯ ಬಲೆಯಲ್ಲಿ ಬಿದ್ದಾಗ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರಕಥೆ. ಇಲ್ಲಿ ಕಥೆಗಿಂತ ಹೆಚ್ಚಾಗಿ ಕಥೆಯನ್ನು ತೋರಿಸಿರುವ ರೀತಿ ಹೊಸತಾಗಿದೆ. ಕಾಲೇಜು ಹುಡುಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮಲೆನಾಡು ಭಾಗದ ಕಾಲೇಜಿನಲ್ಲಿ ಓದುವ ಹುಡುಗ. ಪ್ರೀತಿಯಲ್ಲಿ ಬಿದ್ದಾಗ ಎದುರಾಗುವ ಸಮಸ್ಯೆಗಳು, ಆಗುವ ಅವಮಾನಗಳನ್ನು ಹೇಳುವ ಭಾವತೀವ್ರತೆಯಿಂದ ಕೂಡಿದ ಪಾತ್ರ. ಪ್ರೀತಿಯಿಂದಾಗುವ ಸಮಸ್ಯೆಗಳನ್ನು ಈಗಲೂ ಹೇಳುಕೊಳ್ಳುವುದು ಕಷ್ಟ. ಅಂಥದ್ದರಲ್ಲಿ 1990ರ ಕಾಲದಲ್ಲಿ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಪ್ರೀತಿಗೋಸ್ಕರ ಎಷ್ಟೆಲ್ಲ ಕಷ್ಟಪಡುತ್ತಾನೆ ಎಂಬುದರ ಹಿಂದೆ ಕಥೆ ಸಾಗುತ್ತದೆ.

- **ನಿಮ್ಮ ಹಿಂದಿನ ಸಿನಿಮಾಗಳಿಗಿಂತ ಹೇಗೆ ಭಿನ್ನವಾಗಿದೆ?**

ಕಥೆ ಕೇಳಿದಾಗ ಇಷ್ಟೆಲ್ಲ ಅವಮಾನ ಎದುರಿಸಿದ ನಂತರವೂ ಹುಡುಗ ಮತ್ತೆ ಪ್ರೀತಿಯಲ್ಲಿ ಬೀಳುತ್ತಾನಾ ಅನಿಸಿತ್ತು. ಈ ರೀತಿ ಪಾತ್ರ ಮಾಡುವುದು ಸವಾಲು ಎನಿಸಿತು. ಆದರೆ ನಿರ್ದೇಶಕರು ನಟನೆ ತೆಗೆಸಿದರು. ಹಿಂದಿನ ಎಲ್ಲ ಪಾತ್ರಗಳಿಗಿಂತ ಈ ಪಾತ್ರಕ್ಕೆ ಪ್ರೇಕ್ಷಕರ ಚಪ್ಪಾಳೆ ಸಿಗುತ್ತದೆ ಎಂಬ ಭರವಸೆಯಿದೆ. ಪ್ರೀತಿಯ ಪಯಣದ ಜೊತೆಗೆ ಮೂರು ಫೈಟ್‌ಗಳಿವೆ. ಇದು ಕಮರ್ಷಿಯಲ್ ಚಿತ್ರ.

- **ನಿಮ್ಮ ಮುಂದಿನ ಯೋಜನೆಗಳ ಕುರಿತು...**

‘ಪಡ್ಡೆ ಹುಲಿ’ ಮುಗಿದ ಮೇಲೆ ಕೈಗೆತ್ತಿಕೊಂಡ ಚಿತ್ರವಿದು. ಆದರೆ ಇದಕ್ಕಿಂತ ಮೊದಲು ‘ರಾಣಾ’ ಚಿತ್ರ ಮುಗಿದು ಬಿಡುಗಡೆಯಾಯ್ತು. ಇದು ನನ್ನ ಮೂರನೆ ಚಿತ್ರ. ಎಸ್. ನಾರಾಯಣ್ ಅವರ ‘ಮಾರುತ’ ಚಿತ್ರದಲ್ಲಿ ನಟಿಸಿರುವೆ. ‘ದಿಲ್ ದಾರ್’ ಚಿತ್ರದ ಚಿತ್ರೀಕರಣ ನಡೆಯುತ್ತಿದೆ.

- **ಮಲಯಾಳದ ನಿರ್ದೇಶಕರ ಜೊತೆ ಕೈಜೋಡಿಸಿದ್ದೇಕೆ?**

ಪ್ರತಿ ಸಿನಿಮಾಗೂ ಒಂದೇ ರೀತಿಯ ಶ್ರಮ ಇರುತ್ತದೆ. ಒಂದೊಂದು ನಿರ್ದೇಶಕರ ಕೆಲಸದ ಶೈಲಿ ಒಂದೊಂದು ರೀತಿ ಇರುತ್ತದೆ. ಕೆಲ ನಿರ್ದೇಶಕರು ಸಹಜವಾದ ನಟನೆ ಬಯಸುತ್ತಾರೆ. ಕೆಲವರು ಕಮರ್ಷಿಯಲ್ ಆಗಿರುವುದನ್ನು ಕೇಳುತ್ತಾರೆ. ಚಿತ್ರದ ಕಥೆ ಕೇಳಿದಾಗ ಇದನ್ನು ಬೇರೆ ರೀತಿ ತೋರಿಸಬೇಕು ಅನಿಸಿತು. ನಿರ್ದೇಶಕರನ್ನು ಹುಡುಕುತ್ತಿದ್ದಾಗ ವಿ.ಕೆ.ಪ್ರಕಾಶ್ ಸಿಕ್ಕರು. ಅವರು ಮಲಯಾಳದಲ್ಲಿ ಒಳ್ಳೆಯ ಹೆಸರು ಮಾಡಿದ್ದಾರೆ.

- **ಈತನಕದ ಸಿನಿಪಯಣದಲ್ಲಿ ಸವಾಲು ಎನಿಸಿದ್ದು?**

ಒಳ್ಳೆಯ ಪ್ರಯತ್ನಕ್ಕೆ ಉತ್ತಮ ಪ್ರತಿಕ್ರಿಯೆ ಸಿಗದಿದ್ದಾಗ ಭಯವಾಗುತ್ತದೆ. ನವೀನ್ ಶಂಕರ್, ವಿಹಾನ್, ವಿರಾಟ್.. ಹೀಗೆ ಹಲವು ನಾಯಕರು ಭಿನ್ನ ಕಂಟೆಂಟ್ ಚಿತ್ರಗಳನ್ನು ಮಾಡುತ್ತಿದ್ದಾರೆ. ಕನ್ನಡ ಸಿನಿಮಾ ನೋಡುವವರ ಸಂಖ್ಯೆಯೇ ಕಡಿಮೆಯಾಗುತ್ತಿದ್ದೆಯಾ ಎಂಬ ಅನುಮಾನ ಮೂಡುತ್ತದೆ. ಒಳ್ಳೆಯ ಕಂಟೆಂಟ್ ಸಿನಿಮಾಗಳನ್ನು ನೋಡದಿದ್ದಾಗ ಹೊಸ ಆಲೋಚನೆಯ ಸಿನಿಮಾಗಳನ್ನು ಮಾಡಲು ಹಿಂದೇಟು ಹಾಕುವಂತೆ ಆಗುತ್ತದೆ. ತೆಲುಗು, ತಮಿಳು ಸ್ಟಾರ್‌ಗಳ ಸಿನಿಮಾಕ್ಕೆ ನಮ್ಮದೇ ನೆಲದಲ್ಲಿ ಬರುವಷ್ಟು ಜನ ಕನ್ನಡದ ಸಿನಿಮಾಗಳಿಗೆ ಬರುತ್ತಿಲ್ಲ ಅನಿಸುತ್ತಿದೆ. ಇದು ಭವಿಷ್ಯದ ಕುರಿತು ಚಿಂತೆ ಮೂಡಿಸುತ್ತದೆ. ಒಳ್ಳೆಯ ಸಿನಿಮಾಗಳನ್ನು ನಿರಂತರವಾಗಿ ಮಾಡುತ್ತ ಹೋಗಬೇಕು. ಒಂದೆಲ್ಲ ಒಂದು ಯತ್ನ ಕೈಹಿಡಿಯುತ್ತದೆ ಎಂಬ ನಂಬಿಕೆ ಇದೆ.

‘ಕನ್ನಡ ಕಲಿಯಲು ಪ್ರಯತ್ನ ಪಟ್ಟೆ’

‘ವಿಷ್ಣುಪ್ರಿಯಾ’ ಚಿತ್ರವನ್ನು ಚಿಕ್ಕಮಗಳೂರಿನಲ್ಲಿ ಚಿತ್ರೀಕರಣ ಮಾಡಲಾಗಿದೆ. ಚಿತ್ರದಲ್ಲಿ ನನ್ನದು ಸಾಮಾನ್ಯ ಕುಟುಂಬದಿಂದ ಬಂದ ಹುಡುಗಿ ಪಾತ್ರ. ನಿರ್ದೇಶಕರೂ ಮಲಯಾಳದವರಾದ್ದರಿಂದ ಹೆಚ್ಚು ಕಷ್ಟವಾಗಲಿಲ್ಲ. ಆದರೆ ಕನ್ನಡ ಭಾಷೆ ಸ್ವಲ್ಪ ಕಷ್ಟ ಅನಿಸಿತು. ಕಲಿಯಲು ಸಾಕಷ್ಟು ಪ್ರಯತ್ನಪಟ್ಟೆ. ಆದರೆ ಸಾಧ್ಯವಾಗಲಿಲ್ಲ. ಹೀಗಾಗಿ ಬೇರೆಯವರು ಡಬ್ ಮಾಡಿದ್ದಾರೆ’ ಎನ್ನುತ್ತಾರೆ ನಾಯಕಿ ಪ್ರಿಯಾ ವಾರಿಯರ್.

‘ಈ ವರ್ಷ ಒಂದೆರಡು ಸಿನಿಮಾಗಳು ಬಿಡುಗಡೆಗೆ ಸಿದ್ಧವಿದೆ. ಮಲಯಾಳದಲ್ಲಿ ಯಾವ ಸಿನಿಮಾವನ್ನು ಮಾಡುತ್ತಿಲ್ಲ. ತಮಿಳು, ತೆಲುಗಿನಲ್ಲಿ ಹೆಚ್ಚು ಸಿನಿಮಾಗಳನ್ನು ಮಾಡುತ್ತಿದ್ದೇನೆ. ಕನ್ನಡದಲ್ಲಿ ಬೇರೆ ಅವಕಾಶ ಬಂದಿಲ್ಲ’ ಎಂದು ಮುಂದಿನ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ತೆರೆಯಲ್ಲಿ 11 ಸಿನಿಮಾಗಳು



ವೆನ್ಯ ರೈ

ಎಲ್ಲೋ ಜೋಗಪ್ಪ ನಿನ್ನರಮನೆ: ಕಿರುತೆರೆ ನಿರ್ದೇಶಕ ಹಯವದನ ನಿರ್ದೇಶನದಲ್ಲಿ ಮೂಡಿಬಂದಿರುವ ಚಿತ್ರ ‘ಎಲ್ಲೋ ಜೋಗಪ್ಪ ನಿನ್ನರಮನೆ’ ಇಂದು ತೆರೆ ಕಾಣುತ್ತಿದೆ. ಅಂಜನ್ ನಾಗೇಂದ್ರ ನಾಯಕನಾಗಿ ನಟಿಸಿದ್ದು, ಯುವ ನಟಿ ವೆನ್ಯ ರೈ ನಾಯಕಿ. ಸಂಜನಾ ದಾಸ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬಿರಾದಾರ್, ಶರತ್ ಲೋಹಿತಾಶ್ವ, ದಾನಪ್ಪ, ಸ್ವಾತಿ, ದಿನೇಶ್ ಮಂಗಳೂರು, ಲಕ್ಷ್ಮೀ ನಾಡಗೌಡ ಮುಂತಾದವರು ನಟಿಸಿದ್ದಾರೆ.

‘ಜರ್ನಿಯ ಕಥಾನಕದ ಜೊತೆಗೆ ಅಪ್ಪನ ಮಗನ ಬಾಂಧವ್ಯದ ಎಳೆಯೂ ಚಿತ್ರದಲ್ಲಿದೆ. ಬೆಂಗಳೂರಿನಿಂದ ಶುರುವಾಗುವ ಪ್ರಯಾಣ ಹಿಮಾಲಯದವರೆಗೆ ಸಾಗುತ್ತದೆ. ಭಾವನಾತ್ಮಕವಾದ ಈ ಸಿನಿಮಾ ಹಲವು ರಾಜ್ಯಗಳ ಅನೇಕ ಸ್ಥಳಗಳಲ್ಲಿ ಚಿತ್ರೀಕರಣಗೊಂಡಿದೆ’ ಎನ್ನುತ್ತಾರೆ ನಿರ್ದೇಶಕ ಹಯವದನ.

ಶಿವಪ್ರಸಾದ್ ಸಂಗೀತ, ನಟರಾಜ್ ಮದ್ದಾಲ ಛಾಯಾಚಿತ್ರಗ್ರಹಣ, ರವಿಚಂದ್ರನ್ ಸಂಕಲನವಿದೆ.

ನಿಮಗೊಂದು ಸಿಹಿ ಸುದ್ದಿ: ಯುವಕನೊಬ್ಬ ಗರ್ಭಧರಿಸಿ ಜಗತ್ತಿನಲ್ಲಿ ಅಚ್ಚರಿ ಮೂಡಿಸಿದ ಕಥೆಯ ಸುತ್ತ ಸಾಗುವ ಚಿತ್ರವಿದು. ಚಿತ್ರರಂಗದಲ್ಲಿ ಹಲವು ವಿಭಾಗಗಳಲ್ಲಿ ಕೆಲಸ ಮಾಡಿರುವ ನಟ, ನಿರ್ದೇಶಕ ರಘು ಭಟ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಮಹಾಭಾರತ ನನ್ನ ಕಥೆಗೆ ಸ್ಫೂರ್ತಿ. ಅದರಲ್ಲಿ ಅರ್ಜುನ ಬೃಹನ್ನಳೆಯಾದ ಸನ್ನಿವೇಶವನ್ನೇ ಆಧಾರವಾಗಿಟ್ಟುಕೊಂಡು ಈ ಕಥೆ ಮಾಡಲಾಗಿದೆ. ನಾಯಕನ ಹೆಸರು ಅರ್ಜುನ್. ಆತ ಗರ್ಭಿಣಿಯಾಗುತ್ತಾನೆ. ಹೇಗಾಗುತ್ತಾನೆ ಎಂಬುದೇ ಚಿತ್ರದ ಟ್ವಿಸ್ಟ್. ವಿಜಯ್ ರಾಘವೇಂದ್ರ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ’ ಎನ್ನುತ್ತಾರೆ ನಿರ್ದೇಶಕರು.

ಅವ್ಯಕ್ತ ಸಿನಿಮಾಸ್ ಸಂಸ್ಥೆಯ ಹರೀಶ್ ಎನ್. ಗೌಡ ಬಂಡವಾಳ ಹೂಡಿದ್ದಾರೆ. ಕಾವ್ಯ ಶೆಟ್ಟಿ ನಾಯಕಿ. ಅಶ್ವಿನ್ ಹೇಮಂತ್ ಸಂಗೀತ, ಆನಂದ್ ಸುಂದ್ರೇಶ್ ಛಾಯಾಚಿತ್ರಗ್ರಹಣ, ನವೀನ್ ತೇಜ್ ಮತ್ತು ರಘುನಾಥ್ ಎಲ್ ಸಂಕಲನ ಚಿತ್ರಕ್ಕಿದೆ.

ಒಲವಿನ ಪಯಣ: ಕಿರುತೆರೆ ನಟ ಸುನಿಲ್ ನಾಯಕನಾಗಿ ನಟಿಸಿರುವ ವಿಭಿನ್ನ ಪ್ರೇಮ ಕಥಾಹಂದರ ಹೊಂದಿದ ಚಿತ್ರ ‘ಒಲವಿನ ಪಯಣ’. ಹಳ್ಳಿಯ ಮಧ್ಯಮ ವರ್ಗದ ಕುಟುಂಬದ ಯುವಕನ ಬದುಕು, ಪ್ರೇಮ ಪಯಣದ ಕಥೆಯನ್ನು ಈ ಚಿತ್ರದ ಮೂಲಕ ನಿರ್ದೇಶಕ ಕಿಶನ್ ಬಲ್ನಾಡ್ ಹೇಳಹೊರಟಿದ್ದಾರೆ. ಪ್ರಿಯಾ ಹೆಗ್ಡೆ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಮುಳಗುಂದ ಕ್ರಿಯೇಷನ್ಸ್ ಮೂಲಕ ನಾಗರಾಜ್ ಎಸ್. ಮುಳಗುಂದ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಜೀವನ್ ಗೌಡ ಅವರ ಛಾಯಾಚಿತ್ರಗ್ರಹಣ, ಕೀರ್ತಿರಾಜ್ ಸಂಕಲನ ಈ ಚಿತ್ರಕ್ಕಿದೆ.

ಭಾವ ತೀರ ಯಾನ: ಸಂಗೀತ ನಿರ್ದೇಶಕ ಮಯೂರ್ ಅಂಬೆಕಲ್ಲು ‘ಭಾವ ತೀರ ಯಾನ’ ಮೂಲಕ ನಿರ್ದೇಶರಾಗಿ ಹೊಸ ಹೆಜ್ಜೆ ಇಟ್ಟಿದ್ದಾರೆ. ಮಯೂರ್ ಹಾಗೂ ತೇಜಸ್ ಕಿರಣ್ ಜಂಟಿ ನಿರ್ದೇಶನದ ಚಿತ್ರವಿದು. ತೇಜಸ್ ಕಿರಣ್ ನಾಯಕನಾಗಿ ಅಭಿನಯಿಸಿದ್ದು, ಆರೋಹಿ ನೈನಾ ಹಾಗೂ ಅನುಷಾ ಕೃಷ್ಣ ನಾಯಕಿಯರಾಗಿ ಸಾಥ್ ಕೊಟ್ಟಿದ್ದಾರೆ. ರಮೇಶ್ ಭಟ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು, ಚಂದನಾ ಅನಂತಕೃಷ್ಣ, ವಿದ್ಯಾಮೂರ್ತಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಆರೋಹ ಫಿಲ್ಮಂಸ್ ಬ್ಯಾನರ್ ನಿರ್ಮಾಣವಿದೆ. ಶಿವಶಂಕರ್ ನೂರಂಬಡ ಛಾಯಾಚಿತ್ರಗ್ರಹಣ, ಸುಪ್ರಿತ್ ಬಿ.ಕೆ ಸಂಕಲನವಿದೆ.

ನನಗೂ ಲವ್ವಾಗಿದೆ: ಬಿ.ಎಸ್.ರಾಜಶೇಖರ್ ನಿರ್ದೇಶನದ ಪ್ರೇಮಕಥಾಹಂದರದ ಚಿತ್ರವಿದು. ಕೆ.ನೀಲಕಂಠನ್ ಬಂಡವಾಳ ಹೂಡುವುದರ ಜೊತೆಗೆ ಖಳನಾಯಕನಾಗಿ ಬಣ್ಣ ಹಚ್ಚಿದ್ದಾರೆ. ಸೋಮವಿಜಯ್ ನಾಯಕ. ತೇಜಸ್ವಿನಿ ರೆಡ್ಡಿ ನಾಯಕಿ. ಬಿ.ಆರ್. ಹೇಮಂತಕುಮಾರ್ ಸಂಗೀತವಿದೆ.

ಗಗನ ಕುಸುಮ: ನಾಗೇಂದ್ರ ಕುಮಾರ್ ಜೈನ್ ನಿರ್ದೇಶನದ ಚಿತ್ರ ‘ಗಗನ ಕುಸುಮ’. ಆರ್.ಶೇಖರನ್ ಬಂಡವಾಳ ಹೂಡಿದ್ದಾರೆ. ತಾರಾಗಣದಲ್ಲಿ ಎಸ್.ಕೆ.ಪ್ರಕಾಶ್ ಸಣ್ಣಕ್ಕಿ, ದಿನೇಶ್ ಗೌಡ, ಕಾವ್ಯ ಪ್ರಕಾಶ್, ಆಶಾ, ಹರಣಿ ನಟರಾಜ್ ಮುಂತಾದವರಿದ್ದಾರೆ. ಚಿತ್ರಕ್ಕೆ ನಿವೇದ್ ಸಂಗೀತವಿದೆ.

ರಾಜರೋಜ: ಬಿಗ್‌ಬಾಸ್ ಖ್ಯಾತಿಯ ದಿವಾಕರ್ ನಾಯಕನಾಗಿ ನಟಿಸಿರುವ ಚಿತ್ರ. ಪ್ರೀತಿ ಚಿತ್ರದ ನಾಯಕಿ. ಉದಯ್ ಪ್ರೇಮ್ ನಿರ್ಮಾಣ ಮತ್ತು ನಿರ್ದೇಶನವಿದೆ. ಮಿರ್ಚಿ ಮಣಿಕಂಠ, ಕುರಿಬಾಂಡ್ ಸುನಿಲ್ ಮುಂತಾದವರು ತಾರಾಗಣದಲ್ಲಿದ್ದಾರೆ.


‘ವಿಷ್ಣುಪ್ರಿಯಾ’, ‘ವಿದ್ಯಾ ಗಣೇಶ’, ‘ಶ್ಯಾನುಭೋಗರ ಮಗಳು’, ‘ನವಮಿ’ ಚಿತ್ರಗಳೂ ತೆರೆಕಾಣಲಿವೆ.

‘ಶಭಾಷ್..’ ಟ್ರೇಲರ್

ಪ್ರಮೋದ್ ಶೆಟ್ಟಿ ನಾಯಕನಾಗಿ ನಟಿಸಿರುವ ‘ಶಭಾಷ್ ಬಡ್ಡಿಮಗ್ನೆ’ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಬಿ.ಎಸ್.ರಾಜಶೇಖರ್ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಕಿಶನ್ ಪ್ರೊಡಕ್ಷನ್ ಅಡಿಯಲ್ಲಿ ಚೈತ್ರಾಪ್ರಕಾಶ್ ಬಂಡವಾಳ ಹೂಡಿದ್ದಾರೆ.

‘ತೊಂಬತ್ತರ ದಶಕದಲ್ಲಿ ಪರಿಚಿತರೊಬ್ಬರು ಹೇಳಿದ ಘಟನೆಯ ಎಳೆಯನ್ನು ಚಿತ್ರರೂಪಕ್ಕೆ ತಂದಿದ್ದೇನೆ. ಅಂದಿನ ಕಾಲಘಟ್ಟಕ್ಕೆ ಹೊಂದಿಕೊಂಡಂಥ ಸ್ಥಳಗಳು ಮತ್ತು ವೇಷಭೂಷಣಗಳನ್ನು ಬಳಸಿದ್ದೇವೆ. ಇದು ಸೋಮಾರಿ ಪೊಲೀಸ್ ಅಧಿಕಾರಿಯೊಬ್ಬನ ಕತೆಯಾಗಿದೆ. ಆತ ಕರ್ತವ್ಯಕ್ಕಿಂತ ವೈಯಕ್ತಿಕ ಬದುಕಿನಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಾ ವೃತ್ತಿ ಬದುಕನ್ನು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. ಮುಂದೆ ಆತನ ಠಾಣಾ ವ್ಯಾಪ್ತಿಯಲ್ಲಿ ಅಪರಾಧವೊಂದು ನಡೆಯುತ್ತದೆ. ಅದನ್ನು ಹೇಗೆ ತನಿಖೆ ಮಾಡುತ್ತಾನೆ ಎಂಬುದನ್ನು ಮನರಂಜನೆ ಮೂಲಕ ತೋರಿಸಲಾಗಿದೆ. ಚಿಕ್ಕಮಗಳೂರು, ಕಳಸ, ಹೊರನಾಡು ಹಾಗೆಯೇ ಎರಡು ಹಾಡುಗಳನ್ನು ಬ್ಯಾಂಕಾಕ್‌ನಲ್ಲಿ ಚಿತ್ರೀಕರಿಸಲಾಗಿದೆ’ ಎಂದರು ನಿರ್ದೇಶಕರು.

ಪ್ರಮೋದ್ ಶೆಟ್ಟಿಗೆ ಆದ್ಯಪ್ರಿಯಾ ಜೋಡಿಯಾಗಿದ್ದಾರೆ. ಕಾವ್ಯಪ್ರಕಾಶ್, ರವಿತೇಜ, ಮಿತ್ರ, ಮೂಗು ಸುರೇಶ್, ಶಂಕರ್ ಅಶ್ವಥ್, ಪ್ರಕಾಶ್ ತುಮ್ಮಿನಾಡು ಮುಂತಾದವರು ನಟಿಸಿದ್ದಾರೆ. ಸಂತೋಷ್ ಜೋಶ್ವ ಸಂಗೀತ, ಅಣಜಿ ನಾಗರಾಜ್ ಛಾಯಾಚಿತ್ರಗ್ರಹಣವಿದೆ.



ಆದ್ಯಪ್ರಿಯಾ, ಪ್ರಮೋದ್ ಶೆಟ್ಟಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ದುರ್ಜನ ಮತ್ತು ಸರ್ಪದ ನಡುವೆ ಆಯ್ಕೆಯ ಪ್ರಶ್ನೆ ಬಂದಾಗ ಸರ್ಪವನ್ನೇ ಆಯ್ದುಕೊಳ್ಳಬೇಕು. ಏಕೆಂದರೆ, ಸರ್ಪವು ಸ್ವರಕ್ಷಣೆಗೆ ಮಾತ್ರ ಕಚ್ಚುತ್ತದೆ. ಆದರೆ ದುರ್ಜನ ಯಾವಾಗಲೂ ವಿಷ ಕಾರುತ್ತಿರುತ್ತಾರೆ. -ಚಾಣಕ್ಯ

ಬಿಕ್ಕಟ್ಟಿನ ಹೊತ್ತಿನಲ್ಲಿ ಸಿಇಸಿ ನೇಮಕ ಸವಾಲುಗಳಿವೆ, ಅವಕಾಶಗಳೂ ಇವೆ

ಚುನಾವಣಾ ಆಯೋಗದ ಪ್ರಾಮಾಣಿಕತೆ ಹಾಗೂ ಅದರ ಅಧಿಕಾರವು ಹಿಂದೆಂದೂ ಕಂಡಿರದಂತಹ ಬಗೆಯಲ್ಲಿ ಪ್ರಶ್ನೆಗೆ ಒಳಗಾಗಿರುವ ಸಂದರ್ಭದಲ್ಲಿ, ಜ್ಞಾನೇಶ್ ಕುಮಾರ್ ಅವರು ಮುಖ್ಯ ಚುನಾವಣಾ ಆಯುಕ್ತರಾಗಿ (ಸಿಇಸಿ) ಅಧಿಕಾರ ವಹಿಸಿಕೊಂಡಿದ್ದಾರೆ. ತಮ್ಮ ನೇಮಕದ ಬಗ್ಗೆಯೇ ವಿವಾದ ಸೃಷ್ಟಿಯಾಗಿರುವ ಹೊತ್ತಿನಲ್ಲಿ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಜ್ಞಾನೇಶ್ ಕುಮಾರ್ ಅವರನ್ನು 'ಮಧ್ಯರಾತ್ರಿ'ಯಲ್ಲಿ ನೇಮಕ ಮಾಡಿದ ಕೇಂದ್ರ ಸರ್ಕಾರದ ತೀರ್ಮಾನವನ್ನು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವಿರೋಧಿಸಿದ್ದಾರೆ. ರಾಹುಲ್ ಅವರು ಸಿಇಸಿ ಆಯ್ಕೆ ಸಮಿತಿಯ ಸದಸ್ಯರೂ ಹೌದು. ಆಯ್ಕೆ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿರುವಾಗಲೇ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿರುವ ಸರ್ಕಾರದ ನಡೆಯು ಗೌರವ ತರುವಂಥದ್ದಲ್ಲ ಎಂದು ರಾಹುಲ್ ಹೇಳಿದ್ದಾರೆ. ಕೇಂದ್ರ ಸರ್ಕಾರವು ಜ್ಞಾನೇಶ್ ಕುಮಾರ್ ಅವರನ್ನು ಸಿಇಸಿ ಆಗಿ ನೇಮಕ ಮಾಡಿದ ಮಾರನೆಯ ದಿನವೇ ಸುಪ್ರೀಂ ಕೋರ್ಟ್, ಸಿಇಸಿ ನೇಮಕಕ್ಕಾಗಿ ರೂಪಿಸಿದ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿದ ಅರ್ಜಿಗಳ ವಿಚಾರಣೆಯನ್ನು ನಡೆಸುವುದಿತ್ತು. ವಿಚಾರಣೆಯನ್ನು ಈಗ ಮಾರ್ಚ್ ತಿಂಗಳಿಗೆ ಮುಂದೂಡಲಾಗಿದೆ. ಸಿಇಸಿ ನೇಮಕ ಪ್ರಕ್ರಿಯೆಯಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯ (ಸಿಜೆಐ) ಪಾತ್ರವೂ ಇರಬೇಕು ಎಂಬ ಸೂತ್ರವನ್ನು ಕೋರ್ಟ್ ರೂಪಿಸಿತ್ತು. ಆದರೆ ಆಯ್ಕೆ ಸಮಿತಿಯಿಂದ ಸಿಜೆಐ ಅವರನ್ನು ಹೊರಗಿರಿಸುವ ಕಾಯ್ದೆಯನ್ನು ಕೇಂದ್ರ ಸರ್ಕಾರ ರೂಪಿಸಿತು. ಈ ಕಾಯ್ದೆಯು ಆಯ್ಕೆ ಸಮಿತಿಯಲ್ಲಿ ಕೇಂದ್ರ ಸರ್ಕಾರಕ್ಕೆ (ಕಾರ್ಯಾಂಗಕ್ಕೆ) ಪ್ರಾಧಾನ್ಯ ಕಲ್ಪಿಸಿದೆ.



ಕುಗ್ಗಿರುವ ಹಿರಿಮೆಯನ್ನು ಮತ್ತೆ ಪಡೆದುಕೊಳ್ಳುವ ದಿಸೆಯಲ್ಲಿ ಆಯೋಗವು ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು

ಈಗ ಚಾಲ್ತಿಯಲ್ಲಿ ಇರುವ ಕಾನೂನಿಗೆ ಅನುಗುಣವಾಗಿ ಕೇಂದ್ರ ಸರ್ಕಾರವು ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿದೆ. ಆದರೆ ಈ ವಿಚಾರವಾಗಿ ಕೋರ್ಟ್ ಹೇಳುವ ಮಾತನ್ನು ಆಲಿಸಿ, ನಂತರ ಆಯ್ಕೆ ಪ್ರಕ್ರಿಯೆಯನ್ನು ಮುಂದುವರಿಸಬಹುದಿತ್ತು. ಸಾಂವಿಧಾನಿಕ ಹುದ್ದೆಯೊಂದನ್ನು ಭರ್ತಿ ಮಾಡುವುದು ಹೇಗೆ ಎಂಬ ವಿಚಾರದಲ್ಲಿ ಕೇಂದ್ರ ಸರ್ಕಾರವು ವಿರೋಧ ಪಕ್ಷದ ದೃಷ್ಟಿಕೋನವನ್ನು ಪರಿಗಣಿಸಬಹುದಿತ್ತು. ಸಿಇಸಿ ಹುದ್ದೆಯು ಎಲ್ಲ ರಾಜಕೀಯ ಪಕ್ಷಗಳಿಗೂ ಬಹಳ ಮುಖ್ಯ. ಕೇಂದ್ರವು ಆ ರೀತಿ ನಡೆದುಕೊಂಡಿದ್ದಿದ್ದರೆ ಅದು ಪ್ರಜಾತಾಂತ್ರಿಕವಾಗಿ ಬಹಳ ಘನತೆಯ ನಡೆ ಆಗುತ್ತಿತ್ತು. ರಾಹುಲ್ ಅವರು ಜ್ಞಾನೇಶ್ ಅವರ ನೇಮಕವನ್ನು ವಿರೋಧಿಸುತ್ತಿಲ್ಲ, ಅವರು ವಿರೋಧಿಸುತ್ತಿರುವುದು ನೇಮಕಕ್ಕೆ ಅನುಸರಿಸಿದ ಪ್ರಕ್ರಿಯೆಯನ್ನು ಎಂಬುದನ್ನು ಇಲ್ಲಿ ಗಮನಿಸಬೇಕು. ಆಯೋಗದ ವಿಶ್ವಾಸಾರ್ಹತೆಯ ಬಗ್ಗೆ ಗಂಭೀರವಾದ ಪ್ರಶ್ನೆಗಳು ಇರುವಾಗ, ನೇಮಕ ಪ್ರಕ್ರಿಯೆಯ ವಿಶ್ವಾಸಾರ್ಹತೆಯು ಕೂಡ ಬಹಳ ಮುಖ್ಯವಾಗುತ್ತದೆ. ಚುನಾವಣಾ ಆಯೋಗದ ತೀರ್ಮಾನಗಳ ಬಗ್ಗೆ ಹಾಗೂ ಅದು ತೆಗೆದುಕೊಂಡ ಕ್ರಮಗಳ ಬಗ್ಗೆ ಕಳೆದ ಕೆಲವು ವರ್ಷಗಳಲ್ಲಿ ಹಲವು ಪ್ರಶ್ನೆಗಳು ಮೂಡಿವೆ, ಅದರಲ್ಲೂ ಮುಖ್ಯವಾಗಿ ರಾಜೀವ್ ಕುಮಾರ್ ಅವರು ಸಿಇಸಿ ಆಗಿದ್ದಾಗ ತೆಗೆದುಕೊಂಡ ತೀರ್ಮಾನಗಳ ವಿಚಾರವಾಗಿ ಪ್ರಶ್ನೆಗಳು ಬಹಳ ಗಂಭೀರವಾಗಿವೆ. ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ಹಾಗೂ ಮತದಾರರ ಪಟ್ಟಿಯಲ್ಲಿನ ಲೋಪಗಳಿಗೆ ಸಂಬಂಧಿಸಿದ ದೂರುಗಳನ್ನು 'ಸೋತವರ ದೂರುಗಳು' ಎಂದು ಪಕ್ಕಕ್ಕೆ ಸರಿಸಿದರೂ, ಮತದಾನದ ದಿನಾಂಕ, ಮತದಾನಕ್ಕೆ ನಿಗದಿ ಮಾಡಿದ ಹಂತಗಳು ಮತ್ತು ಆಡಳಿತಾರೂಢ ಪಕ್ಷದ ಹಿರಿಯ ನಾಯಕರಿಂದ ನೀತಿ ಸಂಹಿತೆಯ ಉಲ್ಲಂಘನೆ ಆದಾಗ ಕ್ರಮ ಕೈಗೊಳ್ಳುವಲ್ಲಿ ಆದ ವೈಫಲ್ಯಗಳು, ಆಯೋಗವು ಪಕ್ಷಪಾತಿ ಎಂಬ ಆರೋಪಗಳಿಗೆ ಕಾರಣವಾಗಿವೆ. ಕೆಲವು ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರ ಸಿಕ್ಕಿಲ್ಲದ ಕಾರಣಕ್ಕಾಗಿ, ಸಿಇಸಿ ನೇಮಕದ ಪ್ರಕ್ರಿಯೆಯ ವಿಶ್ವಾಸಾರ್ಹತೆಯು ಮುಖ್ಯವಾಗುತ್ತದೆ.

ಪ್ರಜಾತಾಂತ್ರಿಕ ವ್ಯವಸ್ಥೆಗಳಲ್ಲಿ ಚುನಾವಣೆಯು ಅತ್ಯಂತ ಮುಖ್ಯವಾದ ಪ್ರಕ್ರಿಯೆ. ಚುನಾವಣೆಗಳು ಮುಕ್ತವಾಗಿ, ನ್ಯಾಯಸಮ್ಮತವಾಗಿ ಆಗುವಂತೆ ನೋಡಿಕೊಳ್ಳಬೇಕಿರುವುದು, ಅವು ಮುಕ್ತವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆದಿವೆ ಎಂಬ ವಿಶ್ವಾಸವು ಜನರಲ್ಲಿ ಮೂಡುವಂತೆ ಮಾಡುವುದು ಆಯೋಗದ ಕರ್ತವ್ಯ. ಆಯೋಗವು ಪೂರ್ವಗ್ರಹಗಳಿಂದ ಮುಕ್ತವಾಗಿರಬೇಕು, ಅದು ಸ್ವತಂತ್ರವಾಗಿ ಹಾಗೂ ತಟಸ್ಥವಾಗಿ ಇರಬೇಕು. ಆದರೆ ಈಗ ಆಯೋಗದ ಹಿರಿಮೆ ಕುಗ್ಗಿದೆ. ಆಯೋಗವು ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು. ಹೀಗಾಗಿ, ಜ್ಞಾನೇಶ್ ಕುಮಾರ್ ಅವರ ಎದುರು ಸವಾಲುಗಳೂ ಇವೆ ಅವಕಾಶಗಳೂ ಇವೆ.


ದಿನದ ಟ್ವೀಟ್

ಬಿರು ಬೇಸಿಗೆ ಕಾಡದಿರಲಿ...

ಬೆಂಗಳೂರಿನಲ್ಲಿ ಹೋದ ವರ್ಷ 160 ದಿನ ಮಳೆಯಿಲ್ಲದೆ ಕಡು ಬೇಸಿಗೆಯನ್ನು ಅನುಭವಿಸಿದೆವು. ಬೇಸಿಗೆ ಮುಗಿದರೆ ಸಾಕು ಎಂದು ದಿನಗಳನ್ನು ಎಣಿಸುತ್ತಿದ್ದೆವು. ನನಗೆ ನೆನಪಿರುವಂತೆ, 2024ರಲ್ಲಿ ದಾಖಲಾದ ಗರಿಷ್ಠ ತಾಪಮಾನ 38.5 ಡಿ.ಸೆ.ನಿಂದ 39 ಡಿ.ಸೆ. ನಡುವೆ ಇತ್ತು. ಪೂರ್ವ ಮುಂಗಾರು ಉತ್ತಮವಾಗಿ ಬಂದು, ತಾಪಮಾನವನ್ನು ತಗ್ಗಿಸುತ್ತದೆ ಎಂಬ ಭರವಸೆ ಹೊಂದೋಣ.

ಭೀಮನಗೌಡ ಆರ್. ಪಾಟೀಲ್, ವಕೀಲ

ಕಿಡಿನುಡಿ



ಕೆಪಿಎಸ್‌ಸಿ ಅತ್ಯಂತ ಭ್ರಷ್ಟ ಸಂಸ್ಥೆಯಾಗಿದ್ದು, ಹಲವು ದಶಕಗಳಿಂದಲೂ ಭ್ರಷ್ಟ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಮೂಲಕ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ರಾಜ್ಯದ ಅಭಿವೃದ್ಧಿಯ ಮೇಲೆ ಪ್ರಭಾವ ಬೀರಿದೆ. ಕೆಪಿಎಸ್‌ಸಿ ಸುಧಾರಣೆ ಆಗಬೇಕಾದರೆ ವಿದ್ಯಾರ್ಥಿಗಳ ನೇತೃತ್ವದಲ್ಲಿ ರಾಜ್ಯದಾದ್ಯಂತ ತೀವ್ರವಾದ ಚಳವಳಿ ನಡೆಯಬೇಕು. ಅದು ರಾಜಕೀಯರಹಿತವಾಗಿದ್ದು, ಸ್ವಹಿತಾಸಕ್ತಿಗೆ ಚಳವಳಿಗಳನ್ನು ಬಳಸಿಕೊಳ್ಳುವ ಸಂಘಟನೆಗಳನ್ನು ಅವಲಂಬಿಸಿರಬಾರದು...

ವಿನಯ್ ಕುಮಾರ್ ಜಿ.ಬಿ., ಸ್ಥಾಪಕ, ಇನ್‌ಸೈಟ್ಸ್ ಐಎಎಸ್

25 ವರ್ಷಗಳ ಹಿಂದೆ

ಸೋಮವಾರ, 21-2-2000

• ನೆಲಬಾಂಬ್ ಸ್ಫೋಟಿಸಿ 23 ಪೊಲೀಸರ ಹತ್ಯೆ

ಜಗ್ದಲ್‌ಪುರ (ಮಧ್ಯಪ್ರದೇಶ), ಫೆ. 20 (ಯುಎನ್‌ಐ, ಪಿಟಿಐ)– ನಕ್ಸಲೀಯರು ಇರಿಸಿದ್ದ ಶಕ್ತಿಯುತ ನೆಲಬಾಂಬ್ ಸ್ಫೋಟಿಸಿ, 23 ಪೊಲೀಸರು ಮೃತಪಟ್ಟಿರುವ ದಾರುಣ ಘಟನೆ ಮಧ್ಯಪ್ರದೇಶದ ಬಸ್ತರ್ ಜಿಲ್ಲೆಯ ಖೊಜ್‌ವಾಯ್ ಎಂಬಲ್ಲಿ ಇಂದು ನಡೆದಿದೆ.

21 ಜನ ಸ್ಥಳದಲ್ಲೇ ಪ್ರಾಣಬಿಟ್ಟರು. ಇನ್ನಿಬ್ಬರು ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದರು.

• ಶಾಸಕ ಅಸ್ನೋಟಿಕರ್ ಕೊಲೆ ಸಿಐಡಿ ತನಿಖೆಗೆ ಕೃಷ್ಣ ಆಜ್ಞೆ

ಉಡುಪಿ, ಫೆ. 20– ಕಾರವಾರ ಶಾಸಕ ವಸಂತ ಅಸ್ನೋಟಿಕರ್ ಕೊಲೆಯು ಅಮಾನುಷವಾದ ಕೊಲೆ, ಅತ್ಯಂತ ಹೀನಾಯವಾದ ಕೃತ್ಯ. ಈ ಕೊಲೆಯ ಬಗ್ಗೆ ವಿಚಾರಣೆ ನಡೆಸಲು ಸಿಐಡಿಗೆ ವಹಿಸಲಾಗಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಮಣಿಪಾಲದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಅವರು, ಶಾಸಕ ಅಸ್ನೋಟಿಕರ್ ಕೊಲೆಯಾದ ಸುದ್ದಿ ತಿಳಿದ ತಕ್ಷಣ ಶಿವಮೊಗ್ಗದಿಂದ ಇಂದು ಬೆಳಿಗ್ಗೆ ಹೆಲಿಕಾಪ್ಟರ್‌ನಲ್ಲಿ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಭೇಟಿ ನೀಡಿ, ಅಸ್ನೋಟಿಕರ್ ಅವರ ಮೃತದೇಹದ ಮೇಲೆ ಪುಷ್ಪಗುಚ್ಛ ಇರಿಸಿ ಗೌರವ ಸಲ್ಲಿಸಿದರು. ಇದಕ್ಕೂ ಮುಂಚೆ ಕೃಷ್ಣ ಅವರು, ಅಸ್ನೋಟಿಕರ್ ಜೊತೆ ತೀವ್ರವಾಗಿ ಗಾಯಗೊಂಡು ಅಪಾಯದಿಂದ ಪಾರಾಗಿ ಚೇತರಿಸಿಕೊಳ್ಳುತ್ತಿರುವ ಅವರ ರಾಜಕೀಯ ಸ್ನೇಹಿತ, ಕಾರವಾರ ನಗರಸಭೆಯ ಸದಸ್ಯ ಗಣಪತಿ ಉಳ್ವೇಕರ ಅವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿಕೊಂಡರು.

ಅಘೋಷಿತ ಬಂದ್: ಸ್ಥಳೀಯ ಶಾಸಕ ವಸಂತ ಅಸ್ನೋಟಿಕರ್ ಅವರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆಯೇ ಕಾರವಾರ ನಗರದಲ್ಲಿ ಇಂದು ಮುಂಜಾನೆಯಿಂದಲೇ ಸ್ಮಶಾನಸದೃಶ ಮೌನ ಆವರಿಸಿತ್ತು.

50 ವರ್ಷಗಳ ಹಿಂದೆ

ಶುಕ್ರವಾರ, 21-2-1975

• ಸ್ವಜನಪಕ್ಷಪಾತ, ಭ್ರಷ್ಟಾಚಾರ: ಆಪಾದನೆ

ಬೆಂಗಳೂರು, ಫೆ. 20– ದೇವರಾಜ ಅರಸು ಮಂತ್ರಿಮಂಡಲದ ಮೇಲೆ ಸ್ವಜನಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗದ ಆಪಾದನೆಗಳನ್ನು ಹೊರಿಸಿದ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರು, ಈ ಮಂತ್ರಿಮಂಡಲವನ್ನು ವಜಾ ಮಾಡಬೇಕು ಎಂದು ರಾಜ್ಯಪಾಲರನ್ನು ಒತ್ತಾಯಿಸಿದರು.

ರಾಜ್ಯಪಾಲರ ಭಾಷಣದ ಮೇಲೆ, ವಿಧಾನಪರಿಷತ್ತಿನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ ಹೆಗಡೆ ಅವರು, 'ಮಿಸಾ' ಮತ್ತು ತುರ್ತು ಆಜ್ಞೆಗಳನ್ನು ಪ್ರಸ್ತಾಪಿಸಿ, ರಾಜ್ಯದಲ್ಲಿ ಪ್ರಜಾಪ್ರಭುತ್ವ ಇದೆಯೇ ಎಂದು ಪ್ರಶ್ನಿಸಿದರು.

'ಸಚಿವರ ಖಾತೆಗಳನ್ನು ಪುನಃ ಪುನಃ ಬದಲಾಯಿಸಿದ್ದು ಸರಿಯೇ? ಕಿತ್ತೂರು ಅವರಿಗೆ ಕ್ರಮಬದ್ಧ ಮಾರುಕಟ್ಟೆ ಖಾತೆ ನೀಡಿದ್ದನ್ನು ನೋಡಿದರೆ ರಸೆಲ್ ಹಾಗೂ ಸಿಟಿ ಮಾರ್ಕೆಟ್‌ಗಳಿಗೂ ಸಚಿವರನ್ನು ನೇಮಿಸುವ ಸ್ಥಿತಿ ಬಂದೀತು' ಎಂದರು.

'ಟೋಪಿ, ಜಾಕೆಟ್ ಕಿತ್ತುಕೊಂಡಂತೆ ಎಚ್.ಎಂ. ಚೆನ್ನಬಸಪ್ಪನವರಿಂದ ಒಂದೊಂದಾಗಿ ಅಧಿಕಾರ ಕಿತ್ತುಕೊಂಡು ಅವರನ್ನು ದಿಗಂಬರರನ್ನಾಗಿ ಮಾಡಿದ್ದೀರಿ. ಹಿರಿಯರಾದ ಎಚ್.ಎಂ.ಸಿ. ಇಂತಹ ಅಪಮಾನಕಾರಿ ಪರಿಸ್ಥಿತಿಯಲ್ಲಿ ಏಕೆ ಮುಂದುವರಿಯಬೇಕು?' ಎಂದು ಸವಾಲು ಹಾಕಿದರು.

ವಯಸ್ಕರಿಗಿಂತ ಮಕ್ಕಳ ಮೇಲೇ ಅತಿಹೆಚ್ಚು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲು

ಮಕ್ಕಳು ಮತ್ತು ಸುರಕ್ಷಿತ ವಾತಾವರಣ



ವಿಶ್ಲೇಷಣೆ

ಎಂ.ಎ.ಸಲೀಂ

ಮಕ್ಕಳು ನಮ್ಮ ಸಮಾಜದ ಭವಿಷ್ಯ ರೂಪಿಸುವವರು. ಅವರು ದೈಹಿಕವಾಗಿ, ಮಾನಸಿಕವಾಗಿ ಶಕ್ತಿಶಾಲಿಗಳಾಗಿ, ಆತ್ಮವಿಶ್ವಾಸದಿಂದ ಬದುಕನ್ನು ಎದುರಿಸುವ ಜವಾಬ್ದಾರಿಯುತ ಪ್ರಜೆಗಳಾಗಿ ರೂಪುಗೊಳ್ಳಬೇಕು. ಸುರಕ್ಷಿತವಾದ ಮತ್ತು ಆರೋಗ್ಯಪೂರ್ಣವಾದ ವಾತಾವರಣವನ್ನು ಈ ಸಮಾಜವು ಮಕ್ಕಳಿಗೆ ಕೊಡಬೇಕು. ಆದರೆ ಈ ಹೊಣೆಯನ್ನು ಸಮಾಜ ಸರಿಯಾಗಿ ನಿರ್ವಹಿಸುತ್ತಿಲ್ಲ.

ಲೈಂಗಿಕ ದೌರ್ಜನ್ಯದಂಥ ಕ್ರೌರ್ಯಕ್ಕೆ ಪುಟ್ಟ ಮಕ್ಕಳು ಬಲಿಯಾಗುತ್ತಿದ್ದಾರೆ. ಇದರಿಂದ ಮಕ್ಕಳ ಬೆಳವಣಿಗೆ ಕುಂಠಿತಗೊಳ್ಳುತ್ತಿದೆ. ಇಂಥ ಹೀನ ಅಪರಾಧಗಳು ಗೌರವಯುತವಾಗಿ ಬದುಕುವ ಮಕ್ಕಳ ಹಕ್ಕುಗಳನ್ನು ಕಸಿದುಕೊಳ್ಳುತ್ತಿವೆ. ವಯಸ್ಕರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳಿಗೆ ಹೋಲಿಸಿದರೆ, ಮಕ್ಕಳ ಮೇಲೇ ಅತಿಹೆಚ್ಚು ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತವೆ ಎಂದು ಕೆಲವು ಸಂಸ್ಥೆಗಳು ಅಂಕಿ–ಅಂಶ ಸಮೇತ ವರದಿ ಬಿಡುಗಡೆ ಮಾಡಿವೆ.

ನಮ್ಮ ಸಮಾಜದಲ್ಲಿ ಬೇರೂರಿರುವ ಸಾಂಪ್ರದಾಯಿಕ ಕಟ್ಟುಪಾಡುಗಳೇ ಇಂಥ ಅಪರಾಧಗಳಿಗೆ ಮೂಲ ಬೇರು. ಮಕ್ಕಳನ್ನು ಸ್ವತಂತ್ರವಾಗಿ ಬೆಳೆಯಲು ಬಿಡುವುದಿಲ್ಲ, ಅವರು ಮುಕ್ತವಾಗಿ ಪ್ರಶ್ನೆ ಕೇಳುವುದನ್ನು ಈ ಸಮಾಜ ಸಹಿಸುವುದಿಲ್ಲ. ಇಂಥ ಕಾರಣಗಳಿಂದ ಹಿರಿಯರ ಮುಂದೆ ಬಾಯಿ ತೆರೆಯಲೂ ಪುಟ್ಟ ಮಕ್ಕಳು ಭಯಪಡುತ್ತಾರೆ. ತಮ್ಮ ಆಸೆಯನ್ನೂ ಬೇಡಿಕೆಯನ್ನೂ ಹಿರಿಯರ ಮುಂದೆ ಹೇಳಿಕೊಳ್ಳಲು ಹೆದರುವ ಮಕ್ಕಳು ತಮ್ಮ ಮೇಲಾಗುವ ದೌರ್ಜನ್ಯದ ಬಗ್ಗೆ ಹೇಗೆ ಹೇಳಿಕೊಂಡಾರು?

ಇಲ್ಲಿ ಇನ್ನೊಂದು ಅಂಶವನ್ನೂ ಗಮನಿಸಬೇಕಾಗುತ್ತದೆ. ಲೈಂಗಿಕ ದೌರ್ಜನ್ಯ, ಕಿರುಕುಳದ ಬಗ್ಗೆ ನಾವು ನಮ್ಮ ಮಕ್ಕಳಿಗೆ ಜಾಗೃತಿಯನ್ನೂ ಮೂಡಿಸಿರುವುದಿಲ್ಲ. ಲೈಂಗಿಕ ವಿಚಾರಗಳನ್ನು ಹಂಚಿಕೊಳ್ಳುವ ಬಗ್ಗೆ ಮಕ್ಕಳು ನಾಚಿಕೊಳ್ಳುತ್ತಾರೆ. ಈ ಎಲ್ಲ ಕಾರಣಗಳಿಂದ ಮಕ್ಕಳ ಮೌನವು ದೌರ್ಜನ್ಯ ಎಸಗುವವರಿಗೆ ಉತ್ತೇಜನ ನೀಡಿದಂತಾಗುತ್ತದೆ ಮತ್ತು ಇಂಥ ಕೃತ್ಯ ಎಸಗುವ ಅಪರಾಧಿಗಳಿಗೆ ಶಿಕ್ಷೆಯೂ ಆಗುತ್ತಿಲ್ಲ. ಲೈಂಗಿಕ ಕಿರುಕುಳ, ಅತ್ಯಾಚಾರದಂಥ ಘಟನೆಗಳು ಬೆಳೆಯುವ ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಅವರು ಖಿನ್ನತೆಗೆ ಒಳಗಾಗುತ್ತಾರೆ. ಅಭದ್ರತಾ ಭಾವ ಅವರನ್ನು ಯಾವಾಗಲೂ ಕಾಡುತ್ತಲೇ ಇರುತ್ತದೆ. ಮಕ್ಕಳು ಅಸಹಾಯಕರಾಗುತ್ತಾರೆ. ಅವರಲ್ಲಿನ ಆತ್ಮವಿಶ್ವಾಸವೇ ಹುದುಗಿಹೋಗುತ್ತದೆ.

ಪುಟ್ಟ ಮಕ್ಕಳು ಯಾವುದೇ ರೀತಿಯ ದೌರ್ಜನ್ಯಕ್ಕೆ ಒಳಗಾಗದೇ ಗೌರವಯುತವಾದ ಮತ್ತು ಸ್ವತಂತ್ರ ಬದುಕನ್ನು ಜೀವಿಸುವ ವಾತಾವರಣವನ್ನು ಸೃಷ್ಟಿಸುವುದು ಸರ್ಕಾರದ ಹೊಣೆಗಾರಿಕೆ ಎಂದು ಸಂವಿಧಾನದ 39ನೇ ವಿಧಿ ಹೇಳುತ್ತದೆ. ಮಕ್ಕಳಿಗಾಗಿ ಸುರಕ್ಷಿತ ವಾತಾವರಣ ರೂಪಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಹಲವು ಕ್ರಮಗಳನ್ನು ಕೈಗೊಂಡಿವೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗೆ ಸಂಬಂಧಿಸಿದಂತೆ ಜಾರಿಗೆ ತಂದಿರುವ ಕಾನೂನುಗಳು ಬಹಳ ಪರಿಣಾಮಕಾರಿ ಆಗಿದ್ದು, ಇವುಗಳಲ್ಲಿ ಸರ್ಕಾರಗಳ ಜವಾಬ್ದಾರಿಯನ್ನೂ ನಮೂದಿಸಲಾಗಿದೆ. ಆದ್ದರಿಂದ, ಈ ಕಾನೂನುಗಳು ಸರ್ಕಾರದ ಹೊಣೆಗಾರಿಕೆಯನ್ನು ಹೆಚ್ಚಿಸಿವೆ.

ಮಕ್ಕಳನ್ನು ಲೈಂಗಿಕ ಕ್ರಿಯೆಗೆ ದುರ್ಬಳಕೆ ಮಾಡಿಕೊಳ್ಳುವುದು, ಅಂಥ ಕೃತ್ಯವನ್ನು ಚಿತ್ರೀಕರಿಸಿಕೊಳ್ಳುವುದು 'ಮಕ್ಕಳ ಮೇಲಿನ ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯ (ಸಿಎಸ್‌ಎಎಂ)' ಎನಿಸಿಕೊಳ್ಳುತ್ತದೆ. ವಿಶ್ವಸಂಸ್ಥೆಯ 'ಮಕ್ಕಳ ಹಕ್ಕುಗಳ ಸಮಾವೇಶ'ದ ನಿರ್ಣಯಗಳಿಗೆ ಭಾರತವು 1992ರ ಡಿ. 11ರಂದು ಸಹಿ ಹಾಕಿದೆ. ಈ ಪ್ರಕಾರ, ಮಕ್ಕಳನ್ನು ಲೈಂಗಿಕ ಕ್ರಿಯೆಗಳಿಗೆ ಮತ್ತು ವೇಶ್ಯಾವಾಟಿಕೆಗೆ ಬಳಸಿಕೊಳ್ಳುವುದನ್ನು ಸರ್ಕಾರವು ತಡೆಯಬೇಕು. 1974 ಮತ್ತು 2013ರ ರಾಷ್ಟ್ರೀಯ ಮಕ್ಕಳ ನೀತಿ ಹಾಗೂ 2003ರ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಪ್ರತಿಜ್ಞಾವಿಧಿಗಳು ಸರ್ಕಾರದ ಹೊಣೆಗಾರಿಕೆಯನ್ನು ಪುನರುಚ್ಚರಿಸುತ್ತವೆ.

ಮಕ್ಕಳು ಎಲ್ಲ ರೀತಿಯ ಹಿಂಸೆ, ದೌರ್ಜನ್ಯ, ಕಳಂಕ, ತಾರತಮ್ಯ, ವಂಚನೆಗೆ ಒಳಗಾಗುವುದನ್ನು ಸರ್ಕಾರ ತಡೆಯಲೇಬೇಕು. ಇದನ್ನು 2013ರ ಮಕ್ಕಳ ನೀತಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಇದರ ಜೊತೆಗೆ ಮಕ್ಕಳು ಆರ್ಥಿಕ ಅಥವಾ ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗುವುದನ್ನು ತಡೆಯಬೇಕು ಎಂದೂ ಹೇಳಲಾಗಿದೆ. ಹೆತ್ತ ಮಕ್ಕಳನ್ನು ಕಸದ ಬುಟ್ಟಿಗಳಲ್ಲಿ, ರಸ್ತೆಗಳಲ್ಲಿ ಬಿಟ್ಟು ಬರುವಂಥ ಅಪರಾಧಗಳನ್ನು ತಡೆಯಬೇಕು. ಮಕ್ಕಳ ಮಾರಾಟ, ನೀಲಿಚಿತ್ರಗಳಲ್ಲಿ ಬಳಕೆ ಮಾಡಿಕೊಳ್ಳುವಂಥ ಕೃತ್ಯಗಳನ್ನು ನಿಗ್ರಹಿಸಬೇಕು. ಮಕ್ಕಳ ಕಳ್ಳಸಾಗಣೆ ತಪ್ಪಿಸಬೇಕು. ಮಕ್ಕಳಿಗೆ ಮಾದಕವಸ್ತು ಅಥವಾ ಮದ್ಯವನ್ನು ನೀಡಿ ನಶೆ ತರಿಸಿ ಅವರ ಮೇಲೆ ದೌರ್ಜನ್ಯ ನಡೆಸುವುದನ್ನು ತಡೆಯುವುದು ಕೂಡ ಸರ್ಕಾರದ ಹೊಣೆ.

ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳನ್ನು ರಕ್ಷಿಸಲು ಮತ್ತು ಮಕ್ಕಳ ಹಕ್ಕುಗಳನ್ನು ಕಾಪಾಡಲು ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಲಾಗಿದೆ. ಮಕ್ಕಳ ಮೇಲೆ ಆನ್‌ಲೈನ್ ಜಗತ್ತಿನಲ್ಲಿ ನಡೆಯುವ ದೌರ್ಜನ್ಯ ಮತ್ತು ಲೈಂಗಿಕ ಕಿರುಕುಳಗಳನ್ನು ತಡೆಯುವುದೂ ಈ ಆಯೋಗದ ಕೆಲಸವಾಗಿದೆ. ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯ್ದೆಯನ್ನು (ಪೋಕ್ಸೊ) 2012ರಲ್ಲಿ ಜಾರಿಗೆ ತರಲಾಯಿತು. ಲೈಂಗಿಕ ದೌರ್ಜನ್ಯಕ್ಕೆ ಒಳಪಟ್ಟಿರುವ ಮಕ್ಕಳಿಗೆ ಕಾನೂನಾತ್ಮಕ ರಕ್ಷಣೆ ನೀಡುವುದು ಈ ಕಾಯ್ದೆಯ ಮೂಲ ಉದ್ದೇಶ. ದೌರ್ಜನ್ಯದ ಬಗ್ಗೆ ದೂರು ನೀಡುವುದು, ಈ ಪ್ರಕರಣಗಳ ತನಿಖೆ ಹೇಗಿರಬೇಕು, ನ್ಯಾಯಾಲಯಗಳಲ್ಲಿ ಇಂಥ ಪ್ರಕರಣಗಳ ವಿಚಾರಣೆಯನ್ನು ಹೇಗೆ ನಡೆಸಬೇಕು ಎನ್ನುವ ಕುರಿತು ಈ ಕಾಯ್ದೆ ಬಹಳ ಪರಿಣಾಮಕಾರಿಯಾಗಿ ವಿವರಿಸುತ್ತದೆ.



'2013ರ ಅಪರಾಧ ಕಾನೂನು ತಿದ್ದುಪಡಿ ಕಾಯ್ದೆ' ಪೋಕ್ಸೊ ಕಾಯ್ದೆಯನ್ನು ಮತ್ತಷ್ಟು ಬಿಗಿಗೊಳಿಸಿತು. ಲೈಂಗಿಕ ದೌರ್ಜನ್ಯದ ಬೇರೆ ಬೇರೆ ಸ್ವರೂಪದ ಅಪರಾಧಗಳಿಗೆ ವಿವಿಧ ಶಿಕ್ಷೆಗಳನ್ನು ನೀಡುವ ಬಗ್ಗೆ ಈ ತಿದ್ದುಪಡಿ ಕಾಯ್ದೆಯಲ್ಲಿ ವಿವರಿಸಲಾಗಿದೆ. ಇಂಥ ಪ್ರಕರಣಗಳಲ್ಲಿ ಶೀಘ್ರವಾಗಿ ತನಿಖೆ ನಡೆಸುವ ಮತ್ತು ನ್ಯಾಯಾಲಯಗಳಲ್ಲಿ ತ್ವರಿತವಾಗಿ ವಿಚಾರಣೆ ನಡೆಸುವ ಬಗ್ಗೆ 2018ರಲ್ಲಿ ಸುಗ್ರೀವಾಜ್ಞೆಯೊಂದನ್ನು ಹೊರಡಿಸಲಾಗಿದೆ. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನ್ನು ಚಿತ್ರೀಕರಿಸಿಕೊಳ್ಳುವುದು, ಅದನ್ನು ಇನ್ನೊಬ್ಬರಿಗೆ ಹಂಚುವುದು ಮತ್ತು ಅಂಥ ವಿಡಿಯೊಗಳನ್ನು ಇಟ್ಟುಕೊಳ್ಳುವುದು ಕೂಡ ಅಪರಾಧವಾಗುತ್ತದೆ ಎಂದು ಮಾಹಿತಿ ತಂತ್ರಜ್ಞಾನ ಕಾಯ್ದೆಯ 67ಬಿ ಸೆಕ್ಷನ್ ಹೇಳುತ್ತದೆ. ರಾಷ್ಟ್ರೀಯ ಸೈಬರ್ ರಿಪೋರ್ಟಿಂಗ್ ಪೋರ್ಟಲ್‌ನಲ್ಲಿ ಇಂಥ ಪ್ರಕರಣಗಳ ಬಗ್ಗೆ ದೂರು ನೀಡುವ ಅವಕಾಶವನ್ನು ಮಾಡಿಕೊಡಲಾಗಿದೆ.

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಡೆಯಲು ಬಹಳಷ್ಟು ಕಾನೂನುಗಳು ಇವೆಯಾದರೂ ಅವುಗಳ ಪರಿಣಾಮಕಾರಿ ಜಾರಿಯಲ್ಲಿ ಸಮಸ್ಯೆಯಾಗುತ್ತಿದೆ. ಕಾನೂನು ಜಾರಿಯಲ್ಲಿ ಮುಖ್ಯ ಭೂಮಿಕೆ ವಹಿಸುವ ಎಲ್ಲರಿಗೂ ಈ ಬಗ್ಗೆ ಅತೀವ ಜವಾಬ್ದಾರಿ ಮತ್ತು ಆಸಕ್ತಿ ಬೇಕಾಗುತ್ತದೆ. ಪೋಕ್ಸೊ ಕಾಯ್ದೆ ಜಾರಿಯಾದ ಬಳಿಕ ರಾಜ್ಯದಲ್ಲಿ ಸುಮಾರು 28,153 ಪ್ರಕರಣಗಳು ದಾಖಲಾಗಿವೆ. ಆದರೆ, ಇಂಥ ಪ್ರಕರಣಗಳಲ್ಲಿ ಶಿಕ್ಷೆ ಆಗುತ್ತಿರುವುದರ ಪ್ರಮಾಣ ಶೇ 16ರಷ್ಟು ಮಾತ್ರವೇ ಇದೆ. ಹಾಗಾಗಿ, ಈ ಎಲ್ಲ ದೌರ್ಜನ್ಯಗಳಿಂದ ಮಕ್ಕಳನ್ನು ಕಾಪಾಡಲು ಕೆಲವು ಕ್ರಮಗಳನ್ನು ಕೈಗೊಳ್ಳಲೇಬೇಕಾಗಿದೆ. ಇಂಥ ಕ್ರಮಗಳನ್ನು ಇಲ್ಲಿ ವಿವರಿಸಲಾಗಿದೆ:

ತಮ್ಮ ಹಕ್ಕುಗಳ ಬಗ್ಗೆ, ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದರೆ ಆ ಕುರಿತು ದೂರು ನೀಡುವ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು. ಒಳ್ಳೆಯ ಉದ್ದೇಶದ ಮತ್ತು ಕೆಟ್ಟ ಉದ್ದೇಶದ ಸ್ಪರ್ಶಗಳ ಬಗೆಗಿನ ಪಾಠಗಳನ್ನು ಪಠ್ಯಕ್ರಮಗಳಲ್ಲಿ ಅಳವಡಿಸಬೇಕು. ಕೆಟ್ಟ ಚಟಗಳಿಗೆ ಒಳಗಾಗಿ ಮಕ್ಕಳು ಅಸಹಜವಾಗಿ ವರ್ತಿಸುತ್ತಿದ್ದಾರೆಯೇ ಎಂಬುದರ ಬಗ್ಗೆ ಪೋಷಕರು ಗಮನಹರಿಸಬೇಕು. ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿ ಎನ್‌ಜಿಒಗಳು ಮತ್ತು ಸರ್ಕಾರದ ವಿವಿಧ ಇಲಾಖೆಗಳ ಮಧ್ಯೆ ಸಮನ್ವಯ ಇರಬೇಕು.

ಮಕ್ಕಳಸ್ನೇಹಿ ನ್ಯಾಯಾಂಗ ವ್ಯವಸ್ಥೆ ಸೃಷ್ಟಿಸಬೇಕು. ಪೊಲೀಸರು ಒಳಗೊಂಡಂತೆ ಇಡೀ ವ್ಯವಸ್ಥೆಯು ಮಕ್ಕಳ ಸುರಕ್ಷತೆಗೆ ಕಟಿಬದ್ಧವಾಗಿರಬೇಕು. ದೌರ್ಜನ್ಯಕ್ಕೆ ಒಳಗಾಗುವ ಮಕ್ಕಳನ್ನು ರಕ್ಷಿಸಲು ತುರ್ತು ಸೇವಾ ವ್ಯವಸ್ಥೆಯೊಂದನ್ನು ರೂಪಿಸಬೇಕು. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳ ಗುರುತು ಬಹಿರಂಗವಾಗುವುದನ್ನು ತಡೆಯಲು ಪೊಲೀಸರು ಮತ್ತು ಮಾಧ್ಯಮದವರನ್ನು ಸಂವೇದನಾಶೀಲರನ್ನಾಗಿಸಬೇಕು. ಮಕ್ಕಳಿಗೆ ಸಂಬಂಧಿಸಿದ ಎಲ್ಲ ಪ್ರಕರಣಗಳ ತನಿಖೆಯ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ಗಮನ ಕೇಂದ್ರೀಕರಿಸಬೇಕು. ಆ ಮೂಲಕ ಅಪರಾಧಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು.

ಮೇಲೆ ಹೇಳಿರುವ ಈ ಕ್ರಮಗಳು ಕೆಲವು ಉದಾಹರಣೆಗಳಷ್ಟೆ. ಮಕ್ಕಳು ಈ ದೇಶದ ಅತ್ಯುತ್ತಮ ನಾಗರಿಕರಾಗಿ ಮತ್ತು ದೇಶದ ಸಂಪತ್ತಾಗುವಂತೆ ಬೆಳೆಯಲು ಉತ್ತಮ ವಾತಾವರಣ ರೂಪಿಸಲು ಸರ್ಕಾರ ಹಾಗೂ ನಾಗರಿಕ ಸಮಾಜವು ತನ್ನೆಲ್ಲಾ ಶಕ್ತಿಯನ್ನು ಸಂಚಯಿಸಬೇಕಾಗಿದೆ.

ಲೇಖಕ: ಪೊಲೀಸ್ ಮಹಾನಿರ್ದೇಶಕ, ಸಿ.ಐ.ಡಿ. ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು

ಚುರುಮುರಿ



ಕಿರೀಟ, ಕೊಂಬು!

• ಬಿ.ಎನ್. ಮಲ್ಲೇಶ್

'ಏನೋ ತೆಪರ ಇವತ್ತಿನ ಸುದ್ದಿ? ಏನೂ ಬ್ರೇಕ್ ಮಾಡ್ಲಿಲ್ವಾ?' ಹರಟೆಕಟ್ಟೇಲಿ ಟಿ.ವಿ. ಪತ್ರಕರ್ತ ತೆಪರೇಸಿಯನ್ನ ದುಬ್ಬೀರ ಕೇಳಿದ.

'ಒಂದು ಬಿಗ್ ಬ್ರೇಕಿಂಗ್ ನ್ಯೂಸ್ ಮಾಡಾಣ ಅಂತ ಹೋಗಿದ್ದೆ ಕಣ್ರಲೆ, ಎಂ.ಬಿ. ಪಾಟೀಲ್ರು ವಿಧಾನಸೌಧದತ್ರ ಸಿಕ್ಕಿದ್ರು. 'ಸಾರ್ ಒಂದ್ನಿಮಿಷ' ಅಂದೆ. 'ಸಿಎಂ ಕುರ್ಚಿ ಖಾಲಿ ಇಲ್ಲ ಕಣ್ರಿ' ಅನ್ಕೋತ ಹೋಗೇಬಿಟ್ರು. ಅಲ್ಲೇ ಡಿ.ಕೆ. ಸುರೇಶ್ ಸಿಕ್ರು. 'ಏನ್ಸಾ ಅದೂ ಕಿರೀಟ, ಕೊಂಬು' ಅಂದೆ. 'ನಮ್ಗೆ ಕೊಂಬಿಲ್ಲ ಕಣ್ರಿ, ಕಿರೀಟ ಬರುತ್ತೆ ಸ್ವಲ್ಪ ತಡ್ಕಳಿ' ಅಂದ್ರು.

'ನಮ್ಮ ಕಾಂಗ್ರೆಸ್ ಫೈರ್ ಬ್ರ್ಯಾಂಡ್ ರಾಜಣ್ಣರು ಸಿಗ್ಲಿಲ್ವಾ?'

'ಅವರಿಗೆ ಲಕ್ಷ್ಮಣ ರೇಖೆ ಹಾಕಿದಾರಂತೆ, ಫೋನ್ ಎತ್ತಿಲ್ಲ'.

'ಮತ್ತೆ ಬಿಜೆಪಿ ಫೈರ್ ಬ್ರ್ಯಾಂಡು?'

'ಯಾರು ಯತ್ನಾಳ್ ಸಾಹೇಬ್ರಾ? ಸಿಕ್ಕಿದ್ರು. ನೀವು ಟಿ.ವಿ.ಯೋರೆಲ್ಲ ಶಿಕಾರಿಪುರದೋರು, ನಮ್ಮತ್ರ ಏನೈತಿ ನಿಮ್ಗೆ ಕೆಲ್ಸ? ನಾ ಯಾರಿಗೂ ಹೆದರೋ ಮಗ ಅಲ್ಲ' ಅಂದ್ರು.

'ಹೌದಾ? ಅದ್ಕೆ ವಿಜಯೇಂದ್ರ ಸಾಹೇಬ್ರು ಏನಂದ್ರು?'

'ಮನೆಯೊಂದು, ಆರು ಬಾಗಿಲು ಅಂತಿದ್ರಲ್ಲ... ನೋಡ್ತಿರಿ, ಎಲ್ಲ ಬಾಗಿಲಿಗೂ ಬೀಗ ಬೀಳುತ್ತೆ' ಅಂದ್ರಪ.

'ಅಲ್ಲ, ಹೈಕಮಾಂಡ್ ಎಲ್ಲ ಗಮನಿಸ್ತಾ ಇದೆ ಅಂದ್ರೆ ಏನದು? ಅದೇನು ಮನುಷ್ಯಾನ, ಮಿಷಿನ್ನಾ? ಡೆಲ್ಲೀಲಿ ಕುಂತು ಕರ್ನಾಟಕನ ನೋಡೋ ಅಷ್ಟು ದೊಡ್ಡ ಕಣ್ಣದಾವ ಅದಕ್ಕೆ?' ಕೊಟ್ರೇಶಿ ಕೊಕ್ಕೆ.

'ಅದೇ ನಂಗೂ ಅರ್ಥ ಆಗ್ತಿಲ್ಲಪ. ಹೋಗ್ಲಿ, ನಮ್ ಸಿದ್ರಾಮಣ್ಣ ಸಾಹೇಬ್ರುದು ಕಾಲು ನೋವು ಹೆಂಗೈತಂತೆ ಈಗ?' ಗುಡ್ಡೆ ಕೇಳಿದ.

'ಜಮೀರಣ್ಣ ಸಿಕ್ಕಿದ್ರು... 'ಸಿಎಂ ಸಾಹೇಬ್ರುದು ಕಾಲು ನೋವು, ಕುರ್ಚಿ ನೋವು ಎಲ್ಲ ವಾಸಿ ಆಗೋಯ್ತು, ನಾಲ್ಕು ಅಕ್ಷರದ ಎರಡೇ ಗುಳಿಗೆ. ಒಂದು ಕಾಲಿಗೆ, ಇನ್ನೊಂದು ಕುರ್ಚಿಗೆ, ಎಲ್ಲಾ ನೋವು ಫಟಾಫಟ್ ಮಾಯ' ಅಂದ್ರು.

'ಹೌದಾ? ಯಾವುದದು ನಾಲ್ಕು ಅಕ್ಷರದ ಗುಳಿಗೆ?'

'ಲೋಕಾಯುಕ್ತ!'

ಸಂಗತ

ನೆಲದ ಅಸ್ಮಿತೆಗೆ ಸಿಗಲಿ 'ಪುರಸ್ಕಾರ'

ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರದಾನ ಸಮಾರಂಭವನ್ನು, ಸಾಂಸ್ಕೃತಿಕ ಅಸ್ಮಿತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ಕುಪ್ಪಳಿಯಲ್ಲೇ ನಡೆಸುವುದು ಒಳಿತು

• ಅಕ್ಷತಾ ಹುಂಚದಕಟ್ಟೆ

ಕೇರಳದ ವೈಕಂ ಎಂಬ ಪುಟ್ಟ ಊರಿನಲ್ಲಿ 2024ರ ಡಿಸೆಂಬರ್ ಹನ್ನೆರಡರಂದು ನಡೆದ ಸಮಾರಂಭದಲ್ಲಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹಾಗೂ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕನ್ನಡದ ಸಾಹಿತಿ ದೇವನೂರ ಮಹಾದೇವ ಅವರಿಗೆ ತಮಿಳುನಾಡು ಸರ್ಕಾರ ಘೋಷಿಸಿದ್ದ 'ವೈಕಂ' ಪ್ರಶಸ್ತಿಯನ್ನು ನೀಡಿ ಗೌರವಿಸಿದರು.


ತಮಿಳುನಾಡಿನ ಪೆರಿಯಾರ್ (ಇ.ವಿ. ರಾಮಸ್ವಾಮಿ) ಅವರ ನೇತೃತ್ವದಲ್ಲಿ ನೂರು ವರ್ಷಗಳ ಹಿಂದೆ ಜಾತಿ ತಾರತಮ್ಯ, ಜಾತಿ ಶೋಷಣೆ, ದೇಗುಲಗಳು ಮತ್ತು ಊರಿನ ಬೀದಿಗಳಿಗೆ ದಲಿತರಿಗೆ ಪ್ರವೇಶ ನಿರ್ಬಂಧಿಸಿದ್ದುದರ ವಿರುದ್ಧ ಕೇರಳದ ಆ ನೆಲದಲ್ಲಿ ನಡೆದ ವೈಕಂ ಸತ್ಯಾಗ್ರಹವು ಚಾರಿತ್ರಿಕ ಮಹತ್ವವನ್ನು ಪಡೆದಿದೆ. ಅದರ ಶತಮಾನೋತ್ಸವ ಸಮಾರಂಭವನ್ನು ಎರಡು ರಾಜ್ಯಗಳ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಆ ಊರಿನಲ್ಲೇ ಮಾಡಿ, ಮಹಾದೇವ ಅವರಿಗೆ ವೈಕಂ ಪ್ರಶಸ್ತಿ ನೀಡಿದ್ದು ಮಹತ್ವದ ವಿದ್ಯಮಾನ.

ಇದಕ್ಕಾಗಿ ಸಂಭ್ರಮಿಸುವುದರ ಜೊತೆಗೆ, ಅದೇ ಡಿಸೆಂಬರ್‌ನಲ್ಲಿ ನಮ್ಮ ರಾಜ್ಯದ ಕುಪ್ಪಳಿ ಎಂಬ, ಸಾಂಸ್ಕೃತಿಕವಾಗಿ ಮಹತ್ವದ್ದಾಗಿರುವ ಪುಟ್ಟ ಊರಿನಲ್ಲಿ ಪ್ರತಿವರ್ಷ ನಡೆಯುತ್ತಾ ಬಂದಿದ್ದ ಸಾಂಸ್ಕೃತಿಕ ವಿದ್ಯಮಾನವೊಂದು ಅಲ್ಲಿಂದ ರಾಜಧಾನಿಗೆ ವರ್ಗಾವಣೆಗೊಂಡು, ಸಾಂಸ್ಕೃತಿಕ ಅಸ್ಮಿತೆಯನ್ನು ಕಾಯ್ದುಕೊಳ್ಳುವ ದಿಸೆಯಲ್ಲಿ ಹಿನ್ನಡೆ ಉಂಟುಮಾಡಿದೆ ಎಂದು ವಿಷಾದದಿಂದ ಹೇಳಬೇಕಾಗಿ ಬಂದದ್ದು ದುರಂತ.

ಕುವೆಂಪು ಅವರ ಊರಾದ ಕುಪ್ಪಳಿಯಲ್ಲಿ ಅವರ ಹುಟ್ಟುಹಬ್ಬದಂದು (ಡಿ. 29) ದೇಶದ ಮಹತ್ವದ ಲೇಖಕ ಅಥವಾ ಲೇಖಕಿಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಲಾಗುತ್ತಿತ್ತು. ಕವಿ ಬೆಳೆದ ನೆಲದಲ್ಲಿ ನಡೆಯುತ್ತಿದ್ದ ಸಮಾರಂಭದಲ್ಲಿ ಬೇರೆ ಬೇರೆ ಭಾಷೆಯ ಕವಿಗಳು, ಲೇಖಕರು ಈ ಪ್ರಶಸ್ತಿಯನ್ನು ಪಡೆದಿದ್ದಾರೆ. ಇದೊಂದು ಸಾಂಸ್ಕೃತಿಕ ವಿದ್ಯಮಾನವೂ ಆಗಿ ದಶಕಕ್ಕೂ ಮೀರಿ ಅನೂಚಾನವಾಗಿ ನಡೆದುಬಂದಿತ್ತು. ಬೇರೆ ಬೇರೆ ಭಾಷೆಯ ಕವಿಗಳು, ಲೇಖಕರು ಕುವೆಂಪು ಅವರು ಬೆಳೆದ ಈ ನೆಲಕ್ಕೆ ಕಾಲಿಟ್ಟು, ಅವರ ಹೆಸರಿನ ಪ್ರಶಸ್ತಿಯನ್ನು ಹೆಮ್ಮೆಯಿಂದ ಪಡೆದು ಹೋಗಿದ್ದಾರೆ. ಈ ನೆಲದ ಸೊಬಗಿಗೆ ಬೆರಗಾಗಿದ್ದಾರೆ. ಅವರೆಲ್ಲರಿಗೂ ಕುವೆಂಪು ಅವರ ಸಾಹಿತ್ಯದಷ್ಟೇ ಅವರು ಬಾಲ್ಯ ಕಳೆದ ಈ ನೆಲ ಬಹಳ ಮಹತ್ವದ್ದಾಗಿ, ಪ್ರಕೃತಿ ವೈಶಿಷ್ಟ್ಯಗಳಿಂದ ಕೂಡಿದ್ದಾಗಿ ಕಂಡಿದೆ.

ಮಹಾದೇವ ಅವರಿಗೆ ಕುವೆಂಪು ಪುರಸ್ಕಾರ ಬಂದಾಗ ಕುಪ್ಪಳಿಯಲ್ಲಿ ಬಹಳಷ್ಟು ಜನ ಸೇರಿ ಸಂಭ್ರಮಿಸಿದ್ದರು. ತಮಿಳು ಲೇಖಕ ಇಮೈಯಮ್ ಅವರಿಗೆ ಪ್ರಶಸ್ತಿ ಬಂದಾಗ, ತಮಿಳುನಾಡಿನ ಪುಟ್ಟದೊಂದು ಊರಿನ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಅವರ ಹಿರಿಯ ಶಿಷ್ಯ ಬಳಗ ಮತ್ತು ಹಳ್ಳಿಯ ಜನ 'ನಮ್ಮ ಮೇಷ್ಟ್ರಿಗೆ ಕುವೆಂಪು ಪ್ರಶಸ್ತಿ ಬಂದಿದೆ' ಎಂದು ಸಂಭ್ರಮಿಸಿ, ಅದಕ್ಕೆ ಸಾಕ್ಷಿಯಾಗಲು ಅಲ್ಲಿಂದ ಬಸ್ಸುಗಳನ್ನು ಮಾಡಿಕೊಂಡು ಬಂದಿದ್ದರು.

2024ರ ಪುರಸ್ಕಾರವು ಗುಜರಾತಿ ಭಾಷೆಯ ಲೇಖಕಿ ಹಿಮಾಂಶಿ ಇಂದುಲಾಲ್ ಶೆಲತ್ ಅವರಿಗೆ ಸಂದಿದೆ. ಪ್ರದಾನ ಸಮಾರಂಭ ಡಿಸೆಂಬರ್ 29ರ ಬದಲು ಇದೇ 22ರಂದು, ಕುಪ್ಪಳಿಗೆ ಬದಲು ಬೆಂಗಳೂರಿನಲ್ಲಿ ನಡೆಯುತ್ತಿದೆ. ಈ ಸಮಾರಂಭವನ್ನು ಬೆಂಗಳೂರಿಗೆ ವರ್ಗಾಯಿಸಿದ್ದಕ್ಕೆ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಯಾವುದೇ ಕಾರಣ ನೀಡಿಲ್ಲ. ಒಂದು ವೇಳೆ ಪ್ರಶಸ್ತಿಯ ಮೊತ್ತವನ್ನು ನೀಡುತ್ತಿರುವ ದಾನಿಗಳ ಇಚ್ಛೆ ಇದಾಗಿದ್ದರೂ ಪ್ರತಿಷ್ಠಾನವು ಅವರ ಮನವೊಲಿಸುವ ಕಾರ್ಯ ಮಾಡಬಹುದಿತ್ತು. ಏಕೆಂದರೆ ಕುಪ್ಪಳಿಯಲ್ಲಿ ಈ ಸಮಾರಂಭ ನಡೆದರೆ ಅದಕ್ಕೊಂದು ಅರ್ಥಪೂರ್ಣತೆ ಇದೆ, ಅಸ್ಮಿತೆ ಇದೆ. ಅದೇ ಬೆಂಗಳೂರಿನಲ್ಲಿ ಇದು ಹತ್ತರ ಜೊತೆ ಹನ್ನೊಂದನೇ ಕಾರ್ಯಕ್ರಮದಂತೆ ಆಗುತ್ತದೆ ಅಷ್ಟೆ.



ಕುವೆಂಪು ಹಬ್ಬವಾಗಿ, ಕುವೆಂಪು ಅವರ ವೈಚಾರಿಕ ಚಿಂತನೆಗಳಿಗೆ ಅನುಗುಣವಾಗಿ ಒಂದು ಪರಿಷೆಯ ರೀತಿಯಲ್ಲಿ ಈ ಕಾರ್ಯಕ್ರಮವನ್ನು ರೂಪಿಸುವ ಜವಾಬ್ದಾರಿಯನ್ನು ಪ್ರತಿಷ್ಠಾನವು ಹೊರಬೇಕು, ವಿದ್ಯಾರ್ಥಿ ಯುವಜನರನ್ನು ಹೆಚ್ಚು ಹೆಚ್ಚು ಒಳಗೊಳ್ಳಬೇಕು ಎಂಬುದು ಇಲ್ಲಿನ ಜನರ ಅಭಿಲಾಷೆ ಆಗಿತ್ತು. ಆದರೆ ಈ ಕಾರ್ಯಕ್ರಮ ಕುಪ್ಪಳಿಯ ನೆಲದಲ್ಲಿ ನಡೆಯುವ ಬಗ್ಗೆ ಇಲ್ಲಿನ ಎಲ್ಲರಿಗೂ ಹೆಮ್ಮೆಯಿತ್ತು.

'ಪಂಪ ಪ್ರಶಸ್ತಿ'ಯನ್ನು ಆದಿಕವಿ ಪಂಪನ ಊರು ಬನವಾಸಿಯಲ್ಲಿ ನಡೆಯುವ ಕದಂಬೋತ್ಸವದಲ್ಲಿ ಕೊಡಲಾಗುತ್ತಿತ್ತು. ಕೆಲ ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಈ ಪ್ರಶಸ್ತಿ ಕೊಡುವ ವಿದ್ಯಮಾನ ಪ್ರಾರಂಭವಾಯಿತು. ನಂತರ ಮತ್ತೆ ಅದು ಬನವಾಸಿಗೆ ಮರಳಲೇ ಇಲ್ಲ. ಈಗ ಕುವೆಂಪು ಹೆಸರಿನ ಪುರಸ್ಕಾರದ ಸರದಿ. ಈ ಕಾರ್ಯಕ್ರಮವು ಮತ್ತೆ ಕುಪ್ಪಳಿಗೆ ವಾಪಸ್ ಬರುವುದೋ ಇಲ್ಲವೋ ಗೊತ್ತಿಲ್ಲ. ಇದು ಬರಿಯ ಪ್ರಶಸ್ತಿ ಪ್ರದಾನ ಸಮಾರಂಭವಷ್ಟೇ ಆಗಿದ್ದರೆ ಎಲ್ಲಾದರೂ ಕೊಡಿ ಎನ್ನಬಹುದಿತ್ತು. ಆದರೆ ಇದೊಂದು ಸಾಂಸ್ಕೃತಿಕ ವಿದ್ಯಮಾನ. ಇಲ್ಲಿನ ಹಳ್ಳಿಗಳು, ಪಟ್ಟಣಗಳು, ತಾಲ್ಲೂಕು ಕೇಂದ್ರಗಳು, ಜಿಲ್ಲಾಕೇಂದ್ರಗಳನ್ನು ಸಾಂಸ್ಕೃತಿಕವಾಗಿ ಸಮೃದ್ಧವಾಗಿಸುವ ಅವಶ್ಯಕತೆ ಇರುವ ಹೊತ್ತಿನಲ್ಲಿ, ಕುಪ್ಪಳಿಯಂಥ ಊರಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ವಿದ್ಯಮಾನಗಳನ್ನು ನಿಷ್ಕ್ರಿಯವಾಗಿಸುವ ಪ್ರಯತ್ನವು ಕುವೆಂಪು ವಿಚಾರಧಾರೆಗೆ ವಿರುದ್ಧವಾದದ್ದು ಹಾಗೂ ಈ ನೆಲವನ್ನು ಸಾಂಸ್ಕೃತಿಕವಾಗಿ ಬರಡಾಗಿಸುವ ಪ್ರಯತ್ನವೇ ಸರಿ.

ವಾಚಕರ ವಾಣಿ

ಇಂಥ ಸ್ವಹಿಂಸೆ ಬೇಕೆ?

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಬಾಲಕಿಯೊಬ್ಬಳು ಕೂರ್ಮಾಸನದಲ್ಲಿ 200 ಕೆ.ಜಿ. ಭಾರದ ಮೂಟೆಗಳನ್ನು ಹೊತ್ತ ಚಿತ್ರವನ್ನು (ಪ್ರ.ವಾ., ಫೆ. 18) ನೋಡಿ ಮೆಚ್ಚುಗೆಯಾಗುವ ಬದಲಿಗೆ ಗಾಬರಿಯಾಯಿತು. ಪ್ರಕೃತಿದತ್ತ ಶರೀರವನ್ನು ಹೀಗೆ ದಂಡಿಸಿ ಸ್ವಹಿಂಸೆಗೆ ಒಳಗಾಗುವುದು ಸಾಹಸ ಅಥವಾ ಪ್ರತಿಭೆ ಎನ್ನಿಸೀತೆ? ಇದರಿಂದ ಯಾರಿಗೇನು ಲಾಭ? ಇದರ ಬದಲಿಗೆ ಇಂತಿಷ್ಟು ಸಮಯದಲ್ಲಿ ಪುಸ್ತಕಗಳಿಗೆ ಬೈಂಡ್ ಹಾಕುವುದು, ಚಪಾತಿ ಅಥವಾ ಹೋಳಿಗೆ ಲಟ್ಟಿಸುವುದು, ಧಾನ್ಯ ಒಕ್ಕುವುದು, ದಿರಿಸು ಹೊಲಿಯುವುದು... ಹೀಗೆ ಸ್ಪರ್ಧಾತ್ಮಕವಾಗಿ ಮಾಡಬಹುದಾದ ಜನೋಪಯೋಗಿ ಕಾರ್ಯಗಳು ನೂರಾರು ಉಂಟಲ್ಲ.

ಯೋಗಾನಂದ, ಬೆಂಗಳೂರು

ಅನುಕರಣೀಯ ಭೂ ಕಾನೂನು

ಕಠಿಣ ಭೂ ಕಾನೂನಿಗೆ ಉತ್ತರಾಖಂಡ ಸಚಿವ ಸಂಪುಟ ಒಪ್ಪಿಗೆ ನೀಡಿರುವ ಸುದ್ದಿಯನ್ನು (ಪ್ರ.ವಾ., ಫೆ. 20) ಓದಿದ ನಂತರ, ಕರ್ನಾಟಕದಲ್ಲೂ ಇಂತಹ ಕಠಿಣ ಕಾನೂನು ಜಾರಿಗೆ ಬಂದರೆ ಒಳಿತು ಎನಿಸಿತು. ಕರ್ನಾಟಕವು ಬಹು ಉದಾರಿ ರಾಜ್ಯ ಎಂದು ಮೊದಲಿನಿಂದಲೂ ಹೆಸರುವಾಸಿಯಾಗಿದೆ. ಬಹುಶಃ ಈ ಖ್ಯಾತಿಯನ್ನು ಉಳಿಸಲೋ ಎಂಬಂತೆ ಹೊರ ರಾಜ್ಯಗಳ ಸಿರಿವಂತರು (ಇವರಲ್ಲಿ ಹೆಚ್ಚಿನವರು ರಾಜಕೀಯ ಪಕ್ಷಗಳ ಬೆಂಬಲಿಗರು ಎಂಬುದರಲ್ಲಿ ಸಂಶಯವಿಲ್ಲ) ಉದ್ದಿಮೆ ಹಾಗೂ ಅಭಿವೃದ್ಧಿ ಕಾರ್ಯಗಳ ನೆಪದಲ್ಲಿ ರಾಜ್ಯದ ಭೂಮಿಯನ್ನು ಸುಲಭದ ದರದಲ್ಲಿ ಕೊಳ್ಳಲು ರಾಜ್ಯದ ವಿವಿಧ ಪಕ್ಷಗಳ ನೇತೃತ್ವದ ಸರ್ಕಾರಗಳು ಅನುಕೂಲ ಮಾಡಿಕೊಡುತ್ತವೆ. ಆ ಭೂಮಿ ಪಡೆದ ನಂತರ ಉದ್ದೇಶಿತ ಕೆಲಸಗಳು ಕಾರ್ಯರೂಪಕ್ಕೆ ಬರುತ್ತವೋ ಇಲ್ಲವೋ ಎನ್ನುವುದು ಬೇರೆ ವಿಚಾರ. ಆದರೆ ಅಲ್ಲಿನ ಮಂದಿ ಇಲ್ಲಿ ಬಂದು, ಇಲ್ಲಿನವರನ್ನು ಒಕ್ಕಲೆಬ್ಬಿಸಿ, ತಮ್ಮದೇ ವಲಯ ಸ್ಥಾಪಿಸಿ ಪ್ರಭಾವಿಗಳಾಗಿಬಿಡುತ್ತಾರೆ.

ಈಗೀಗ ನಮ್ಮ ಮಂತ್ರಿಗಳು ದಿನಬೆಳಗಾದರೆ ಗ್ರೇಟರ್ ಬೆಂಗಳೂರು, ಬೆಂಗಳೂರು ಉಪನಗರಗಳ ಸೃಷ್ಟಿಯ ಬಗ್ಗೆ ಹೇಳಿಕೆಗಳನ್ನು ನೀಡುತ್ತಿರುತ್ತಾರೆ. ಇದರಿಂದ ಉತ್ತೇಜಿತರಾಗಿ ಹೊರರಾಜ್ಯಗಳ ಸಿರಿವಂತರು ಇಲ್ಲಿನ ಭೂಮಿ ಖರೀದಿಗೆ ಮುಂದಾಗುತ್ತಾರೆ. ಇಲ್ಲಿನ ರೈತರು ಹಣದಾಸೆಗಾಗಿ ತಮ್ಮನ್ನು ತಾವೇ ಮಾರಿಕೊಳ್ಳುವ ಪರಿಸ್ಥಿತಿ ಉಂಟಾಗುತ್ತದೆ. ಇಂತಹುದೇ ಪರಿಸ್ಥಿತಿ ಉತ್ತರಾಖಂಡದಲ್ಲಿ ಇದ್ದುದರಿಂದಲೇ ಅಲ್ಲಿನ ಸರ್ಕಾರ ಕಠಿಣ ಭೂ ಕಾನೂನು ಜಾರಿಗೆ ತರಲು ಸಿದ್ಧವಾಗಿರುವುದು.

ರಮೇಶ್, ಬೆಂಗಳೂರು

ಮೃತದೇಹ ಎಳೆದೊಯ್ದವರಿಗೆ ಕಠಿಣ ಶಿಕ್ಷೆಯಾಗಲಿ

ಕಲಬುರಗಿಯ ಖಾಸಗಿ ಸಿಮೆಂಟ್ ಕಂಪನಿಯೊಂದರಲ್ಲಿ, ಹೃದಯಾಘಾತದಿಂದ ಮೃತಪಟ್ಟ ಕಾರ್ಮಿಕನ ಮೃತದೇಹವನ್ನು ಇತರ ಕಾರ್ಮಿಕರು ಪ್ರಾಣಿಯಂತೆ ಅಮಾನವೀಯವಾಗಿ ರಸ್ತೆಯಲ್ಲಿ ಎಳೆದೊಯ್ದಿರುವ ಪ್ರಕರಣ ತೀವ್ರ ಆಘಾತ ಉಂಟು ಮಾಡುವಂತಹದ್ದು. ಮೃತದೇಹವನ್ನು ಎಳೆದೊಯ್ಯುತ್ತಿರುವ ವಿಡಿಯೊ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ನಾಗರಿಕ ಸಮಾಜ ತಲೆ ತಗ್ಗಿಸುವಂತಿದೆ. ಬಿಹಾರ ಮೂಲದ ಈ ಕಾರ್ಮಿಕನ ಮೃತದೇಹದ ವಿಲೇವಾರಿಯನ್ನು ಜಿಲ್ಲಾಡಳಿತವು ಹೊಣೆಗಾರಿಕೆಯಿಂದ ನಿಭಾಯಿಸಬೇಕಾಗಿತ್ತು. ಕಾರ್ಖಾನೆಯ ಆಡಳಿತ ಮಂಡಳಿ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ತೋರಿದಂತೆ ಕಾಣುತ್ತದೆ.

ಬಡವರು ಎಂಬ ಕಾರಣಕ್ಕೆ ಯಾವುದೇ ಕಂಪನಿ ಅಥವಾ ಆಡಳಿತ ಮಂಡಳಿಯು ಯಾರನ್ನೂ ಕನಿಷ್ಠವಾಗಿ ನೋಡಬಾರದು. ಪ್ರತಿ ವ್ಯಕ್ತಿಗೂ ಗೌರವ ಕೊಡುವುದು ನಾಗರಿಕ ಸಮಾಜದ ಕರ್ತವ್ಯ. ಕಾರ್ಮಿಕ ಸಚಿವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರಿ ಸಂಸ್ಥೆ ಅಥವಾ ಖಾಸಗಿ ಕಂಪನಿಗಳಲ್ಲಿ ಇಂತಹ ಪ್ರಕರಣ ಮರುಕಳಿಸದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಮೃತದೇಹ ಎಳೆದೊಯ್ದವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಮಾನವೀಯತೆ ಇಲ್ಲದ ಈ ವ್ಯಕ್ತಿಗಳಿಗೆ ದಯೆ ತೋರಬಾರದು.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಭಿನ್ನ ಅಭಿಪ್ರಾಯಕ್ಕೆ ಈ ಪರಿ ಅಸಹನೆಯೇಕೆ?

ಮಹಾ ಕುಂಭಮೇಳದಲ್ಲಿ ಭಾಗವಹಿಸಿದ್ದ ಭಕ್ತರ ಸಂಖ್ಯೆ ಮತ್ತು ಅಲ್ಲಿಗೆ ಸಂಬಂಧಿಸಿದ ಇತರ ವಿಷಯಗಳ ಕುರಿತು ವಿದ್ವಾಂಸರೊಬ್ಬರು ಬರೆದುಕೊಂಡಿದ್ದ ಅಭಿಪ್ರಾಯವನ್ನು ನಮ್ಮ ಬಡಾವಣೆಯ ಜಾಲತಾಣದ ಗುಂಪಿನಲ್ಲಿ ಹಂಚಿಕೊಂಡಿದ್ದೆ. ಆ ವಿದ್ವಾಂಸರು ಪ್ರಯಾಗರಾಜ್‌ಗೆ ಖುದ್ದಾಗಿ ಹೋಗಿ ಬಂದ ಅನುಭವ ಮತ್ತು ಸಮರ್ಥ ಕಾರಣಗಳನ್ನು ನೀಡಿ, ಕೆಲವು ಪ್ರಶ್ನೆಗಳನ್ನು ಎತ್ತಿದ್ದರು. ಅಲ್ಲಿಗೆ ತಲುಪಲು ಇರುವ ವೈಮಾನಿಕ, ರೈಲು, ರಸ್ತೆ ಸಂಪರ್ಕ, ಸ್ನಾನಘಟ್ಟದಂತಹವುಗಳ ವಿವರ ನೀಡಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಕ್ತರ ಬಗ್ಗೆ ಅಲ್ಲಿನ ಸರ್ಕಾರ ಸರಿಯಾದ ಮಾಹಿತಿ ನೀಡುತ್ತಿಲ್ಲ ಮತ್ತು ಶುಚಿಗೆ ಮಹತ್ವ ಕೊಡುತ್ತಿಲ್ಲ ಎಂಬಂತಹ ವಿಚಾರಗಳನ್ನು ಹಂಚಿಕೊಂಡಿದ್ದರು. ಈ ಬರಹವನ್ನು ನೋಡಿದ್ದೇ ತಡ ಕೆಲವರು ಅತಿಯಾದ ಪ್ರತಿಕ್ರಿಯೆ ನೀಡಿ, 'ಇವೆಲ್ಲ ಎಡಪಂಥೀಯರು, ಸೋಗಲಾಡಿಗಳು ಮಾಡುವ ಆರೋಪಗಳು. ನೀವೇಕೆ ಈ ವಿಚಾರಗಳನ್ನು ಹಂಚಿಕೊಂಡಿರಿ. ನಿಮ್ಮೊಳಗೇ ಇಟ್ಟುಕೊಳ್ಳಿ. ಪ್ರಯಾಗರಾಜ್‌ನ ಕುಂಭಮೇಳ ಭಾರತದ ಧರ್ಮ, ಸಂಸ್ಕೃತಿಯ ಪ್ರತೀಕ. ಅದನ್ನು ಪ್ರಶ್ನಿಸುವ ನೀವೆಲ್ಲ ಅದರ ವಿರೋಧಿಗಳು' ಎಂದೆಲ್ಲ ಬಹಳ ಕಟುವಾಗಿ ಪ್ರತಿಕ್ರಿಯೆ ನೀಡಿದರು.

ಒಂದು ಸಕಾರಣವಾದ ಅಭಿಪ್ರಾಯವನ್ನು ಓದಿ, ಅದರ ಬಗ್ಗೆ ಆಕ್ಷೇಪ ಇದ್ದರೆ ಪರಸ್ಪರ ಹಂಚಿಕೊಳ್ಳದೆ ಅಕಾರಣವಾಗಿ ನಿಂದಿಸುವಷ್ಟು ನಮ್ಮ ಸಮಾಜ ಅಸಹನೀಯ ಆಗುತ್ತಿದೆಯೇ ಎಂದು ಆಶ್ಚರ್ಯವಾಯಿತು. ಗಂಗೆ, ಯಮುನೆಯ ಸಂಗಮದ ಭರಾಟೆಯಲ್ಲಿ ನಮ್ಮ ರಾಜ್ಯದ ನದಿಗಳ ಸಂಗಮದ ಹಬ್ಬ ಕಣ್ಣಿಗೆ ಕಾಣಲೇ ಇಲ್ಲ. 'ಗಂಗೆ ಮಾತ್ರ ಪವಿತ್ರವೆ, ನಮ್ಮ ತುಂಗೆ ಪವಿತ್ರ ಅಲ್ಲವೇ' ಎಂದು ಕುವೆಂಪು ಉತ್ತರ– ದಕ್ಷಿಣದ ಬಗೆಗಿನ ತಾರತಮ್ಯವನ್ನು ಪ್ರಶ್ನೆ ಮಾಡಿದ್ದರು. ನದಿಗಳು ಎಲ್ಲವೂ ಪವಿತ್ರವೆ. ಅರ್ಥ ಮಾಡಿಕೊಂಡರೆ ಮಾತ್ರ ಜ್ಞಾನತೀರ್ಥಗಳು. ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿನ ನೀರು ಪ್ರಸ್ತುತ ಸ್ನಾನಕ್ಕೆ ಸುರಕ್ಷಿತವಲ್ಲ ಎಂದು ಕೇಂದ್ರ ಸರ್ಕಾರದ ದತ್ತಾಂಶವೇ ಹೇಳಿದೆ. ಆದರೆ ಸ್ನಾನ ಮಾತ್ರವಲ್ಲ ಕುಡಿಯಲು ಸಹ ಯೋಗ್ಯ ಎಂದು ಉತ್ತರಪ್ರದೇಶದ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯ ಹೆಚ್ಚು ಮುಖ್ಯವಾಗಬೇಕು. ಈ ದಿಸೆಯಲ್ಲಿ ಸಂಯಮದಿಂದ ಯೋಚಿಸುವಂತೆ ಆಗಬೇಕು.

ಎಚ್.ಟಿ.ಕೃಷ್ಣಮೂರ್ತಿ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುರುತು ದೃಢೀಕರಣ; ಖಾಸಗಿ ಕಂಪನಿಗಳಿಗೆ ಅವಕಾಶ

ಆಧಾರ್ ನಿಯಮ ತಿದ್ದುಪಡಿ

ದತ್ತಾಂಶ ಸುರಕ್ಷತೆಗೆ ಭಂಗ?



ಪ್ರಜಾವಾಣಿ ವಾರ್ತೆ

ಕೇಂದ್ರ ಸರ್ಕಾರವು ಆಧಾರ್ ಗುರುತಿನ ಚೀಟಿಯ ದೃಢೀಕರಣಕ್ಕೆ ಸಂಬಂಧಪಟ್ಟ 2020ರ ನಿಯಮಗಳಲ್ಲಿ ಕೆಲವು ತಿದ್ದುಪಡಿ ಮಾಡಿದೆ. ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು 'ಉತ್ತಮ ಆಡಳಿತಕ್ಕಾಗಿ ಆಧಾರ್ ದೃಢೀಕರಣ (ಸಮಾಜ ಕಲ್ಯಾಣ, ನಾವೀನ್ಯ, ಜ್ಞಾನ) ತಿದ್ದುಪಡಿ ನಿಯಮಗಳು-2025' ಅನ್ನು ಜಾರಿಗೊಳಿಸಿ ಜನವರಿ 31ರಂದು ಅಧಿಸೂಚನೆ ಹೊರಡಿಸಿದೆ.

ಜನರ ಅನುಕೂಲಕ್ಕಾಗಿ ಮತ್ತು ವಿವಿಧ ಸೇವೆಗಳನ್ನು ಪಡೆಯುವ ವಿಧಾನವನ್ನು ಸರಳೀಕರಣಗೊಳಿಸುವುದಕ್ಕಾಗಿ ತಿದ್ದುಪಡಿ ತಂದಿರುವುದಾಗಿ ಕೇಂದ್ರ ಹೇಳಿದೆ. ಇದುವರೆಗೆ ಸರ್ಕಾರಿ ಇಲಾಖೆಗಳು, ಸಂಸ್ಥೆಗಳು ಮತ್ತು ಖಾಸಗಿ ವಲಯದ ಬ್ಯಾಂಕ್, ವಿಮೆ ಮುಂತಾದ ಹಣಕಾಸು ಸಂಸ್ಥೆಗಳು, ದೂರಸಂಪರ್ಕ ಕಂಪನಿಗಳಿಗೆ ಮಾತ್ರ ಆಧಾರ್ ದೃಢೀಕರಣ (ಬಯೊಮೆಟ್ರಿಕ್ ಮತ್ತು ಮುಖಚಹರೆ ಪತ್ತೆ ವಿಧಾನ) ಮಾಡಲು ಅವಕಾಶ ಇತ್ತು. ಕೇಂದ್ರ ಸರ್ಕಾರವು ಈಗ ತಂದಿರುವ ತಿದ್ದುಪಡಿಯು ಇ-ಕಾಮರ್ಸ್, ಪ್ರಯಾಣ, ಪ್ರವಾಸೋದ್ಯಮ, ಆತಿಥ್ಯ ಮತ್ತು ಆರೋಗ್ಯದಂತಹ ವಲಯಗಳಲ್ಲಿ ತೊಡಗಿಕೊಂಡಿರುವ ಖಾಸಗಿ ಕಂಪನಿಗಳಿಗೂ ಆಧಾರ್ ದೃಢೀಕರಣ ಸೌಲಭ್ಯ ಬಳಸಲು ಅವಕಾಶ ಕಲ್ಪಿಸುತ್ತದೆ.

'ಇ-ಕಾಮರ್ಸ್, ಪ್ರಯಾಣ, ಪ್ರವಾಸೋದ್ಯಮ, ಆತಿಥ್ಯ, ಆರೋಗ್ಯ ಮುಂತಾದ ವಲಯಗಳ ವಿವಿಧ ಸೇವೆಗಳನ್ನು ಪಡೆಯಲು ಸಾರ್ವಜನಿಕ ಹಿತಾಸಕ್ತಿಯಿಂದ ಈ ತಿದ್ದುಪಡಿ ತರಲಾಗಿದೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ. ಆದರೆ, ಇದು ಜನರ ಖಾಸಗಿ ಮಾಹಿತಿ ಸೋರಿಕೆಯ ಆತಂಕಕ್ಕೆ ಕಾರಣವಾಗಿದೆ. ಬಯೊಮೆಟ್ರಿಕ್ ವಿವರ ಸೇರಿದಂತೆ ವಿವಿಧ ಬಳಕೆದಾರರ ಖಾಸಗಿ ದತ್ತಾಂಶದ ರಕ್ಷಣೆಯ ಸಂಬಂಧ ತಿದ್ದುಪಡಿ ನಿಯಮದಲ್ಲಿ ಸ್ಪಷ್ಟ ಮಾರ್ಗಸೂಚಿಯೇ ಇಲ್ಲ ಎನ್ನುವ ಆರೋಪ ವ್ಯಕ್ತವಾಗಿದೆ.

ಕೇಂದ್ರ ಸರ್ಕಾರವು 2023ರ ಏಪ್ರಿಲ್‌ನಲ್ಲಿಯೇ ಹೊಸ ತಿದ್ದುಪಡಿಯ ಕರಡನ್ನು ಸಿದ್ಧಪಡಿಸಿತ್ತು. ಈ ಸಂಬಂಧ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ಸಲ್ಲಿಸುವಂತೆ ಕೋರಿತ್ತು. ಅಂತಿಮವಾಗಿ ಈಗ ತಿದ್ದುಪಡಿ ಜಾರಿಗೆ ಬಂದಿದೆ. ಆದರೆ, ಸಾರ್ವಜನಿಕ ಅಭಿಪ್ರಾಯದ ವಿವರಗಳನ್ನು ಕೇಂದ್ರ ಸರ್ಕಾರ ಬಹಿರಂಗಪಡಿಸಿಲ್ಲ.

ಗ್ರಾಹಕರ ಗುರುತನ್ನು ಖಾತರಿ ಪಡಿಸಿಕೊಳ್ಳಲು ಖಾಸಗಿ ಕಂಪನಿಗಳು ಆಧಾರ್ ಸಂಖ್ಯೆ ಕೇಳುವುದನ್ನು 2018ರಲ್ಲಿ ಸುಪ್ರೀಂ ಕೋರ್ಟ್ ನಿರ್ಬಂಧಿಸಿತ್ತು. ಕೇಂದ್ರ ಸರ್ಕಾರವು ಆಧಾರ್ ನಿಯಮಾವಳಿಗೆ ಈಗ ತಿದ್ದುಪಡಿ ತರುವ ಮೂಲಕ ವಿವಿಧ ವಲಯಗಳಲ್ಲಿ ತೊಡಗಿಸಿಕೊಂಡಿರುವ ಖಾಸಗಿ ಸಂಸ್ಥೆಗಳಿಗೂ ಆಧಾರ್ ದೃಢೀಕರಣ ಮಾಡಲು ಅವಕಾಶ ಕಲ್ಪಿಸಿದೆ. ಸಾರ್ವಜನಿಕರ ಹಿತಾಸಕ್ತಿಯಿಂದ, ಜನರಿಗೆ ಉತ್ತಮ ಸೇವೆ ನೀಡುವ ಸಲುವಾಗಿ ಈ ತಿದ್ದುಪಡಿ ತರಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಖಾಸಗಿಯವರ ಬಳಿ ಸಂಗ್ರಹವಾಗಲಿರುವ ಜನರ ಬಯೊಮೆಟ್ರಿಕ್ ಮತ್ತು ಇತರ ವೈಯಕ್ತಿಕ ದತ್ತಾಂಶದ ಸುರಕ್ಷತೆಗೆ ಸ್ಪಷ್ಟ ಮಾರ್ಗಸೂಚಿಯನ್ನು ರೂಪಿಸಿಲ್ಲ ಎನ್ನುವ ಆಕ್ಷೇಪ ವ್ಯಕ್ತವಾಗಿದೆ

ಆಧಾರ್ ಆಧಾರಿತ ಡಿಜಿಟಲ್ ವಹಿವಾಟು ಏರಿಕೆ

140 ಕೋಟಿ — 2009ರಿಂದ ಇಲ್ಲಿಯವರೆಗೆ ಯುಐಡಿಎಐ ಮಾಡಿರುವ ಆಧಾರ್ ನೋಂದಣಿ

550 — ಆಧಾರ್ ದೃಢೀಕರಣ ಸೇವೆಯನ್ನು ಬಳಸುತ್ತಿರುವ ಹಣಕಾಸು ಮತ್ತು ದೂರಸಂಪರ್ಕ ಕಂಪನಿಗಳು

9 ಕೋಟಿ — ಪ್ರತಿ ದಿನ ದೇಶದಾದ್ಯಂತ ನಡೆಯುತ್ತಿರುವ ಸರಾಸರಿ ಆಧಾರ್ ದೃಢೀಕರಣ

12 ಕೋಟಿ — ಜನವರಿ 30ಗಳಲ್ಲಿ ನಡೆದ ಎಐ ಆಧಾರಿತ ಆಧಾರ್ ಚಹರೆ ದೃಢೀಕರಣಗಳು

102 ಕೋಟಿ — 2021ರ ಅಕ್ಟೋಬರ್‌ನಿಂದ ಇಲ್ಲಿಯವರೆಗೆ ನಡೆದಿರುವ ಎಐ ಆಧಾರಿತ ಆಧಾರ್ ಚಹರೆ ದೃಢೀಕರಣಗಳು

78 ಕೋಟಿ — ಕಳೆದ 12 ತಿಂಗಳಲ್ಲಿ ನಡೆದ ಎಐ ಆಧಾರಿತ ಆಧಾರ್ ಮುಖಚಹರೆ ದೃಢೀಕರಣಗಳು

43 ಕೋಟಿ — ಜನವರಿಯಲ್ಲಿ ನಡೆದ ಆಧಾರ್ ಆಧಾರಿತ ಇ-ಕೆವೈಸಿಗಳು

2,268 ಕೋಟಿ — ಸೇವೆ ಆರಂಭಗೊಂಡ ನಂತರ ಇಲ್ಲಿಯವರೆಗೂ (ಜ.31) ನಡೆದಿರುವ ಆಧಾರ್ ಇ-ಕೆವೈಸಿಗಳು



ಹೆಚ್ಚಿದ ಆಧಾರ್ ದೃಢೀಕರಣ

ದೇಶದಲ್ಲಿ ಈಗ ಆಧಾರ್ ದೃಢೀಕರಣ ಹೆಚ್ಚಾಗುತ್ತಿದ್ದು, ಕಳೆದ ವರ್ಷದ ಜನವರಿ 30ಗಳಿಗೆ ಹೋಲಿಸಿದರೆ ಈ ಜನವರಿಯಲ್ಲಿ ಈ ಪ್ರಮಾಣ ಶೇ 32ರಷ್ಟು ಹೆಚ್ಚಳವಾಗಿದೆ.

ಆಧಾರ್ ಬಳಕೆದಾರರ ಮುಖಚಹರೆಯ ಆಧಾರದಲ್ಲಿ ಅವರ ವಿವರಗಳನ್ನು ದೃಢೀಕರಿಸುವ ಎಐ ತಂತ್ರಜ್ಞಾನವನ್ನು 2021ರ ಅಕ್ಟೋಬರ್‌ನಲ್ಲಿ ಪರಿಚಯಿಸಲಾಯಿತು. ಈ ವಿಧಾನದಲ್ಲಿ ಬಳಕೆದಾರರ ಗುರುತನ್ನು ದೃಢೀಕರಿಸುವುದು ಗಣನೀಯವಾಗಿ ಹೆಚ್ಚಿದೆ.

2024ರ ಜನವರಿ	2025ರ ಜನವರಿ
214.8 ಕೋಟಿ	284 ಕೋಟಿ



ಸೆಕ್ಷನ್ ರದ್ದು ಮಾಡಿದ್ದ 'ಸುಪ್ರೀಂ'

2016ರಲ್ಲಿ ಕೇಂದ್ರ ಸರ್ಕಾರ ಆಧಾರ್ ಕಾಯ್ದೆಯನ್ನು ಜಾರಿಗೊಳಿಸಿದಾಗ ಕಾಯ್ದೆಯ 57ನೇ ಸೆಕ್ಷನ್ ಬಗ್ಗೆ ವಿವಿಧ ವಲಯಗಳಿಂದ ಆಕ್ಷೇಪ ವ್ಯಕ್ತವಾಗಿತ್ತು. ಖಾಸಗಿಯವರೂ ಗ್ರಾಹಕರಿಂದ ಆಧಾರ್ ಕಾರ್ಡ್/ಅದರ ಮಾಹಿತಿ ಪಡೆಯುವುದಕ್ಕೆ ಈ ಸೆಕ್ಷನ್ ಅವಕಾಶ ನೀಡಿತ್ತು. ಈ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. 2018ರಲ್ಲಿ ಈ ಸೆಕ್ಷನ್ ಅನ್ನು ರದ್ದು ಪಡಿಸಿದ್ದ ಸುಪ್ರೀಂ ಕೋರ್ಟ್, 'ಇದು ಅಸಾಂವಿಧಾನಿಕ. ಇದರಿಂದ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ' ಎಂದು ಹೇಳಿತ್ತು. 2019ರಲ್ಲಿ ಆಧಾರ್ ಕಾಯ್ದೆಗೆ ತಿದ್ದುಪಡಿ ತಂದ ಕೇಂದ್ರ ಸರ್ಕಾರವು, ಜನ ಸ್ವಯಂಪ್ರೇರಿತವಾಗಿ ಆಧಾರ್ ಮಾಹಿತಿಯನ್ನು ಹಂಚಿಕೊಳ್ಳಬಹುದು ಎಂದಿತ್ತು. ಇದನ್ನೂ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದ್ದು, ಪ್ರಕರಣ ವಿಚಾರಣೆಯ ಹಂತದಲ್ಲಿದೆ. ಇದರ ನಡುವೆಯೇ, ಕೇಂದ್ರ ಸರ್ಕಾರವು ತಿದ್ದುಪಡಿ ಮಾಡುವ ಮೂಲಕ ಖಾಸಗಿಯವರಿಗೆ ಆಧಾರ್ ದೃಢೀಕರಣದ ಅವಕಾಶ ಕಲ್ಪಿಸಿರುವುದು ಸುಪ್ರೀಂ ಕೋರ್ಟ್‌ನ 2018ರ ತೀರ್ಪಿನ ಉಲ್ಲಂಘನೆ ಎಂದು ಕೆಲವರು ಆಕ್ಷೇಪಿಸಿದ್ದಾರೆ. ಹಾಗೆಯೇ ತಿದ್ದುಪಡಿ ನಿಯಮದಲ್ಲಿ ಪ್ರಸ್ತಾಪಿಸಿರುವ 'ರಾಷ್ಟ್ರದ ಹಿತಾಸಕ್ತಿ' ಎನ್ನುವುದು ಅಸ್ಪಷ್ಟವಾಗಿದೆ ಎನ್ನುವ ಆಕ್ಷೇಪವೂ ಕೇಳಿಬಂದಿದೆ.



ಅನುಮತಿ ಕಡ್ಡಾಯ

ಆಧಾರ್ ದೃಢೀಕರಣ ಸೌಲಭ್ಯವನ್ನು ಬಳಸಿಕೊಳ್ಳುವುದಕ್ಕೆ ಖಾಸಗಿ ಸಂಸ್ಥೆಗಳು ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕು ಎಂದು ತಿದ್ದುಪಡಿ ಹೇಳುತ್ತದೆ. ಆಧಾರ್ ದೃಢೀಕರಣಕ್ಕಾಗಿ ಮನವಿ ಮಾಡುವ ಪ್ರಸ್ತಾವವನ್ನು ಕಂಪನಿಗಳು ಸಂಬಂಧಪಟ್ಟ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಇಲಾಖೆ/ಸಚಿವಾಲಯಗಳಿಗೆ ಸಲ್ಲಿಸಬೇಕು. ಆ ಮನವಿಯನ್ನು ಭಾರತೀಯ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರವು (ಯುಐಡಿಎಐ) ಪರಿಶೀಲಿಸುತ್ತದೆ. ಅಂತಿಮವಾಗಿ, ಕೇಂದ್ರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಯು ಅನುಮತಿ ನೀಡುವ ನಿರ್ಧಾರ ಕೈಗೊಳ್ಳುತ್ತದೆ. ಆಧಾರ್ ದೃಢೀಕರಣಕ್ಕಾಗಿ ಅನುಮತಿ ಪಡೆಯಲು ಮನವಿ ಮಾಡುವಾಗ ಕಂಪನಿಗಳು 'ರಾಷ್ಟ್ರದ ಹಿತಾಸಕ್ತಿ'ಗೆ ಬದ್ಧವಾಗಿರಬೇಕು ಎಂದು ತಿದ್ದುಪಡಿ ಹೇಳುತ್ತದೆ.

ತಿದ್ದುಪಡಿ ಏನು?

2020ರಲ್ಲಿ ರೂಪಿಸಿದ ನಿಯಮಾವಳಿಯಲ್ಲಿ 3ನೇ ನಿಯಮವು ಆಧಾರ್ ದೃಢೀಕರಣದ ಉದ್ದೇಶಗಳ ಬಗ್ಗೆ ಹೇಳುತ್ತದೆ. ಇದರಲ್ಲಿ ಎರಡು ಉಪನಿಯಮಗಳೂ ಇವೆ.

ಉಪನಿಯಮ (1): ಉತ್ತಮ ಆಡಳಿತ, ಸಾರ್ವಜನಿಕ ಹಣದ ಸೋರಿಕೆ ತಡೆ, ಜನರ ಜೀವನ ಸುಧಾರಣೆಗೆ ಉತ್ತೇಜನ ನೀಡುವುದು ಮತ್ತು ಅವರಿಗೆ ಉತ್ತಮ ಸೌಲಭ್ಯ ಕಲ್ಪಿಸುವ ದಿಸೆಯಲ್ಲಿ ಮನವಿ ಮಾಡಿರುವ ಸಂಸ್ಥೆಗಳಿಗೆ ಈ ಕೆಳಗಿನ ಉದ್ದೇಶಗಳಿಗಾಗಿ ಆಧಾರ್ ದೃಢೀಕರಣಕ್ಕೆ ಕೇಂದ್ರ ಸರ್ಕಾರವು ಅನುಮತಿ ನೀಡಬಹುದು. ಅವುಗಳೆಂದರೆ...

ಎ) ಉತ್ತಮ ಆಡಳಿತವನ್ನು ಖಾತರಿ ಪಡಿಸಲು ಡಿಜಿಟಲ್ ವೇದಿಕೆಗಳ (ಪ್ಲಾಟ್‌ಫಾರ್ಮ್) ಬಳಕೆ;

ಬಿ) ಸಾಮಾಜಿಕ ಕಲ್ಯಾಣ ಯೋಜನೆಗಳ ಹಣದ ಅಪವ್ಯಯ ತಡೆ ಮತ್ತು

ಸಿ) ನಾವೀನ್ಯಕ್ಕೆ ಬೆಂಬಲ ಮತ್ತು ಜ್ಞಾನ ಹಂಚಿಕೆಗೆ ಅವಕಾಶ

ಈಗ ಪರಿಷ್ಕರಣೆ ಮಾಡಲಾಗಿರುವ ನಿಯಮದಲ್ಲಿ 3ನೇ ನಿಯಮದ ಉಪನಿಯಮ (1)ಕ್ಕೆ ತಿದ್ದುಪಡಿ ತರಲಾಗಿದ್ದು, 'ಉತ್ತಮ ಆಡಳಿತ, ಸಾರ್ವಜನಿಕ ಹಣದ ಸೋರಿಕೆ ತಡೆ, ಜನರ ಜೀವನ ಸುಧಾರಣೆಗೆ ಉತ್ತೇಜನ ನೀಡುವುದು ಮತ್ತು ಅವರಿಗೆ ಉತ್ತಮ ಸೇವೆಗಳ ಸೌಲಭ್ಯ ಕಲ್ಪಿಸುವ ದಿಸೆಯಲ್ಲಿ' ಎಂಬ ಪದಗಳನ್ನು ಕೈಬಿಡಲಾಗಿದೆ.

ಉಪನಿಯಮದ ಕಲಂ (ಎ)ಯ ಬಳಿಕ ಮತ್ತೊಂದು ಕಲಂ (ಎಎ) ಸೇರ್ಪಡೆಗೊಳಿಸಲಾಗಿದೆ. ಅದರಲ್ಲಿ 'ನಿವಾಸಿಗಳ ಜೀವನ ಸುಧಾರಣೆಗೆ ಉತ್ತೇಜನ ನೀಡುವುದು ಮತ್ತು ಉತ್ತಮ ಸೇವೆ ದೊರೆಯುವಂತೆ ಮಾಡುವುದು' ಎಂದು ವಿವರಿಸಲಾಗಿದೆ.

ಆಧಾರ: ಪಿಟಿಐ, ಯುಐಡಿಎಐ ವೆಬ್‌ಸೈಟ್, 2020ರ ನಿಯಮಗಳು ಮತ್ತು 2025ರ ತಿದ್ದುಪಡಿ ನಿಯಮಗಳು

ಮುಗಿಯದ ಆತಂಕ

ಆಧಾರ್ ದತ್ತಾಂಶದ ಸುರಕ್ಷತೆಯ ಬಗ್ಗೆ ಆತಂಕ ಇಂದಿನದ್ದಲ್ಲ. ದೇಶದ ಪ್ರತಿ ಪ್ರಜೆಗೂ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ಪರಿಕಲ್ಪನೆಯನ್ನು ಕೇಂದ್ರ ಸರ್ಕಾರ ಮುಂದಿಟ್ಟ ದಿನದಿಂದಲೂ ಈ ಬಗ್ಗೆ ಚರ್ಚೆ ನಡೆಯುತ್ತಿದೆ. ಆಧಾರ್ ಮೂಲಕ ಸರ್ಕಾರ ಸಂಗ್ರಹಿಸಿರುವ ದತ್ತಾಂಶಗಳ ಸುರಕ್ಷತೆಯ ಬಗ್ಗೆ ಆತಂಕವನ್ನು ಜನರು ವ್ಯಕ್ತಪಡಿಸುತ್ತಲೇ ಇದ್ದಾರೆ. ಈ ವಿಚಾರ ನ್ಯಾಯಾಲಯದ ಮೆಟ್ಟಿಲು ಕೂಡ ಏರಿದೆ. ದತ್ತಾಂಶ ಸುರಕ್ಷಿತ, ಈ ಬಗ್ಗೆ ಆತಂಕ ಬೇಡ ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ ಹೇಳುತ್ತಲೇ ಬಂದಿದ್ದರೂ ಜನರಲ್ಲಿರುವ ಕಳವಳ ದೂರವಾಗಿಲ್ಲ. ಇದಕ್ಕೆ ಪೂರಕವೆಂಬಂತೆ ದತ್ತಾಂಶ ಸೋರಿಕೆಯ ಹಲವು ಪ್ರಕರಣಗಳೂ ವರದಿಯಾಗಿವೆ.

ಸಿನಿ ಬಿಟ್ಸ್



ವಿಜಯ್ ಕೃಷ್ಣ, ಪ್ರಿಯಾಂಕ ಕುಮಾರ್

'ದೂರ ತೀರ ಯಾನ' ಚಿತ್ರೀಕರಣ ಪೂರ್ಣ

'19.20.21' ಸಿನಿಮಾ ಬಳಿಕ ನಿರ್ದೇಶಕ ಮಂಸೋರೆ ಕೈಗೆತ್ತಿಕೊಂಡಿರುವ 'ದೂರ ತೀರ ಯಾನ' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ. ಡಿ. ಕ್ರಿಯೇಷನ್ಸ್‌ನ ದೇವರಾಜ್ ಆರ್. ನಿರ್ಮಾಣ ಮಾಡುತ್ತಿರುವ ಈ ಸಿನಿಮಾದಲ್ಲಿ ವಿಜಯ್ ಕೃಷ್ಣ ನಾಯಕರಾಗಿ ಹಾಗೂ ಪ್ರಿಯಾಂಕ ಕುಮಾರ್ ನಾಯಕಿಯಾಗಿ ನಟಿಸಿದ್ದಾರೆ.

ಬೆಂಗಳೂರು, ಉಡುಪಿ, ಕುಂದಾಪುರ, ಗೋಕರ್ಣ, ಮುರುಡೇಶ್ವರ, ಕಾರವಾರ, ಯಲ್ಲಾಪುರ, ದಾಂಡೇಲಿ, ಗೋವಾದಲ್ಲಿ 40 ದಿನ ಚಿತ್ರೀಕರಣ ನಡೆದಿದೆ. ಸಿನಿಮಾದಲ್ಲಿ ಇನ್ನೂ ಹಲವು ಪ್ರಮುಖ ನಟ-ನಟಿಯರು ವಿಶೇಷ ಪಾತ್ರದಲ್ಲಿ ನಟಿಸಿದ್ದು, ಅವರ ವಿವರಗಳನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದಿದ್ದಾರೆ ಮಂಸೋರೆ.

ಇದೊಂದು ಪ್ರೇಮಕಥೆಯಾಗಿದ್ದು, ಹರೆಯದ ಇಬ್ಬರು ಪ್ರೇಮಿಗಳು ಬೆಂಗಳೂರಿನಿಂದ ಗೋವಾಗೆ ಪಯಣ ಆರಂಭಿಸಿ, ಆ ಪ್ರಯಾಣದಲ್ಲಿ ತಮ್ಮ ಪ್ರೀತಿಯ ಅರ್ಥ ಹುಡುಕಿಕೊಳ್ಳುವುದು ಮೂಲಕಥೆಯಾಗಿದೆ ಎಂದಿದೆ ಚಿತ್ರತಂಡ. ಮಂಸೋರೆ ಬರೆದಿರುವ ಕಥೆಗೆ ಚೇತನಾ ತೀರ್ಥಹಳ್ಳಿ ಸಂಭಾಷಣೆ ಬರೆದಿದ್ದಾರೆ. ಸಿನಿಮಾದ ಶೀರ್ಷಿಕೆ ಗೀತೆಯನ್ನು ಅದ್ದೂರಿಯಾಗಿ ಚಿತ್ರೀಕರಿಸುವ ಮೂಲಕ ಸಿನಿಮಾದ ಚಿತ್ರೀಕರಣ ಪೂರ್ಣಗೊಳಿಸಿದೆ ಚಿತ್ರತಂಡ. ಚಿತ್ರೀಕರಣೋತ್ತರ ಕೆಲಸಗಳು ಭರದಿಂದ ಸಾಗಿದ್ದು, ಚಿತ್ರವು ಜುಲೈ ತಿಂಗಳಲ್ಲಿ ತೆರೆಗೆ ಬರಲಿದೆ.

'ಅಮರಾವತಿ..'ಯ ಟೀಸರ್

ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿರುವ 'ಅಮರಾವತಿ ಪೊಲೀಸ್ ಸ್ಟೇಷನ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಪುನೀತ್ ಅರಸೀಕೆರೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರ ಎರಡು ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ.

'ಕಡಲ ತೀರದ ಕಾಲ್ಪನಿಕ 'ಅಮರಾವತಿ' ಎಂಬ ಊರಲ್ಲಿ ನಡೆಯುವ ಮಿಸ್ಸಿಂಗ್, ಮರ್ಡರ್ ಕಥೆ ಹೊಂದಿರುವ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರ. ಇದ್ದಕ್ಕಿದ್ದ ಹಾಗೆ ಕಾಣೆಯಾಗುವ ಊರಿನ ಗೌಡ, ಆತನನ್ನು ಪತ್ತೆಹಚ್ಚಲು ಬಂದ ಪೊಲೀಸ್ ಕೂಡ ಕಾಣೆಯಾಗುತ್ತಾನೆ. ಇದೆಲ್ಲದರ ಹಿಂದೆ ಇರುವ ಮರ್ಮವೇನು?, ನಾಗಾ ಸಾಧುಗಳು ಏಕೆ ಬರುತ್ತಾರೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಚಿತ್ರದಲ್ಲಿದೆ. ಕ್ಲೈಮ್ಯಾಕ್ಸ್ ಹಾಗೂ ಹಾಡೊಂದರ ಚಿತ್ರೀಕರಣ ಬಾಕಿಯಿದ್ದು, ಗೋವಾ ಹಾಗೂ ಹಿಂದೂಪುರದಲ್ಲಿ ಚಿತ್ರೀಕರಿಸುವ ಆಲೋಚನೆಯಿದೆ' ಎಂದರು ನಿರ್ದೇಶಕರು.

ವೇದ್ವಿಕ ಚಿತ್ರದ ನಾಯಕಿ. ಪಿ. ಪಿ. ಪವರ್ ಪಿಕ್ಚರ್ಸ್ ಲಾಂಛನದಲ್ಲಿ ಕೆ.ಆರ್.ಪ್ರದೀಪ್ ಕಮಲಾಪುರ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಗುರುರಾಜ್ ಜಗ್ಗೇಶ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಟ ಭವ್ಯ, ಧರ್ಮ, ಸಾಧು ಕೋಕಿಲ, ಧರ್ಮಣ್ಣ ಕಡೂರು ಮುಂತಾದವರು ಚಿತ್ರದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ರೋಣದ ಬಕ್ಕೇಶ್ ಅವರ ಸಂಗೀತ ಸಂಯೋಜನೆಯಿದೆ. ಗೌತಮ್ ಮಟ್ಟಿ ಛಾಯಾಚಿತ್ರಗ್ರಹಣ, ವೆಂಕಿ ಯುವಿಡಿ ಅವರ ಸಂಕಲನ ಚಿತ್ರಕ್ಕಿದೆ.



ವೇದ್ವಿಕ, ಧರ್ಮ ಕೀರ್ತಿರಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಫೇಸ್‌ಬುಕ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಒಂದೆಡೆ ಸೇರಿರುವ ವಿಡಿಯೊ ಹರಿದಾಡುತ್ತಿದೆ. ಪ್ರಯಾಗರಾಜ್‌ನಲ್ಲಿ ಕಾಲ್ತುಳಿತದಂಥ ಸ್ಥಿತಿ ಮತ್ತೊಮ್ಮೆ ಏರ್ಪಟ್ಟಿದೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ. ಪ್ರಯಾಗರಾಜ್‌ನಲ್ಲಿ ಕಾಲ್ತುಳಿತದಂಥ ಸ್ಥಿತಿ ಮತ್ತೆ ಉದ್ಭವಿಸಿಲ್ಲ.



ಇನ್‌ವಿಡ್ ಟೂಲ್ ಮೂಲಕ ವಿಡಿಯೊ ಅನ್ನು ಪರೀಕ್ಷಿಸಿ, ಅದರ ಕೀಫ್ರೇಮ್‌ಗಳನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ ಹಲವರು ಇದೇ ವಿಡಿಯೊ ಅನ್ನು ಹಂಚಿಕೊಂಡಿರುವುದು ಕಂಡುಬಂತು. ಈ ಬಗ್ಗೆ ಮತ್ತಷ್ಟು ಹುಡುಕಾಟ ಮುಂದುವರಿಸಿದಾಗ, ಇಂಥದ್ದೇ ವಿಡಿಯೊ ಜನವರಿ 11ರಂದು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಆಗಿರುವುದು ಕಂಡುಬಂತು. ಪಾಕಿಸ್ತಾನದ ಖೈಬರ್ ಫಖ್ತುಂಖ್ವಾ ಜಿಲ್ಲೆಯಲ್ಲಿ ನಡೆದ ಅಪಘಾತದ ದೃಶ್ಯ ಎಂದು ವಿಡಿಯೊ ಬಗ್ಗೆ ಉಲ್ಲೇಖಿಸಲಾಗಿತ್ತು. ಈ ಸಂಬಂಧ ಹಲವು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದ ವರದಿಗಳೂ ಸಿಕ್ಕವು. ಪಾಕಿಸ್ತಾನದಲ್ಲಿ ನಡೆದ ಅಪಘಾತದ ದೃಶ್ಯವನ್ನು ಕುಂಭಮೇಳದ ವಿಡಿಯೊ ಎಂದು ಹಂಚಿಕೊಂಡು, ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 21, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ-ಕೃಷ್ಣ ಅಷ್ಟಮಿ ಗಂ. 11-58 ನಕ್ಷತ್ರ: ಅನುರಾಧ ಗಂ. 15-54 ಯೋಗ: ವ್ಯಾಘಾತ ಗಂ. 11-59 ಕರಣ: ಕೌಲವ ಗಂ. 11-58, ಕುಂಭ ಮಾಸದ 09 ನೇ ದಿನ, ಮಳೆನಕ್ಷತ್ರ: ಶತಭಿಷ 1.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-54 **ಸೂರ್ಯಾಸ್ತ:** 06-34
ಮುಸ್ಲಿಂ ದಿನಾಂಕ: 22 ಶಬನ್
ಅದೃಷ್ಟ ಸಂಖ್ಯೆ: 3, 5

ಮೇಷ: ಕಲಿಯಬೇಕಾದ ವಿಷಯಗಳ ಬಗ್ಗೆ ಎಷ್ಟು ಕಲಿತರೂ ಕರಗತ ಆಗದಿರುವುದು ಚಿಂತೆಯ ವಿಚಾರವಾಗುವುದು. ಮನೆಯ ಕೆಲಸಗಳನ್ನು ಆದಷ್ಟು ಬೇಗ ಮುಗಿಸಿಕೊಂಡು ಹವ್ಯಾಸದ ಮೇಲೆ ಗಮನ ಹರಿಸುವಿರಿ.

ವೃಷಭ: ಮರೆವು ಬಹಳವಾಗಿ ಬಾಧಿಸುವ ಸಾಧ್ಯತೆ ಇದೆ. ಸಂಬಂಧಪಡದ ವಿಚಾರಗಳಿಗೆ ತಲೆಕೆಡಿಸಿಕೊಳ್ಳಬೇಡಿ. ಆರೋಗ್ಯದ ವಿಚಾರದಲ್ಲಿ ಹೆಚ್ಚಿನ ಗಮನ ಹರಿಸಿ.

ಮಿಥುನ: ಹಿರಿಯರೊಂದಿಗೆ ವ್ಯವಹರಿಸುವಾಗ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿ. ಹಿಂದಿನ ಕೆಲಸದಲ್ಲಿನ ಕೊರತೆಗಳನ್ನು ಸರಿಪಡಿಸಿಕೊಳ್ಳುವಿರಿ. ಖುಷಿ ಕಾಣುವಿರಿ.

ಕರ್ಕಾಟಕ: ಮಾತು ಮತ್ತು ಕೃತಿ ಸಮಾನಾಗಿರಲಿ. ಕೆಲವು ಸಂದರ್ಭಗಳಲ್ಲಿ ಮಾತು ಸತ್ಯವಾಗಿದ್ದರೂ ಸಾಬೀತು ಮಾಡಲಾಗುವುದಿಲ್ಲ. ಕೃಷಿಕರಿಗೆ ಹಳೆಯ ವಸ್ತುಗಳನ್ನು ಲಾಭದಲ್ಲಿ ಮಾರಲು ಸುದಿನ.

ಸಿಂಹ: ಪೂರ್ವಜನ್ಮದ ಪುಣ್ಯದ ಫಲವೆಂಬಂತೆ ಹಳೆಯ ಅಭೀಷ್ಟವು ನೆರವೇರಲಿದೆ. ಭಾಗವತ, ಭಗವಚ್ಚಿಂತನೆಗಳಲ್ಲಿ ಆಸಕ್ತಿ ಹೆಚ್ಚಲಿದೆ. ಮಗಳ ಮದುವೆಯ ವಿಚಾರ ಗಂಭೀರ ಚರ್ಚೆಯನ್ನು ಮಾಡುವಿರಿ.

ಕನ್ಯಾ: ಕೀಳುಭಾವನೆಯನ್ನು ಹೊಂದಿದವರ ಎದುರು ಮಾಡುವ ಸಾಧನೆಯು ಹೆಚ್ಚಿನ ಸಂತಸವನ್ನು ನೀಡುವುದು. ಹಾಲು ಹಾಗೂ ಅದರ ಉತ್ಪನ್ನಗಳನ್ನು ಆಹಾರದಲ್ಲಿ ಹೆಚ್ಚು ಉಪಯೋಗಿಸುವುದು ಸೂಕ್ತ.

ತುಲಾ: ಶಿಕ್ಷಕ ವೃತ್ತಿಯವರಿಗೆ ಕಾರ್ಯಭಾರ ಹೆಚ್ಚಾಗಿ ದೇಹಾಯಸ ಉಂಟಾಗುವುದು. ಯಾವುದೇ ಕೆಲಸವನ್ನು ಗಡಿಬಿಡಿ ಮಾಡಿಕೊಳ್ಳದೇ ಕ್ರಮವಾಗಿ ಮಾಡಿ ಮುಗಿಸಿ. ಸೊಪ್ಪು ತರಕಾರಿಗಳ ಬೆಳೆಗಾರರಿಗೆ ಲಾಭ.

ವೃಶ್ಚಿಕ: ಹೆಂಡತಿಯ ಮೇಲೆ ಅನ್ಯಥಾ ತಪ್ಪು ಭಾವನೆ ಇಟ್ಟುಕೊಂಡು ಆಕೆಯಿಂದ ತಿರಸ್ಕಾರಕ್ಕೆ ಒಳಗಾಗುವ ಸಾಧ್ಯತೆ ಇದೆ. ಕೋರ್ಟು ಕಚೇರಿಯ ಅಲೆದಾಟ ಹೆಚ್ಚಾಗಿ ಇರಲಿದೆ. ವೃದ್ಧರಿಗೆ ವಾತಾವರಣದ ಬದಲಾವಣೆ ಬವಣೆಯಾಗಲಿದೆ.

ಧನು: ಉತ್ತಮ ಆಹಾರ ಸೇವನೆಯಿಂದ ಸ್ವಾಸ್ಥವನ್ನು ಸಂಪಾದಿಸಬಹುದು. ಸಾತ್ವಿಕ ಹಾಗೂ ಉತ್ತಮ ನಡತೆಯಿಂದ ಜನಪ್ರಿಯತೆ ಹೊಂದುವಿರಿ. ಪ್ರಯತ್ನಬಲದಿಂದ ಹಣದ ಹರಿವು ಸುಗಮವಾಗಲಿದೆ.

ಮಕರ: ಉದ್ದಿಮೆಗಾಗಿ ಬಂಡವಾಳ ಹೂಡಲು ಪ್ರಯಾಣ ಬೆಳೆಸುವಿರಿ. ಲಾಭದಾಯಕವೆನಿಸಲಿದೆ. ವೃತ್ತಿ ಹಾಗೂ ವೈಯಕ್ತಿಕ ಜೀವನಗಳು ಎರಡೂ ಸಹ ತೃಪ್ತಿಕರ ಎನಿಸಲಿವೆ.

ಕುಂಭ: ಮಿತ್ರವರ್ಗದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳು ಒದಗಿ ಬರಲಿವೆ. ದೀರ್ಘಕಾಲದಲ್ಲಿ ಲಾಭ ತಂದುಕೊಡಲಿದೆ. ವಿದ್ಯಾರ್ಥಿಗಳು ಓದಿನಲ್ಲಿ ಗಮನಹರಿಸಿ.

ಮೀನ: ಕುಟುಂಬ ನಿರ್ವಹಣೆಯಲ್ಲಿ ಅಸಹಾಯಕತೆ ಮನೆಯ ಸದಸ್ಯರಿಗೆ ತೊಂದರೆ ಉಂಟುಮಾಡಿದರೂ ನಂತರು ನಿಮ್ಮ ಮೇಲೆ ಹೊಂದಿದ್ದ ಅಪನಂಬಿಕೆಗಳು ದೂರಾಗಲಿವೆ.

ಕಳೆ ತಗೀಬೇಕು, ಬೆಳೆ ಉಳೀಬೇಕು



ನುಡಿ ಬೆಳಗು — ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 137

ಸ್ವಾರ್ಥ ಬಹಳ ಕೆಟ್ಟದ್ದು. ಅದು ನಮ್ಮ ಕರುಣೆಯನ್ನೇ ಕಸಿದುಕೊಂಡು ಹೋಗತ್ತೈತಿ. ಮನುಷ್ಯ ನಿಸ್ವಾರ್ಥಿಯಾಗೋದನ್ನು ಕಲಿಯಬೇಕು. ಸಣ್ಣ ಸಣ್ಣದಕ್ಕೂ ನಾವು ಆಸೆ ಪಡ್ತೀವಿ. ಇದನ್ನು ಬಿಡಬೇಕು. ಪ್ರೇಮದಿಂದ ಬದುಕಬೇಕು.

ರಾಜಸ್ಥಾನದಲ್ಲಿ ಶ್ಯಾಮಸುಂದರ ಪಾಲೀವಾಲ ಅಂತ ಒಬ್ಬ ಸರಪಂಚ ಇದ್ದ. ಅವನಿಗಿದ್ದ ಒಬ್ಬ ಮಗಳು ತೀರಿಕೊಂಡಳು. ಅವನ ಹೆಂಡತಿ ಹೆಸರು ಅನಿತ. ತೀರಿಕೊಂಡ ಮಗಳ ಹೆಸರಿನಲ್ಲಿ ಒಂದು ಗಿಡ ಹಚ್ಚಿದ. ಅಷ್ಟಕ್ಕೇ ಬಿಡಲಿಲ್ಲ. ಒಂದು ಸಂಕಲ್ಪವನ್ನೂ ಮಾಡಿದ. ತನ್ನ ಊರಲ್ಲಿ ಯಾರ ಮನೆಯಲ್ಲಿಯೇ ಹೆಣ್ಣು ಮಗು ಹುಟ್ಟಿದರೂ ನೂರಾ ಹನ್ನೊಂದು ಗಿಡ ಹಚ್ಚಬೇಕು ಎಂದು ನಿರ್ಧರಿಸಿದ. ಇವತ್ತು ಸುಮಾರು ನಾಲ್ಕು ಲಕ್ಷ ಗಿಡ ಬೆಳೆದಾವು. ಅವರಿಗೆ ಪದ್ಮಶ್ರೀ ಪ್ರಶಸ್ತಿ ಬಂತು. ನಮ್ಮಲ್ಲಿ ರಕ್ಷಾಬಂಧನದ ದಿನ ರಾಖಿ ಕಟ್ತಾರೆ. ಆದರೆ ಆ ಊರಲ್ಲಿ ರಕ್ಷಾ ಬಂಧನ ಇಲ್ಲ. ವೃಕ್ಷಾ ಬಂಧನ ಮಾಡ್ತಾರ. ವೃಕ್ಷಕ್ಕೆ ರಾಖಿ ಕಟ್ತಾರ. ನಾವು ದೇವರನ್ನು ಒಲಿಸಿಕೊಳ್ಳಲು ಲಕ್ಷ ದೀಪೋತ್ಸವ ಮಾಡ್ತೀವಿ. ಆದರೆ ದೇವರು ಒಲಿಯಬೇಕಾದರೆ ಲಕ್ಷ ದೀಪೋತ್ಸವ ಮಾಡಿ ಪ್ರಯೋಜನ ಇಲ್ಲ. ವೃಕ್ಷ ದೀಪೋತ್ಸವ ಮಾಡಬೇಕು. ಆಗ ದೇವರು ಒಲಿತಾನ. ನಿಸರ್ಗವನ್ನು ಪೂಜೆ ಮಾಡೋದನ್ನು ಕಲಿಯಬೇಕು. ವೃಕ್ಷ ದೀಪಗಳು ಬೇಕು.

ಇನ್ನೊಬ್ಬರು ನಮ್ಮ ಬಳಿಗೆ ಬರಲಿ ಅಂತ ನಾವು ಬಯಸುತ್ತೀವಿ. ಇನ್ನೊಬ್ಬರ ಪ್ರೇಮವನ್ನು ನಿರೀಕ್ಷಿಸುತ್ತೀವಿ. ಆದರೆ ಒಂದು ತಿಳಕೋಬೇಕು ಮನುಷ್ಯ; ನಮ್ಮ ಹೃದಯ ಇರುವುದೇ ಇನ್ನೊಬ್ಬರನ್ನು ಪ್ರೇಮ ಮಾಡಲು ಎಂದು. ನಿಮ್ಮ ಹೃದಯದಲ್ಲಿ ತುಂಬಿದ ಪ್ರೇಮವನ್ನು ಇನ್ನೊಬ್ಬರಿಗೆ ಹಂಚಿದರೆ ಅದು ಖಾಲಿಯಾಗೋದಿಲ್ಲ. ಅಷ್ಟು ಪ್ರೇಮವನ್ನು ನಮ್ಮ ಹೃದಯದಲ್ಲಿ ದೇವರು ತುಂಬಿಟ್ಟಿದ್ದಾನ. ನಮ್ಮತ್ರ ಏನು ಐತಿ ಅದನ್ನು ದಾನ ಮಾಡಬೇಕು. ನೇತ್ರದಾನ, ಅಂಗಾಂಗ ದಾನ, ರಕ್ತದಾನ, ಶ್ರಮದಾನ ಮಾಡಬೇಕು. ದೇಶಕ್ಕಾಗಿ ಮತದಾನ ಮಾಡಬೇಕು. ಇಷ್ಟೆಲ್ಲಾ ದಾನ ಯಾಕ ಮಾಡಬೇಕು ಅಂದ್ರ ಸಮಾಧಾನಕ್ಕಾಗಿ ಸಮಾಧಾನವೇ ಯೋಗ. ದೇವನೇ ಸಣ್ಣ ಸಣ್ಣ ವಿಷಯಗಳಿಗೆ ನನ್ನ ಮನಸ್ಸು ಸೋಲತ್ತೈತಿ. ಸೋಲದಂತೆ ಶಕ್ತಿ ಕೊಡು ಅಂತ ಬೇಡಿಕೋಬೇಕು.


ನಮ್ಮ ದೀಪಾವಳಿ ಹ್ಯಾಗೆ ಐತಿ ನೋಡಿ. ಬೆಳಿಗ್ಗೆ ಗೂಟಕ್ಕೆ ಮಾವಿನ ಎಲೆ, ಮಧ್ಯಾಹ್ನ ಊಟಕ್ಕೆ ಬಾಳೆ ಎಲೆ, ರಾತ್ರಿ ಆಟಕ್ಕೆ ಇಸ್ಪೀಟ್ ಎಲೆ! ಲಕ್ಷ್ಮಿ ಮುಂದೆ ನಮ್ಮದು ಆಟ. ಅದಕ್ಕೆ ಲಕ್ಷ್ಮಿ ಅಂತಾಳ, 'ಇವತ್ತು ಒಂದು ದಿನ ಆಟ ಆಡು ಪರವಾಗಿಲ್ಲ. ಆದರೆ ದಿನಾ ಆಡಿದರೆ ದೀಪಾವಳಿ ಹೋಗಿ ದಿವಾಳಿ ಆಗತ್ತೈತಿ' ಅಂತ. ಆಡೋದನ್ನು ಬಿಟ್ಟುಬಿಟ್ಟರೆ ಪ್ರತಿ ದಿನ ದೀಪಾವಳಿ ಆಗತ್ತೈತಿ ಎಂದೂ ಅವಳು ಹೇಳುತ್ತಾಳೆ. ಲಕ್ಷ್ಮಿ ಮುಂದೆ ದೀಪ ಹಚ್ಚಬೇಕು ಅಂತಾರ. ಆದರೆ ಒಂದು ತಿಳಕೋಬೇಕು ಇಸ್ಪೀಟ್ ಆಟದಂತಹ ದುರಭ್ಯಾಸಗಳನ್ನು ಬಿಟ್ಟು ಬಿಟ್ಟರೆ ದೀಪ ಹಚ್ಚೋದು ಬೇಡ. ಲಕ್ಷ್ಮಿ ನಮ್ಮ ಮನೆಯ ಜಗಲಿಯಲ್ಲಿಯೇ ಇರ್ತಾಳೆ. ನಮ್ಮ ಮನಸ್ಸು ಕೂಡ ರೈತನ ಭೂಮಿಯಂತೆ. ರೈತ ಬೀಜವನ್ನೇ ಬಿತ್ತಿದರೂ ಬೆಳೆಯ ಜೊತೆಗೆ ಕಳೆಯೂ ಬರತ್ತೈತಿ. ಜಾಣ ರೈತ ಕಳೆಯನ್ನು ತೆಗೆದು ಬೆಳೆಯನ್ನು ಮಾತ್ರ ಉಳಿಸಿಕೊಳ್ತಾನ. ಹಾಗೆಯೇ ನಮ್ಮ ಮನಸ್ಸಿನಲ್ಲಿ ಇರುವ ಕೆಟ್ಟ ಕಳೆಯನ್ನು ತೆಗೆದು ಒಳ್ಳೆಯದನ್ನು ಮಾತ್ರ ಉಳಿಸಿಕೊಂಡರೆ ಬದುಕು ಹಸನಾಗತ್ತೈತಿ.

ಪದಬಂಧ 5960

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮಂಕ ಹೊತ್ತಿರುವ ಬುಟ್ಟಿ (3)
4. ಮನದೊಳಗೆ ಮೂಡಿರುವ ಕಾಮ! (3)
6. ಅರಸನಿರುವ ಮನೆ (4)
7. ಸಹೋದರರು ಹಚ್ಚಿದ ದೀಪ! (3).
8. ದಮಯಂತಿ ಪತಿಯಿಲ್ಲಿ ತಿರುಗಿಹನಲ್ಲಾ? (2)
9. ನಾಗರಿಕರ ಹತ್ತಿರವಿರುವ ಸ್ತ್ರೀ (2)
12. ಪದೇ ಪದೇ ಹಾಕಿರುವ ತೆರೆ! (3)
14. ನಾಲ್ಕು ಆಶ್ರಮಗಳಲ್ಲಿ ಮೂರನೆಯದು (4)
15. ಸನ್ಯಾಶ್ರಮವನ್ನು ಸ್ವೀಕರಿಸಿದವನು (3)
16. ಜನರ ಬಳಿಯಿರುವ ತಾಯಿ (3)

ಮೇಲಿಂದ ಕೆಳಕ್ಕೆ
2. ಕರ್ನಾಟಕದ ಹೆಮ್ಮೆಯ ಭಾಷೆ (3)
3. ಬಾಣಗಳ ಸುರಿಮಳೆ (4)
4. ಮನದೊಳಗಿರುವ ವಂಶ! (4)
5. ನಗಿಸುವುದೇ ಕಾಯಕ ಮಾಡಿಕೊಂಡಿದ್ದ ಶರಣ (7)
7. ಸೊಡ್ಡಳ ವಚನಾಂಕಿತವುಳ್ಳ ಶರಣ (7)
10. ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಎಂದು ಪಂಪ ಹೇಳಿರುವ ಊರು (4)
11. ಪ್ರತಿದಿನ ಎಂದು ಹೀಗೆ ಹೇಳಿ (4)
13. ರಸ ಒಸರುವ ಜಿಹ್ವೆ (3)



5959ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಿಮಾನ 3.ವಿದಾಯ
4.ಗಹನ 6.ಕಾಟಾಚಾರ
8.ಯಥೋಚಿತ 10.ಸುಸ್ವರ
12.ಕಂಕಣ 13.ಅಂತರಂಗ
15.ಹರಿಗೋಲು 16.ಲಾವಣಿ
17.ತೊಗಟೆ 18.ಗೆಳೆತನ

ಮೇಲಿಂದ ಕೆಳಕ್ಕೆ:
2.ನಗರ 3.ವಿನಯ
5.ದೂತ 7.ಚಾಕರ
9.ಚಿಲುಕ 11.ಸ್ವಗತ
12.ಕಂಜರಿ 13.ಅಂಬು
14.ಗಲಾಟೆ 15.ಹಣಿಗೆ

ಸುಡೊಕು 6345

9		7						
	6		4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8				
6		4		9		1		3


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6344 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,932
ಇಂದಿನ ಅಂತ್ಯ	22,913
▼	19
ದಿನದ ಕನಿಷ್ಠ	22,812

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹480
12 ಕ್ಕೆ	₹66
ಮೈಸೂರು	
100ಕ್ಕೆ	₹480

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹513-680
ದ್ವಿತಳಿ (ಬಿ.ವಿ)	₹270-828

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1440 (1440)
ಸೋಯಾ (ರಿಫೈನ್ಡ್)	₹1340 (1330)
ಸೂರ್ಯಕಾಂತಿ (ರಿಫೈನ್ಡ್)	₹1440 (1440)
ಪಾಮೋಲಿನ್	₹1375 (1370)

ವಿನಿಮಯ ದರ

$ ಡಾಲರ್	86.64
£ ಪೌಂಡ್	109.30
€ ಯುರೊ	90.44
¥ ಯೆನ್ (100ಕ್ಕೆ)	58

ಪಿಎನ್‌ಬಿ: ಶೇ 0.25ರಷ್ಟು ಬಡ್ಡಿದರ ಕಡಿತ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್, ಸಾಲಗಳ ಮೇಲಿನ ಬಡ್ಡಿದರವನ್ನು ಶೇ 0.25ರಷ್ಟು ಕಡಿತಗೊಳಿಸಿದೆ. ಕಳೆದ ವಾರದಿಂದಲೇ ಈ ಪರಿಷ್ಕೃತ ಆದೇಶ ಜಾರಿಗೆ ಬಂದಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಇತ್ತೀಚೆಗೆ ರೆಪೊ ದರದಲ್ಲಿ ಇಳಿಕೆ ಮಾಡಿದೆ. ಇದಕ್ಕೆ ಅನುಗುಣವಾಗಿ ಬಡ್ಡಿದರ ಕಡಿತಗೊಳಿಸಲಾಗಿದೆ. ಗೃಹ, ಕಾರು, ಶಿಕ್ಷಣ ಹಾಗೂ ವೈಯಕ್ತಿಕ ಸಾಲಗಳಿಗೆ ಈ ಪರಿಷ್ಕೃತ ದರ ಅನ್ವಯವಾಗಲಿದೆ. ಗ್ರಾಹಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಗೃಹ ಸಾಲದ ಸಂಸ್ಕರಣೆ ಶುಲ್ಕ ಮತ್ತು ದಾಖಲೆಗಳ ಪರಿಶೀಲನಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ಮಾರ್ಚ್ 31ರ ವರೆಗೆ ಈ ಸೌಲಭ್ಯ ದೊರೆಯಲಿದೆ. ಗ್ರಾಹಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕೋರಿದೆ.

ಪ್ರಸ್ತುತ ಗೃಹ ಸಾಲದ ಬಡ್ಡಿದರವನ್ನು ವಾರ್ಷಿಕವಾಗಿ ಶೇ 8.15ರಷ್ಟಕ್ಕೆ ಪರಿಷ್ಕರಿಸಲಾಗಿದೆ. ಪ್ರತಿ ₹1 ಲಕ್ಷಕ್ಕೆ ಇಎಂಐ ₹744 ಆಗಲಿದೆ. ಹೊಸ ಮತ್ತು ಹಳೆಯ ಕಾರು ಖರೀದಿಗೆ ಶೇ 8.50ರ ಬಡ್ಡಿದರದಲ್ಲಿ ಸಾಲ ಸೌಲಭ್ಯ ನೀಡಲಾಗುತ್ತದೆ. ಪ್ರತಿ ₹1 ಲಕ್ಷಕ್ಕೆ ಇಎಂಐ ₹1,240 ಆಗಲಿದೆ ಎಂದು ವಿವರಿಸಿದೆ.

ಶಿಕ್ಷಣ ಸಾಲಕ್ಕೆ ವಾರ್ಷಿಕ ಶೇ 7.85ರಷ್ಟು ಬಡ್ಡಿದರ ನಿಗದಿಪಡಿಸಲಾಗಿದೆ. ವೈಯಕ್ತಿಕ ಸಾಲ ಪಡೆಯಲು ಗ್ರಾಹಕರು ಬ್ಯಾಂಕ್‌ಗೆ ಭೇಟಿ ನೀಡುವ ಅಗತ್ಯವಿಲ್ಲ. ಡಿಜಿಟಲ್ ಪ್ರಕ್ರಿಯೆ ಮೂಲಕವೇ ₹20 ಲಕ್ಷದವರೆಗೆ ಸಾಲ ಮಂಜೂರು ಮಾಡಲಾಗುತ್ತದೆ. ಇದಕ್ಕೆ ವಾರ್ಷಿಕವಾಗಿ ಪರಿಷ್ಕೃತ ಬಡ್ಡಿದರವು ಶೇ 11.25ರಷ್ಟಿದೆ ಎಂದು ತಿಳಿಸಿದೆ.

ಸೋಯಾ ಎಣ್ಣೆಯತ್ತ ಸಂಸ್ಕರಣಾಗಾರರ ಚಿತ್ತ

ತಾಳೆ ಎಣ್ಣೆ ದರ ಏರಿಕೆ

ಮುಂಬೈ (ರಾಯಿಟರ್ಸ್): ಮಲೇಷ್ಯಾದಲ್ಲಿ ಕಳೆದ ನಾಲ್ಕು ವಾರಗಳಲ್ಲಿ ತಾಳೆ ಎಣ್ಣೆ ಬೆಲೆಯು ಶೇ 11ರಷ್ಟು ಏರಿಕೆಯಾಗಿದೆ. ಹಾಗಾಗಿ, ಭಾರತಕ್ಕೆ ಆಮದು ಮಾಡಿಕೊಳ್ಳಲು ಪೂರ್ವ ನಿಗದಿಯಾಗಿದ್ದ 70 ಸಾವಿರ ಟನ್‌ನಷ್ಟು ಕಚ್ಚಾ ತಾಳೆ ಎಣ್ಣೆಯ ಖರೀದಿ ಒಪ್ಪಂದವನ್ನು ಇಲ್ಲಿನ ಸಂಸ್ಕರಣಾಗಾರರು ರದ್ದುಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೇಶದಲ್ಲಿ ಬೀದಿಬದಿ ವ್ಯಾಪಾರಿಗಳು ಸೇರಿದಂತೆ ಅಡುಗೆ ಮನೆಯಲ್ಲಿ ಖಾದ್ಯಗಳ ತಯಾರಿಕೆಗೆ ತಾಳೆ ಎಣ್ಣೆಯನ್ನು ಬಳಸಲಾಗುತ್ತದೆ.

ಭಾರತವು ಅತಿಹೆಚ್ಚು ಪ್ರಮಾಣದಲ್ಲಿ ತಾಳೆ ಎಣ್ಣೆ ಆಮದು ಮಾಡಿಕೊಳ್ಳುವ ದೇಶವಾಗಿದೆ. ಬೆಲೆ ಏರಿಕೆಯಿಂದಾಗಿ ಗುರುವಾರದಂದು ಪೂರೈಕೆಯಾಗ ಬೇಕಿದ್ದ ಎಣ್ಣೆಯ ಖರೀದಿ ಒಪ್ಪಂದವನ್ನು ರದ್ದುಪಡಿಸಲಾಗಿದೆ ಎಂದು ಹೇಳಿವೆ.

'ಖರೀದಿದಾರರು ಮತ್ತು ಮಾರಾಟಗಾರರು ಪರಸ್ಪರ ಸಮ್ಮತಿಯ ಮೇರೆಗೆ ರದ್ದುಪಡಿಸಿದ್ದಾರೆ' ಎಂದು ಹೇಳಿವೆ.

ತಾಳೆ ಎಣ್ಣೆ ಬೆಲೆ ಏರಿಕೆಯಾಗಿರುವುದರಿಂದ ಸಂಸ್ಕರಣಾಗಾರರ ಚಿತ್ತವು ಕಡಿಮೆ ದರದಲ್ಲಿ ಲಭಿಸುವ ಸೋಯಾ ಎಣ್ಣೆಯತ್ತ ಹೊರಳಬಹುದು ಎಂದು ಹೇಳಿವೆ.

'ಕಚ್ಚಾ ಎಣ್ಣೆಯನ್ನು ಸಂಸ್ಕರಿಸಿ ಪೂರೈಕೆದಾರರಿಗೆ ನೀಡುವ ಪ್ರಕ್ರಿಯೆಯಲ್ಲಿ ಸಾಕಷ್ಟು ವೆಚ್ಚವಾಗಲಿದೆ. ಇದರಿಂದ ನಮಗೆ ಲಾಭ ದಕ್ಕುವುದಿಲ್ಲ. ಹಾಗಾಗಿ, ಮಾರ್ಚ್ ತಿಂಗಳಿಗೆ ನಿಗದಿಯಾಗಿದ್ದ ಎಣ್ಣೆ ತರಿಸಿಕೊಳ್ಳುವುದನ್ನು ರದ್ದುಪಡಿಸಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲ್ಲಿನ ಪ್ರಮುಖ ಖರೀದಿದಾರರೊಬ್ಬರು ಹೇಳಿದ್ದಾರೆ.

ತಾಳೆ ಎಣ್ಣೆಯ ತ್ವರಿತ ಸಾಗಣೆಗೆ ಅವಕಾಶ ಇರುವುದರಿಂದ ಖರೀದಿದಾರರು ಇದನ್ನು ಆಮದು ಮಾಡಿಕೊಳ್ಳಲು ಹೆಚ್ಚು ಒತ್ತು ನೀಡುತ್ತಾರೆ. ಆದರೆ, ಬೆಲೆ ಏರಿಕೆಯಾಗಿರುವುದೇ ಅವರು ಹಿಂದಡಿ ಇಡಲು ಕಾರಣವಾಗಿದೆ ಎಂದು ಮೂಲಗಳು ಹೇಳಿವೆ.

'ತಾಳೆ ಎಣ್ಣೆಗೆ ಹೋಲಿಸಿದರೆ ಫೆಬ್ರುವರಿ ಮತ್ತು ಮಾರ್ಚ್‌ಗೆ ಆಮದು ಮಾಡಿಕೊಳ್ಳಬೇಕಿರುವ ಸೋಯಾ ಎಣ್ಣೆ ಬೆಲೆಯು ಕಡಿಮೆಯಿದೆ. ಹಾಗಾಗಿ, ಕೆಲವು ಸಂಸ್ಕರಣಾಗಾರರು ಸೋಯಾದತ್ತ ಹೊರಳಿದ್ದಾರೆ' ಎಂದು ಸಸ್ಯಜನ್ಯ ತೈಲ ಮಾರಾಟದ ಕಮಿಷನ್ ಸಂಸ್ಥೆಯಾದ ಸನ್‌ವಿನ್ ಸಮೂಹದ ಮುಖ್ಯ ಕಾರ್ಯ ನಿರ್ವಾಹಕ ಸಂದೀಪ್ ಬಜೋರಿಯಾ ಹೇಳಿದ್ದಾರೆ.

ಕಳೆದ ತಿಂಗಳು ಪ್ರತಿ ಟನ್ ಕಚ್ಚಾ ತಾಳೆ ಎಣ್ಣೆ ದರವು ₹97 ಸಾವಿರ ಇತ್ತು. ಮಾರ್ಚ್ ತಿಂಗಳಿಗೆ ಪೂರೈಕೆಯಾಗುವ ಎಣ್ಣೆಯ ದರವು ₹1.04 ಲಕ್ಷಕ್ಕೆ ಮುಟ್ಟಿದೆ.

ಸುಂಕ ಹೆಚ್ಚಳಕ್ಕೆ ಕೇಂದ್ರ ನಿರ್ಧಾರ?



ಕೇಂದ್ರ ಸರ್ಕಾರವು ಸ್ಥಳೀಯ ಬೆಳೆಗಾರರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ತಾಳೆ ಎಣ್ಣೆ ಆಮದು ಸುಂಕ ಏರಿಕೆ ಮಾಡುವ ಸಾಧ್ಯತೆಯಿದೆ. ಹಾಗಾಗಿ, ದಾಸ್ತಾನಿಟ್ಟಿರುವ ಎಣ್ಣೆಯನ್ನು ಮಾರಾಟ ಮಾಡಿ ಲಾಭ ಮಾಡಿಕೊಳ್ಳಲು ಸಂಸ್ಕರಣಾಗಾರರು ಮುಂದಾಗಿದ್ದಾರೆ. ಹಾಗಾಗಿ, ಖರೀದಿ ಒಪ್ಪಂದವನ್ನು ರದ್ದುಪಡಿಸಿದ್ದಾರೆ ಎಂದು ದೆಹಲಿ ಮೂಲದ ಡೀಲರ್‌ವೊಬ್ಬರು ಹೇಳಿದ್ದಾರೆ.

ಭಾರತವು ಪ್ರಮುಖವಾಗಿ ಮಲೇಷ್ಯಾ ಮತ್ತು ಇಂಡೊನೇಷ್ಯಾದಿಂದ ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಜನವರಿಯಲ್ಲಿ 2.75 ಟನ್‌ನಷ್ಟು ಆಮದು ಮಾಡಿಕೊಂಡಿದೆ. ಇದು 14 ವರ್ಷಗಳ ಕನಿಷ್ಠ ಮಟ್ಟವಾಗಿದೆ. ಅರ್ಜೆಂಟೀನಾ ಮತ್ತು ಬ್ರೆಜಿಲ್‌ನಿಂದ ಸೋಯಾ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ.

ಸುದ್ದಿ 2 ನಿಮಿಷ

ಜಿಗಿತ ಕಂಡ ರೂಪಾಯಿ



ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಗುರುವಾರ ಅಮೆರಿಕದ ಡಾಲರ್ ಮೌಲ್ಯ ಕುಸಿತ ಕಂಡಿದ್ದರಿಂದ, ರೂಪಾಯಿ ಚೇತರಿಕೆ ಕಂಡಿದೆ.

ರೂಪಾಯಿ ಮೌಲ್ಯವು 34 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹86.64 ಆಗಿದೆ. ವಹಿವಾಟಿನ ಆರಂಭದಲ್ಲಿ ₹86.88 ಇದ್ದ ರೂಪಾಯಿ ಮೌಲ್ಯವು ಒಂದು ಸಂದರ್ಭದಲ್ಲಿ ₹86.58ಕ್ಕೆ ತಲುಪಿತ್ತು. ಬಳಿಕ ಏರಿಕೆ ಕಂಡಿತು.

'ಕಳೆದ ಐದು ವಹಿವಾಟುಗಳಲ್ಲಿ ಇಳಿಕೆ ಕಂಡಿದ್ದ ರೂಪಾಯಿ ಮೌಲ್ಯವು ಏರಿಕೆಯಾಗಿದೆ. ವಿದೇಶಿ ಬ್ಯಾಂಕ್‌ಗಳು ಡಾಲರ್ ಮಾರಾಟಕ್ಕೆ ಮುಂದಾಗಿವೆ. ಇದರಿಂದ ಡಾಲರ್ ಮೌಲ್ಯ ಇಳಿದಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಂಶೋಧನಾ ವಿಶ್ಲೇಷಕ ದಿಲೀಪ್ ಪರ್ಮಾರ್ ಹೇಳಿದ್ದಾರೆ.

ಡಾಲರ್ ಎದುರು ಹಲವು ದೇಶಗಳ ಕರೆನ್ಸಿಗಳ ಮೌಲ್ಯ ಕುಸಿದಿರುವ ನಡುವೆಯೇ ರೂಪಾಯಿ ಸದೃಢವಾಗಿದೆ ಎಂದು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಶೇ 0.04ರಷ್ಟು ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 76.07 ಡಾಲರ್ ಆಗಿದೆ.

ಪ್ರಸಕ್ತ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ಭಾರತದ ಆರ್ಥಿಕತೆ ಬೆಳವಣಿಗೆಯು ಸದೃಢವಾಗಿದೆ. ಆದರೆ, ಜಾಗತಿಕ ಬಿಕ್ಕಟ್ಟು ಮತ್ತು ಅಮೆರಿಕದ ಸುಂಕ ನೀತಿಯಿಂದಾಗಿ ವ್ಯಾಪಾರ ವಹಿವಾಟಿನಲ್ಲಿ ಅನಿಶ್ಚಿತತೆ ಮುಂದುವರಿದಿದೆ. ಇದರಿಂದ ರೂಪಾಯಿ ಒತ್ತಡಕ್ಕೆ ಸಿಲುಕಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

3ನೇ ದಿನವೂ ಸೆನ್ಸೆಕ್ಸ್, ನಿಫ್ಟಿ ಇಳಿಕೆ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಗುರುವಾರವೂ ದೇಶದ ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿಯಿತು.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸುಂಕ ಹೇರಿಕೆಗೆ ಸಂಬಂಧಿಸಿದಂತೆ ನೀಡಿರುವ ಹೇಳಿಕೆಯು ದೇಶೀಯ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಲು ಕಾರಣವಾಯಿತು.

ಅಲ್ಲದೆ, ವಿದೇಶಿ ಷೇರುಪೇಟೆಗಳು ಕುಸಿದಿವೆ. ದೇಶೀಯ ಮಾರುಕಟ್ಟೆಯಿಂದ ವಿದೇಶಿ ಬಂಡವಾಳದ ಹೊರಹರಿವು ಮುಂದುವರಿದಿದೆ. ಇದರಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 203 ಅಂಶ ಇಳಿಕೆ ಕಂಡು 75,735 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 19 ಅಂಶ ಇಳಿಕೆ ಕಂಡು 22,913 ಅಂಶಗಳಲ್ಲಿ ಮುಕ್ತಾಯಗೊಂಡಿತು. ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಗಳು ಇಳಿಕೆ ಕಂಡಿವೆ.

ಸಂಕ್ಷಿಪ್ತ ಸುದ್ದಿ

ಭಾರತದಲ್ಲೇ ಐಫೋನ್ 16ಇ ಸರಣಿ ಜೋಡಣೆ



ನವದೆಹಲಿ (ಪಿಟಿಐ): ಭಾರತದಲ್ಲಿಯೇ 16ಇ ಸರಣಿಯ ಐಫೋನ್‌ಗಳ ಜೋಡಣೆ ಕಾರ್ಯ ನಡೆಯಲಿದೆ. ದೇಶೀಯವಾಗಿ ಮಾರಾಟ ಮಾಡುವುದು ಇದರ ಮೂಲ ಉದ್ದೇಶವಾಗಿದ್ದು, ವಿದೇಶಗಳಿಗೂ ರಫ್ತು ಮಾಡುವ ಗುರಿ ಹೊಂದಲಾಗಿದೆ ಎಂದು ಆ್ಯಪಲ್ ಕಂಪನಿ ಗುರುವಾರ ತಿಳಿಸಿದೆ

ಇದರ ಆರಂಭಿಕ ಬೆಲೆ ₹59,900 ಆಗಿದ್ದು, ಫೆಬ್ರುವರಿ 21ರಿಂದ ಮುಂಗಡ ಬುಕಿಂಗ್ ಆರಂಭವಾಗಲಿದೆ. ಫೆಬ್ರುವರಿ 28ರ ನಂತರ ಆ್ಯಪಲ್‌ನ ಮಳಿಗೆಗಳು ಮತ್ತು ಕಂಪನಿಯ ಅಧಿಕೃತ ಪಾಲುದಾರರ ಮಳಿಗೆಗಳಲ್ಲಿ ಗ್ರಾಹಕರಿಗೆ ದೊರೆಯಲಿದೆ ಎಂದು ತಿಳಿಸಿದೆ.

ಈ ಹೊಸ ಮಾದರಿಯ ಐಫೋನ್ ಎ18 ಚಿಪ್ ಹೊಂದಿದೆ. ಆ್ಯಪಲ್ ಇಂಟೆಲಿಜೆನ್ಸ್, 48 ಎಂಪಿ ಫ್ಯೂಷನ್ ಕ್ಯಾಮೆರಾ, 2 ಪಟ್ಟು ಹೆಚ್ಚು ಸಾಮರ್ಥ್ಯ ಹೊಂದಿರುವ ಟೆಲಿಫೋಟೊ ಲೆನ್ಸ್ ಹೊಂದಿದೆ ಎಂದು ತಿಳಿಸಿದೆ.

₹1 ಲಕ್ಷ ದಾಟಿದ ಕೆ.ಜಿ ಬೆಳ್ಳಿ ಧಾರಣೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹700 ಏರಿಕೆಯಾಗಿದ್ದು, ₹1,00,300ಕ್ಕೆ ಮಾರಾಟವಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹50 ಹೆಚ್ಚಳವಾಗಿ, ₹89,450 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹89,050 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅನಂತ ನಾಗೇಶ್ವರನ್ ಅಧಿಕಾರಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಅವರ ಅಧಿಕಾರಾವಧಿಯನ್ನು ಎರಡು ವರ್ಷದವರೆಗೆ ವಿಸ್ತರಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ನೇಮಕಾತಿ ಕುರಿತ ಸಂಪುಟ ಸಮಿತಿಯು (ಎಸಿಸಿ), ನಾಗೇಶ್ವರನ್ ಅವರ ಅಧಿಕಾರವನ್ನು 2027ರ ಮಾರ್ಚ್ 31ವರೆಗೆ ವಿಸ್ತರಿಸಲು ಅನುಮೋದನೆ ನೀಡಿದೆ ಎಂದು ಸರ್ಕಾರ ಗುರುವಾರ ತಿಳಿಸಿದೆ. 2022ರ ಜನವರಿ 28ರಂದು ಮೂರು ವರ್ಷದ ಅವಧಿಗೆ ಅವರು ಮುಖ್ಯ ಆರ್ಥಿಕ ಸಲಹೆಗಾರರಾಗಿ ಅಧಿಕಾರ ಸ್ವೀಕರಿಸಿದ್ದರು.

ಸುಬ್ರಹ್ಮಣ್ಯಂ ಅಧಿಕಾರಾವಧಿ ವಿಸ್ತರಣೆ: ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಹ್ಮಣ್ಯಂ ಅವರ ಅಧಿಕಾರಾವಧಿಯನ್ನು ಕೇಂದ್ರ ಸರ್ಕಾರ ಒಂದು ವರ್ಷ ವಿಸ್ತರಿಸಿದೆ. ಸುಬ್ರಹ್ಮಣ್ಯ ಅವರು 1987ರ ಬ್ಯಾಚ್‌ನ ನಿವೃತ್ತ ಐಎಎಸ್ ಅಧಿಕಾರಿ. 2023ರ ಫೆಬ್ರುವರಿಯಲ್ಲಿ ನೀತಿ ಆಯೋಗದ ಸಿಇಒ ಆಗಿ ಎರಡು ವರ್ಷಕ್ಕೆ ನೇಮಕ ಆಗಿದ್ದರು.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹28150
ಎಸಿ	₹16520
ಆರ್‌ಪಿ	₹24000
ಆರ್‌ಸಿ	₹13230

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಗುಡ್ ಲಾಟ್	₹177.50

(ಪ್ರತಿ ಕೆ.ಜಿಗೆ)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2800-3400
ಮಧ್ಯಮ	₹2000-2800
ಸಣ್ಣ	₹1500-2000

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ	
ಹೊಸತು	25000-37000
ಹಳತು	30000-49500
ಕುಮಟ	
ಚಾಲಿ	31036-36799
ಚಿಪ್ಪು	14209-26899
ಕೋಕ	4199-21699
ಹೊಸಚಾಲಿ	27600-34199
ಸಾಗರ	
ಬಿಳಿಗೋಟು	10921-20567
ಚಾಲಿ	24599-34121
ಕೋಕ	8399-20011
ಕೆಂಪುಗೋಟು	14199-23800
ರಾಶಿ	30899-51909
ಸಿಪ್ಪೆಗೋಟು	9800-16520
ಶಿವಮೊಗ್ಗ	
ಬೆಟ್ಟೆ	48009-56119
ಗೊರಬಲು	16029-28029
ರಾಶಿ	30099-52389
ಸರಕು	53000-92730
ಶಿರಸಿ	
ಬೆಟ್ಟೆ	28499-41181
ಬಿಳಿಗೋಟು	15799-27999
ಚಾಲಿ	31099-35913
ಕೆಂಪುಗೋಟು	17999-23621
ರಾಶಿ	43508-46899
ಯಲ್ಲಾಪುರ	
ಅಪಿ	62000-66679
ಬಿಳಿಗೋಟು	11899-27611
ಚಾಲಿ	28003-38531
ಕೋಕ	4899-17612
ಕೆಂಪುಗೋಟು	16899-28969
ರಾಶಿ	40109-60315
ತಟ್ಟಿಬೆಟ್ಟೆ	28970-39100

'ರಷ್ಯಾ ವಿರುದ್ಧ ಯುದ್ಧ ಆರಂಭಕ್ಕೆ ಉಕ್ರೇನ್ ಅಧ್ಯಕ್ಷರೇ ಕಾರಣ'

ಝೆಲೆನ್‌ಸ್ಕಿ 'ಸರ್ವಾಧಿಕಾರಿ': ಟ್ರಂಪ್



ಝೆಲೆನ್‌ಸ್ಕಿ ಹಾಗೂ ಟ್ರಂಪ್

ಮಯಾಮಿ (ಎಎಫ್‌ಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು 'ಸರ್ವಾಧಿಕಾರಿ' ಎಂದು ಟೀಕಿಸಿದ್ದಾರೆ.

ಮೂರು ವರ್ಷಗಳ ಹಿಂದೆ ಆರಂಭವಾದ ರಷ್ಯಾ– ಉಕ್ರೇನ್ ಯುದ್ಧವನ್ನು ಕೊನೆಗೊಳಿಸಲು ಪ್ರಯತ್ನಗಳು ಮುಂದುವರಿದಿರುವಾಗಲೇ ಟ್ರಂಪ್ ಅವರ ಹೇಳಿಕೆ ಹೊರಬಿದ್ದಿದೆ. ಇದು ಝೆಲೆನ್‌ಸ್ಕಿ ಮತ್ತು ಅವರ ನಡುವೆ ಮೂಡಿರುವ ಬಿರುಕನ್ನು ಇನ್ನಷ್ಟು ದೊಡ್ಡದಾಗಿಸಿದೆ.

ರಷ್ಯಾ ವಿರುದ್ಧದ ಯುದ್ಧದಲ್ಲಿ ಅಮೆರಿಕವು ಉಕ್ರೇನ್‌ಗೆ ಅಗತ್ಯ ಹಣಕಾಸು ಮತ್ತು ಶಸ್ತ್ರಾಸ್ತ್ರ ನೆರವು ನೀಡಿದೆ. ಆದರೆ ಟ್ರಂಪ್ ಅಧಿಕಾರ ವಹಿಸಿಕೊಂಡ ಕೆಲವೇ ವಾರಗಳಲ್ಲಿ ಅಮೆರಿಕದ ವಿದೇಶಾಂಗ ನೀತಿಯಲ್ಲಿ ಹಠಾತ್ ಬದಲಾವಣೆ ಕಂಡುಬಂದಿದೆ.

ಅಮೆರಿಕವು ಕೆಲ ದಿನಗಳ ಹಿಂದೆ ರಷ್ಯಾ ಜತೆ ಮಾತುಕತೆ ಆರಂಭಿಸಿದೆ. ಇದೀಗ, ಟ್ರಂಪ್ ಅವರು ಝೆಲೆನ್‌ಸ್ಕಿ ಅವರನ್ನು ಟೀಕಿಸಿದ್ದು, ಯುದ್ಧ ಆರಂಭಕ್ಕೆ ಉಕ್ರೇನ್ ಕಾರಣ ಎಂದು ದೂರಿದ್ದಾರೆ.

'ಚುನಾವಣೆ ನಡೆಯದೆ ಸರ್ವಾಧಿಕಾರಿಯಾಗಿ ಮುಂದುವರಿದಿರುವ ಝೆಲೆನ್‌ಸ್ಕಿ, ಶೀಘ್ರವಾಗಿ ತಮ್ಮ ಸ್ಥಾನದಿಂದ ಕೆಳಗಿಳಿಯುವುದು ಒಳಿತು. ಇಲ್ಲದಿದ್ದರೆ ಆ ದೇಶಕ್ಕೆ ಉಳಿಗಾಲವಿಲ್ಲ' ಎಂದು ಅಮೆರಿಕದ ಅಧ್ಯಕ್ಷರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

2019ರಲ್ಲಿ ಉಕ್ರೇನ್ ಅಧ್ಯಕ್ಷರಾಗಿ ಆಯ್ಕೆಯಾದ ಝೆಲೆನ್‌ಸ್ಕಿ ಅವರ ಐದು ವರ್ಷಗಳ ಅಧಿಕಾರಾವಧಿ 2024ರ ಮೇ ನಲ್ಲಿ ಕೊನೆಗೊಳ್ಳಬೇಕಿತ್ತು. ಆದರೆ ಯುದ್ಧದ ಕಾರಣ ಉಕ್ರೇನ್‌ನಲ್ಲಿ ಮಿಲಿಟರಿ ಕಾನೂನು ಜಾರಿಯಲ್ಲಿರುವುದರಿಂದ ಅವಧಿ ಕಳೆದರೂ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ.

'ಝೆಲೆನ್‌ಸ್ಕಿ ಅವರು ಚುನಾವಣೆ ನಡೆಸಲು ನಿರಾಕರಿಸುತ್ತಿದ್ದಾರೆ. ಉಕ್ರೇನ್‌ನಲ್ಲಿ ಅವರ ಜನಬೆಂಬಲ ಕುಸಿಯುತ್ತಿರುವುದನ್ನು ಸಮೀಕ್ಷೆಯು ತೋರಿಸಿವೆ' ಎಂದು ಟ್ರಂಪ್ ಹೇಳಿದ್ದಾರೆ.

'ಝೆಲೆನ್‌ಸ್ಕಿ ಅವರು ಜೋ ಬೈಡನ್ (ಅಮೆರಿಕದ ಹಿಂದಿನ ಅಧ್ಯಕ್ಷ) ಅವರನ್ನು ತಮ್ಮ ಮಾತುಗಳಿಂದ ಮರುಳು ಮಾಡಿದ್ದಾರೆ. ಆದರೆ ನಾವು ಯುದ್ಧವನ್ನು ಕೊನೆಗೊಳಿಸಲು ರಷ್ಯಾ ಜತೆ ಯಶಸ್ವಿಯಾಗಿ ಮಾತುಕತೆ ನಡೆಸುತ್ತಿದ್ದೇವೆ. ಯುದ್ಧ ಕೊನೆಗೊಳಿಸುವುದು ಟ್ರಂಪ್ ಆಡಳಿತದಿಂದ ಮಾತ್ರ ಸಾಧ್ಯ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ' ಎಂದಿದ್ದಾರೆ.

ರಷ್ಯಾದಿಂದ ತಪ್ಪು ಮಾಹಿತಿ: ಝೆಲೆನ್‌ಸ್ಕಿ

ಕೀವ್: ಡೊನಾಲ್ಡ್ ಟ್ರಂಪ್ ಅವರು ರಷ್ಯಾದ 'ತಪ್ಪು ಮಾಹಿತಿ'ಯನ್ನು ನಂಬಿದ್ದಾರೆ ಎಂದು ಝೆಲೆನ್‌ಸ್ಕಿ ಆರೋಪಿಸಿದ್ದಾರೆ.

ಅಮೆರಿಕದ ಅಧ್ಯಕ್ಷರು ಮಾಡಿರುವ ಟೀಕೆಗೆ ಕೀವ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ಅಮೆರಿಕದ ಅಧ್ಯಕ್ಷರಾದ ಟ್ರಂಪ್ ಅವರ ಬಗ್ಗೆ ಅಪಾರ ಗೌರವವಿದೆ. ದುರದೃಷ್ಟವಶಾತ್, ಅವರು ತಪ್ಪು ಮಾಹಿತಿಯ ಯುಗದಲ್ಲಿ ಬದುಕುತ್ತಿದ್ದಾರೆ' ಎಂದು ಹೇಳಿದ್ದಾರೆ.

'ಯುದ್ಧವನ್ನು ಉಕ್ರೇನ್ ಆರಂಭಿಸಿದೆ' ಎಂಬ ಟ್ರಂಪ್ ಆರೋಪವನ್ನೂ ಅವರು ಅಲ್ಲಗಳೆದರು. ರಷ್ಯಾ– ಅಮೆರಿಕ ಮಾತುಕತೆಯನ್ನೂ ಟೀಕಿಸಿದ ಅವರು, 'ಹಲವು ವರ್ಷಗಳ ಏಕಾಂಗಿತನದಿಂದ ಹೊರಬರಲು ವ್ಲಾದಿಮಿರ್ ಪುಟಿನ್ ಅವರಿಗೆ ಅಮೆರಿಕ ನೆರವಾಗಿದೆ' ಎಂದಿದ್ದಾರೆ.

ವಲಸಿಗರಿಗೆ ಅನುದಾನ; ತಡೆಗೆ ಕ್ರಮ

ವಾಷಿಂಗ್ಟನ್ (ರಾಯಿಟರ್ಸ್): ತೆರಿಗೆದಾರರ ಹಣ ಅಕ್ರಮ ವಲಸಿಗರ ಪಾಲಾಗುವುದನ್ನು ತಡೆಯುವುದು ಸೇರಿದಂತೆ ಹಲವು ಕಾರ್ಯಕಾರಿ ಆದೇಶಗಳಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬುಧವಾರ ಸಹಿ ಹಾಕಿದ್ದಾರೆ.

ವಲಸಿಗರಾಗಿ ಯಾವುದೇ ಸರ್ಕಾರಿ ಅನುದಾನಿತ ಕಾರ್ಯಕ್ರಮಗಳು ಚಾಲ್ತಿಯಲ್ಲಿದ್ದರೆ, ಅವುಗಳನ್ನು ಗುರುತಿಸಿ ಪಟ್ಟಿ ಮಾಡುವಂತೆಯೂ ಸಂಬಂಧಪಟ್ಟ ಏಜೆನ್ಸಿಗಳಿಗೆ ನಿರ್ದೇಶಿಸಲಾಗಿದೆ.

ರಾಜ್ಯಗಳು ಅಥವಾ ಸ್ಥಳೀಯ ಸಂಸ್ಥೆಗಳು ಇನ್ನು ಮುಂದೆ ಅಕ್ರಮ ವಲಸಿಗರಿಗೆ ಸರ್ಕಾರದ ಹಣ ಬಳಸುವುದಿಲ್ಲ ಎಂಬುದನ್ನು ಈ ಆದೇಶವು ಖಚಿತಪಡಿಸುತ್ತದೆ.

'ಬಾಂಗ್ಲಾದೇಶ: ಅಲ್ಪಸಂಖ್ಯಾತರ ಮೇಲೆ ದಾಳಿ ನಡೆದಿಲ್ಲ'

ನವದೆಹಲಿ (ಪಿಟಿಐ): 'ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆದಿದೆ ಎನ್ನುವ ವರದಿಗಳು ಉತ್ಪ್ರೇಕ್ಷಿತವಾದವುಗಳು. ವಿದ್ಯಾರ್ಥಿಗಳು ನಡೆಸಿದ ಚಳವಳಿಯ ಸಂದರ್ಭದಲ್ಲಿ ಆಗಸ್ಟ್‌ನಲ್ಲಿ ಕೆಲವೆಡೆ ದಾಳಿ ನಡೆದಿದ್ದವು. ಆದರೆ, ಇತ್ತೀಚೆಗೆ ದಾಳಿಗಳು ನಡೆದಿಲ್ಲ' ಎಂದು ಬಾಂಗ್ಲಾದೇಶದ ಗಡಿ ಕಾವಲು ಪಡೆಯ ಮಹಾನಿರ್ದೇಶಕ ಮೇಜರ್ ಜನರಲ್ ಮೊಹಮ್ಮದ್ ಅಶ್ರಫುಜಮಾನ್ ಗುರುವಾರ ಹೇಳಿದರು.

ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಅವರು ಆಡಳಿತ ಅಂತ್ಯಗೊಂಡು ಮಧ್ಯಂತರ ಸರ್ಕಾರ ರಚನೆಯಾದ ಬಳಿಕ ಇದೇ ಮೊದಲ ಬಾರಿಗೆ ಭಾರತದ ಬಿಎಸ್‌ಎಫ್ ಮತ್ತು ಬಾಂಗ್ಲಾದ ಗಡಿ ಕಾವಲ ಪಡೆಯ ಮುಖ್ಯಸ್ಥರು ಮಾತುಕತೆ ನಡೆಸಿದರು. ಬಿಎಸ್‌ಎಫ್‌ನ ಮಹಾನಿರ್ದೇಶಕ ದಲ್‌ಜೀತ್ ಸಿಂಗ್ ಚೌಧರಿ ಹಾಜರಿದ್ದರು. ಸಭೆ ಬಳಿಕ ಜಂಟಿ ಪತ್ರಿಕಾಗೋಷ್ಠಿ ನಡೆಸಲಾಯಿತು.

ಸ್ಯಾಮ್ಸಂಗ್ ನೌಕರರ ಹೋರಾಟ ಸರ್ಕಾರದ ಮಧ್ಯಪ್ರವೇಶಕ್ಕೆ ಕೋರಿಕೆ

ಚೆನ್ನೈ (ಪಿಟಿಐ): ಶ್ರೀಪೆರಂಬದೂರಿನಲ್ಲಿ ಇರುವ ಸ್ಯಾಮ್ಸಂಗ್ ಕಂಪನಿಯ ಘಟಕದಲ್ಲಿ ಸಿಐಟಿಯು ಬೆಂಬಲಿತ ಸ್ಯಾಮ್ಸಂಗ್ ಇಂಡಿಯಾ ನೌಕರರ ಒಕ್ಕೂಟದಿಂದ ನಡೆಯುತ್ತಿರುವ ಪ್ರತಿಭಟನೆಯು ಗುರುವಾರ ತೀವ್ರಗೊಂಡಿದೆ.

ಕಾರ್ಖಾನೆಯ ಕಾರ್ಯಾಚರಣೆಗೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ ಕೂಡಲೇ ಮಧ್ಯಪ್ರವೇಶಿಸುವಂತೆ ತಮಿಳುನಾಡು ರಾಜ್ಯ ಸರ್ಕಾರಕ್ಕೆ ಸ್ಯಾಮ್ಸಂಗ್ ಕಂಪನಿಯು ಮನವಿ ಮಾಡಿದೆ.

ಹೋರಾಟದಲ್ಲಿ ತೊಡಗಿದ್ದ ಮೂವರು ನೌಕರರನ್ನು ಕಂಪನಿಯು ಸೇವೆಯಿಂದ ಅಮಾನತುಗೊಳಿಸಿದೆ. ಇದನ್ನು ಖಂಡಿಸಿ ಕೆಲವು ನೌಕರರು ಪ್ರತಿಭಟನೆ ನಡೆಸುತ್ತಿದ್ದಾರೆ.

ಕಂಪನಿಯು ಕಾರ್ಮಿಕ ಸ್ನೇಹಿಯಾಗಿ ಕಾರ್ಯ ನಿರ್ವಹಿಸಲು ಬದ್ಧವಾಗಿದೆ. ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ. ನಮ್ಮ ನೌಕರರ ಸುರಕ್ಷತೆ ಮುಖ್ಯವಾಗಿದೆ. ಕಂಪನಿಯಲ್ಲಿ ಶಿಸ್ತು ಕಾಪಾಡಿಕೊಂಡು ಸುಗಮವಾಗಿ ವ್ಯಾಪಾರ ವಹಿವಾಟು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ಸರ್ಕಾರವು ಅಗತ್ಯ ಸಹಕಾರ ನೀಡಬೇಕು ಎಂದು ಪತ್ರದಲ್ಲಿ ಕೋರಿದೆ. ನೌಕರರು ಕಂಪನಿಯ ನಿಯಮಗಳನ್ನು ಪಾಲಿಸಬೇಕು. ನಿಯಮ ಉಲ್ಲಂಘಿಸಿದರೆ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ ಎಂದು ಕಂಪನಿ ಹೇಳಿದೆ.

ವಂಚನೆ: 'ಮಹಾ' ಕೃಷಿ ಸಚಿವರಿಗೆ 2 ವರ್ಷ ಸಜೆ, ₹ 50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಕೃಷಿ ಸಚಿವ, ಎನ್‌ಸಿಪಿ ನಾಯಕ ಮಾಣಿಕ್‌ರಾವ್ ಕೋಕಟೆ ಅವರಿಗೆ ವಂಚನೆ ಪ್ರಕರಣದಲ್ಲಿ ನಾಸಿಕ್‌ನ ಜಿಲ್ಲಾ ಸೆಷನ್ಸ್ ಕೋರ್ಟ್, ಎರಡು ವರ್ಷ ಸಜೆ ವಿಧಿಸಿದೆ. ಅವರಿಗೆ ಈಗ ಶಾಸಕ ಸ್ಥಾನ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಸಚಿವ ಶಿಕ್ಷೆಗೆ ಒಳಗಾಗಿರುವುದು ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟದ ಸರ್ಕಾರಕ್ಕೂ ಇರಿಸು ಮುರಿಸು ಉಂಟು ಮಾಡಿದೆ.

ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿ ಎರಡು ಫ್ಲ್ಯಾಟ್‌ಗಳನ್ನು ಸ್ವಾಧೀನ ಪಡೆಯಲು ಮಾಣಿಕ್‌ರಾವ್ ಕೋಕಟೆ ಅವರು ದಾಖಲೆಗಳನ್ನು ತಿರುಚಿ ವಂಚನೆ ಎಸಗಿದ್ದಾರೆ ಎಂಬ 30 ವರ್ಷ ಹಳೆಯ ಪ್ರಕರಣದಲ್ಲಿ ಕೋರ್ಟ್ ಶಿಕ್ಷೆ ವಿಧಿಸಿದೆ.

ಕೋಕಟೆ ವಿರುದ್ಧ ಮಾಜಿ ಸಚಿವ, ದಿವಂಗತ ಟಿ.ಎಸ್. ದಿಘೋಲೆ 1997ರಲ್ಲಿ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನಾಸಿಕ್‌ನ ಸೆಷನ್ಸ್ ಕೋರ್ಟ್, ಮಾಣಿಕ್‌ರಾವ್ ಮತ್ತು ಅವರ ಸಹೋದರ ವಿಜಯ್ ಕೋಕಟೆ ಅವರಿಗೆ ಶಿಕ್ಷೆ ವಿಧಿಸಿ ಆದೇಶಿಸಿತು. ಅಲ್ಲದೆ, ಸಹೋದರರಿಬ್ಬರಿಗೂ ಕೋರ್ಟ್ ತಲಾ ₹ 50 ಸಾವಿರ ದಂಡವನ್ನು ವಿಧಿಸಿದೆ.

67 ವರ್ಷದ ಕೋಕಟೆ ಅವರು ನಾಸಿಕ್ ಜಿಲ್ಲೆಯ ಸಿನ್ನರ್ ಕ್ಷೇತ್ರದಿಂದ ಐದು ಬಾರಿ ಶಾಸನಸಭೆಗೆ ಆಯ್ಕೆಯಾಗಿದ್ದಾರೆ. ಮೈತ್ರಿ ಕೂಟದ ಭಾಗವಾಗಿರುವ ಎನ್‌ಸಿಪಿ ಬಣದ ನಾಯಕ, ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಆಪ್ತ ವಲಯದಲ್ಲಿ ಇದ್ದಾರೆ.

ಫ್ಲ್ಯಾಟ್ ಸ್ವಾಧೀನ ಪಡೆಯುವ ಸಂದರ್ಭದಲ್ಲಿ, ನಮಗೆ ಬೇರಾವುದೇ ಸ್ವಂತ ಮನೆಯಿಲ್ಲ ಹಾಗೂ ಆರ್ಥಿಕ ಸ್ಥಿತಿ ಕೂಡಾ ಉತ್ತಮವಾಗಿಲ್ಲ ಎಂದು ತಿರುಚಲಾದ ದಾಖಲೆ ನೀಡಿದ್ದರು ಎಂದು ಎಪಿಪಿ ಪೂನಂ ಗೋಟ್ಕೆ ತಿಳಿಸಿದರು.

ನೀತಿ ಸಂಹಿತೆ ಪಾಲಿಸಲು ಒಟಿಟಿಗಳಿಗೆ ತಾಕೀತು

ನವದೆಹಲಿ (ಪಿಟಿಐ): ಒಟಿಟಿ ವೇದಿಕೆಗಳಲ್ಲಿ ಅಶ್ಲೀಲ ಮತ್ತು ಅಸಭ್ಯ ಕಾರ್ಯಕ್ರಮಗಳು ಪ್ರಸಾರವಾಗುತ್ತಿರುವ ಕುರಿತು ವ್ಯಾಪಕ ದೂರುಗಳು ಬರುತ್ತಿರುವ ಕಾರಣ, ಕಾನೂನಿನಡಿ ನಿಷೇಧಿಸಲಾಗಿರುವ ಕಾರ್ಯಕ್ರಮಗಳ ಪ್ರಸಾರದ ವಿರುದ್ಧ ಕೇಂದ್ರ ಸರ್ಕಾರ ಕಠಿಣ ಎಚ್ಚರಿಕೆ ನೀಡಿದೆ.

ಒಟಿಟಿ ವೇದಿಕೆಗಳು ಮತ್ತು ಸ್ವಯಂ-ನಿಯಂತ್ರಕ ಸಂಸ್ಥೆಗಳಿಗೆ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ನೀಡಿರುವ ಸಲಹೆಯಲ್ಲಿ, ಯಾವುದೇ ಕಾರ್ಯಕ್ರಮ ಪ್ರಸಾರ ಮಾಡುವಾಗ ಮಾಹಿತಿ ತಂತ್ರಜ್ಞಾನದ ನಿಯಮಗಳು -2021ರ ಅಡಿಯಲ್ಲಿ ಸೂಚಿಸಲಾದ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇದರಲ್ಲಿ ವಯೋಮಾನ ಆಧಾರಿತ ವಿಷಯ ವರ್ಗೀಕರಣವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದೆ.

ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆಯೂ ಒಟಿಟಿ ವೇದಿಕೆಗಳ ಸ್ವಯಂ-ನಿಯಂತ್ರಕ ಸಂಸ್ಥೆಗಳಿಗೆ ಅದು ಸೂಚನೆ ನೀಡಿದೆ.

ಸಾಮಾಜಿಕ ಮಾಧ್ಯಮದಲ್ಲಿ ಕೆಲವರು ಅಶ್ಲೀಲ, ಅಸಭ್ಯ ಹಾಗೂ ಲೈಂಗಿಕತೆಯನ್ನು ವಸ್ತುವಾಗಿ ಕಾರ್ಯಕ್ರಮ ಪ್ರಸಾರ ಮಾಡುತ್ತಿರುವ ಬಗ್ಗೆ ಸಂಸತ್ ಸದಸ್ಯರು, ಶಾಸನಬದ್ಧ ಸಂಸ್ಥೆಗಳಿಂದ ದೂರುಗಳನ್ನು ಸ್ವೀಕರಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

'ಎ' ಪ್ರಮಾಣಪತ್ರ ಹೊಂದಿರುವ ವಿಷಯಗಳು ಮಕ್ಕಳಿಗೆ ಸಿಗದಂತೆ ತಡೆಯುವ ವಿಧಾನವನ್ನು ಒಟಿಟಿಯಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದೂ ಸಚಿವಾಲಯ ಸೂಚಿಸಿದೆ.

ಸಾಮಾಜಿಕ ಮಾಧ್ಯಮಗಳ ವೇದಿಕೆಗಳಲ್ಲಿ ಹಂಚಿಕೊಳ್ಳಲಾಗುವ ವಿಷಯಗಳನ್ನು ನಿಯಂತ್ರಿಸಲು ವ್ಯವಸ್ಥೆ ರೂಪಿಸಬೇಕೆಂದು ಸುಪ್ರೀಂ ಕೋರ್ಟ್ ನೀಡಿದ್ದ ಸೂಚನೆ ಬೆನ್ನಲ್ಲೇ ಸಚಿವಾಲಯವು ಈ ಸಲಹೆ ನೀಡಿದೆ.

ಯೂಟ್ಯೂಬ್ ಸೇರಿ ಸಾಮಾಜಿಕ ಜಾಲತಾಣದ ಎಲ್ಲ ವೇದಿಕೆಗಳಲ್ಲಿ ಎಲ್ಲ ರೀತಿಯ ವಿಷಯವಸ್ತುಗಳನ್ನು ಹಂಚಿಕೊಳ್ಳಲಾಗುತ್ತಿದೆ. ಇವುಗಳ ನಿಯಂತ್ರಣಕ್ಕೆ ಸಂಬಂಧಿಸಿದ ಕಾನೂನಿನಲ್ಲಿ ನ್ಯೂನತೆ ಇರುವುದನ್ನು ಸುಪ್ರೀಂ ಕೋರ್ಟ್ ಬೊಟ್ಟು ಮಾಡಿ ತೋರಿಸಿತ್ತು.

299 ಅಕ್ರಮ ವಲಸಿಗರನ್ನು ಪನಾಮಗೆ ರವಾನಿಸಿದ ಅಮೆರಿಕ

ಸಹಾಯಕ್ಕಾಗಿ ಹಸ್ತ ಚಾಚುತ್ತಿರುವ ವಲಸಿಗರು



ಪನಾಮ ಸಿಟಿಯ ಹೋಟೆಲ್‌ವೊಂದರಲ್ಲಿ ಇರಿಸಲಾಗಿರುವ ಅಕ್ರಮ ವಲಸಿಗರು ತಮ್ಮ ಕೋಣೆಯ ಕಿಟಕಿಗಳ ಬಳಿ ಬಂದು ಸಹಾಯ ಕೋರಿದರು –ಎಎಫ್‌ಪಿ ಚಿತ್ರ

ಪನಾಮ ಸಿಟಿ (ಪಿಟಿಐ/ರಾಯಿಟರ್ಸ್): 'ನಮಗೆ ಸಹಾಯ ಮಾಡಿ', 'ನಮ್ಮ ದೇಶದಲ್ಲಿ ನಮಗೆ ಸುರಕ್ಷತೆ ಇಲ್ಲ', 'ನಾವು ಅಫ್ಗಾನ್ ಹುಡುಗಿಯರು, ನಮಗೆ ಸಹಾಯ ಮಾಡಿ' ಎಂಬ ಬರಹಗಳನ್ನು ಕಿಟಕಿ ಗಾಜುಗಳ ಮೇಲೆ ಬರೆದು, 'ನಮಗಿಲ್ಲಿ ಸ್ವಾತಂತ್ರ್ಯವಿಲ್ಲ' ಎಂಬಂತೆ ಸಂಜ್ಞಾ ಭಾಷೆ ಮೂಲಕ ಸಹಾಯ ಕೋರುತ್ತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಸಹಾಯಕ್ಕಾಗಿ ಮೊರೆ ಇಡುತ್ತಿರುವವರು ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿದ್ದ ಭಾರತ, ಇರಾನ್, ಅಫ್ಗಾನಿಸ್ತಾನ, ಚೀನಾ ಸೇರಿದಂತೆ ವಿವಿಧ ದೇಶಗಳ ನಾಗರಿಕರು. ಇಂಥ 299 ಮಂದಿಯನ್ನು ಪನಾಮ ದೇಶದ ಪನಾಮ ಸಿಟಿಯ ಹೋಟೆಲ್‌ವೊಂದರಲ್ಲಿ ಕಳೆದ ಶನಿವಾರದಿಂದ ಇರಿಸಲಾಗಿದೆ.

ಅಕ್ರಮ ವಲಸಿಗರನ್ನು ದೇಶದಿಂದ ಹೊರದಬ್ಬುವ ಪ್ರಕ್ರಿಯೆಯಲ್ಲಿ ಸಹಕಾರ ನೀಡುವಂತೆ ಅಮೆರಿಕವು ಈಗ ಪನಾಮ, ಕೋಸ್ಟರಿಕಾ ಸೇರಿದಂತೆ ಮಧ್ಯ ಅಮೆರಿಕದ ಕೆಲವು ದೇಶಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಅಮೆರಿಕ ಕಳುಹಿಸುವ ಅಕ್ರಮ ವಲಸಿಗರು ಮತ್ತು ವಲಸಿಗರ ದೇಶಗಳ ನಡುವೆ 'ಸೇತುವೆ'ಯಾಗಿ ಕೆಲಸ ಮಾಡುವುದಾಗಿ ಪನಾಮ ಹಾಗೂ ಕೋಸ್ಟರಿಕಾ ದೇಶಗಳು ಒಪ್ಪಿಕೊಂಡಿವೆ.

ಮುಂದಿನ ವಾರದಲ್ಲಿ ಭಾರತವೂ ಸೇರಿದಂತೆ ಮಧ್ಯ ಏಷ್ಯಾ ದೇಶಗಳ ಹಲವು ನಾಗರಿಕರನ್ನು ಅಮೆರಿಕ ಸೇನಾ ವಿಮಾನಗಳ ಮೂಲಕ ಕೋಸ್ಟರಿಕಾಕ್ಕೆ ಕಳುಹಿಸಲಿದೆ. ಹೋಟೆಲ್‌ನಲ್ಲಿ ಸುಮಾರು 50 ಮಕ್ಕಳೂ ಇದ್ದಾರೆ ಎಂದು ವರದಿಯಾಗಿದೆ.

'ಭಾರತೀಯರು ಸುರಕ್ಷಿತ'

ಪನಾಮ ಹೋಟೆಲ್‌ನಲ್ಲಿ ಭಾರತೀಯರು ಇರುವ ಬಗ್ಗೆ ಮತ್ತು ಅವರನ್ನು ವಾಪಸು ಕರೆಸಿಕೊಳ್ಳುವ ಬಗ್ಗೆ ಪನಾಮ ಸರ್ಕಾರವು ಅಲ್ಲಿರುವ ಭಾರತದ ರಾಯಭಾರ ಕಚೇರಿಗೆ ಮಾಹಿತಿ ನೀಡಿದೆ. ಈ ಬಗ್ಗೆ ಭಾರತದ ರಾಯಭಾರ ಕಚೇರಿಯು ಗುರುವಾರ ತನ್ನ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದೆ.

'ನಾವು ಪನಾಮ ಸರ್ಕಾರದೊಂದಿಗೆ ಸಂಪರ್ಕದಲ್ಲಿದ್ದೇವೆ. ಭಾರತೀಯರು ಅಲ್ಲಿನ ಹೋಟೆಲ್‌ನಲ್ಲಿ ಸುರಕ್ಷಿತವಾಗಿದ್ದಾರೆ. ಅವರ ಸುರಕ್ಷತೆಗಾಗಿ ರಾಯಭಾರ ಕಚೇರಿ ತಂಡವು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ' ಎಂದು ಕಚೇರಿ ಪೋಸ್ಟ್ ಹಂಚಿಕೊಂಡಿದೆ.

ವಾಪಸ್ ತೆರಳಲು ಒಪ್ಪದ ವಲಸಿಗರು

ಪನಾಮ ಹೋಟೆಲ್‌ನಲ್ಲಿ ಇರಿಸಲಾಗಿರುವ 299 ವಲಸಿಗರ ಪೈಕಿ 171 ವಲಸಿಗರು ತಮ್ಮ ತಮ್ಮ ದೇಶಗಳಿಗೆ ವಾಪಸು ತೆರಳಲು ಒಪ್ಪಿಕೊಂಡಿದ್ದಾರೆ.

ಆದರೆ, ಸುಮಾರು 98 ಮಂದಿ ವಾಪಸು ತೆರಳಲು ಒಪ್ಪಿಕೊಂಡಿಲ್ಲ. ಇರಾನ್, ಅಫ್ಗಾನಿಸ್ತಾನದಂಥ ದೇಶದ ವಲಸಿಗರ ಪೈಕಿ ಮಹಿಳೆಯರು ಮತ್ತು ಮಕ್ಕಳೂ ಇದ್ದಾರೆ. ಇವರು ಈಗ ಸಹಾಯಕ್ಕಾಗಿ ಅಂಗಲಾಚುತ್ತಿದ್ದಾರೆ. ಇವರೆಲ್ಲರೂ ಅಮೆರಿಕದ ಆಶ್ರಯ ಕೋರಲು ಇಚ್ಛಿಸುವವರು ಎನ್ನಲಾಗಿದೆ.

98 ವಲಸಿಗರನ್ನು ಬುಧವಾರ ಪನಾಮದ ಗಡಿ ಭಾಗದ ಡಾರಿಯನ್ ಪ್ರದೇಶಕ್ಕೆ ರವಾನಿಸಿದೆ. ಈ ಪ್ರದೇಶವು ಅತಿ ದಟ್ಟವಾದ ಮತ್ತು ವಿಷ ಪ್ರಾಣಿ, ಜಂತುಗಳಿರುವ ಅರಣ್ಯವನ್ನು ಹೊಂದಿದೆ. ಮುಂದಿನ ನಿರ್ಧಾರ ಕೈಗೊಳ್ಳುವವರೆಗೂ ಇವರು ಇಲ್ಲಿಯೇ ಇರಲಿದ್ದಾರೆ ಎಂದು ಪನಾಮ ಸರ್ಕಾರ ಹೇಳಿದೆ.

‘ಹಿರಿಯ ವಕೀಲ’ ಎಂಬ ಗೌರವ ನೀಡುವ ಕುರಿತು ಸುಪ್ರೀಂ ಕೋರ್ಟ್ ಮಾತು

‘ಮಾನ್ಯತೆ ಪ್ರಕ್ರಿಯೆ: ಆತ್ಮಾವಲೋಕನ ಬೇಕು’

ನವದೆಹಲಿ (ಪಿಟಿಐ): ವಕೀಲರಿಗೆ ‘ಹಿರಿಯ ವಕೀಲರು’ ಎಂಬ ಮಾನ್ಯತೆ ನೀಡುವ ವಿಚಾರವಾಗಿ ‘ಗಂಭೀರ ಆತ್ಮಾವಲೋಕನದ’ ಅಗತ್ಯ ಇದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ಕುರಿತಾಗಿ ವಿಸ್ತೃತ ಪೀಠವೊಂದು ವಿಚಾರಣೆ ನಡೆಸಬೇಕೇ ಎಂಬ ಬಗ್ಗೆ ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರನ್ನು ಕೋರಿದೆ.

ಅಭ್ಯರ್ಥಿಯ ಸಂದರ್ಶನವನ್ನು ಕೆಲವು ನಿಮಿಷಗಳ ಕಾಲ ನಡೆಸಿ, ಅವರ ಅರ್ಹತೆಯನ್ನು ನಿಜವಾಗಿಯೂ ಪರೀಕ್ಷಿಸಬಹುದೇ ಎಂಬ ಪ್ರಶ್ನೆಯನ್ನು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಎತ್ತಿದೆ.

‘ಮಾನ್ಯತೆ ನೀಡುವುದಕ್ಕಾಗಿ ಅರ್ಜಿ ಸಲ್ಲಿಸುವುದಕ್ಕೆ ನ್ಯಾಯಾಲಯ ಅವಕಾಶ ನೀಡಬೇಕೇ ಎಂಬ ಪ್ರಶ್ನೆಯನ್ನು ಗಂಭೀರವಾಗಿ ಪರಿಶೀಲಿಸಬೇಕಿದೆ...’ ಎಂದು ಪೀಠವು ಹೇಳಿದೆ. ವಕೀಲರ ಕಾಯ್ದೆಯ ಸೆಕ್ಷನ್ 16, ವಕೀಲರಿಗೆ ‘ಹಿರಿಯ’ ಎಂಬ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದೆ. ‘ವಕೀಲರೊಬ್ಬರು ವಕೀಲ ಸಮುದಾಯದಲ್ಲಿ ಹೊಂದಿರುವ ಹಿರಿಮೆ, ತಮ್ಮ ಸಾಮರ್ಥ್ಯ, ವಿಶೇಷ ಜ್ಞಾನದ ಕಾರಣಕ್ಕೆ ಹಿರಿಯ ವಕೀಲ ಎಂಬ ಮಾನ್ಯತೆಗೆ ಅರ್ಹರು ಎಂದಾದಲ್ಲಿ, ಅವರು ಸಂದರ್ಶನಕ್ಕೆ ಹಾಜರಾಗುವಂತೆ ಮಾಡುವ ಮೂಲಕ ನಾವು ಆ ವಕೀಲರ ಘನತೆಗೆ ಮುಜುಗರ ಉಂಟಾಗುವಂತೆ ಮಾಡುತ್ತಿದ್ದೇವೆಯೇ? ನಾವು ಮಾನ್ಯತೆ ನೀಡುವ ಪ್ರಕ್ರಿಯೆಯನ್ನು ಆಯ್ಕೆ ಪ್ರಕ್ರಿಯೆಯನ್ನಾಗಿ ಪರಿವರ್ತಿಸುತ್ತಿಲ್ಲವೇ’ ಎಂದು ಪೀಠವು ಪ್ರಶ್ನಿಸಿದೆ.

ಹಿಂದೆ ತ್ರಿಸದಸ್ಯ ಪೀಠವೊಂದು 2017ರಲ್ಲಿ, ವಕೀಲರಿಗೆ ‘ಹಿರಿಯ’ ಎಂಬ ಮಾನ್ಯತೆ ನೀಡಲು ಸಿಜೆಐ ನೇತೃತ್ವದಲ್ಲಿ ಶಾಶ್ವತ ಸಮಿತಿಯೊಂದನ್ನು ರಚಿಸುವುದು ಸೇರಿದಂತೆ ಹಲವು ಮಾರ್ಗಸೂಚಿ ರೂಪಿಸಿತ್ತು.



ಹಿಂದಿನ ತೀರ್ಮಾನಗಳಿಗೆ ತಾನು ಅಗೌರವ ತೋರುತ್ತಿಲ್ಲ. ಆದರೆ, ಕೆಲವು ಕಳವಳಗಳನ್ನು ಮಾತ್ರ ದಾಖಲಿಸಲಾಗುತ್ತಿದೆ. ಇದರಿಂದಾಗಿ, ಸಿಜೆಐ ಅವರಿಗೆ ಈ ಕಳವಳ ಬಗ್ಗೆ ವಿಸ್ತೃತವಾದ ಪೀಠವು ಪರಿಶೀಲಿಸುವ ಅಗತ್ಯ ಇದೆಯೇ ಎಂಬ ತೀರ್ಮಾನ ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ವಿಭಾಗೀಯ ಪೀಠ ಹೇಳಿದೆ.

ಹಿರಿಯ ಎಂಬ ಮಾನ್ಯತೆಗೆ ಅರ್ಹರಾದವರು ಮಾತ್ರ ಆ ಮಾನ್ಯತೆಯನ್ನು ಪಡೆಯಬೇಕು. ಅರ್ಹರಲ್ಲದವರು ಆ ಮಾನ್ಯತೆಯನ್ನು ಪಡೆದರೆ ನ್ಯಾಯಾಂಗದ ಘನತೆಯ ಮೇಲೆ ಪರಿಣಾಮ ಉಂಟಾಗುತ್ತದೆ ಎಂದು ಪೀಠ ಹೇಳಿದೆ.

ಹೈಕೋರ್ಟ್ ನ್ಯಾಯಮೂರ್ತಿ ವಿರುದ್ಧದ ಲೋಕಪಾಲ ಆದೇಶಕ್ಕೆ ತಡೆ

ಹೈಕೋರ್ಟ್‌ವೊಂದರ ಹೆಚ್ಚುವರಿ ನ್ಯಾಯಮೂರ್ತಿ ಯೊಬ್ಬರ ವಿರುದ್ಧ ಲೋಕಪಾಲ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಗುರುವಾರ ತಡೆ ನೀಡಿದೆ.

‘ಇಂಥ ನಡೆ ಆತಂಕ ಮೂಡಿಸುತ್ತದೆ ಮತ್ತು ನ್ಯಾಯಾಂಗದ ಸ್ವಾತಂತ್ರ್ಯದ ಕುರಿತು ಕಳವಳ ಉಂಟು ಮಾಡುತ್ತದೆ’ ಎಂದೂ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಸೂರ್ಯಕಾಂತ ಹಾಗೂ ಅಭಯ್ ಎಸ್.ಓಕಾ ಅವರು ಇದ್ದ ವಿಶೇಷ ಪೀಠ, ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ಈ ವಿಚಾರವಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ, ಲೋಕಪಾಲ ರಿಜಿಸ್ಟ್ರಾರ್ ಹಾಗೂ ಹೈಕೋರ್ಟ್‌ನ ಹಾಲಿ ಹೆಚ್ಚುವರಿ ನ್ಯಾಯಮೂರ್ತಿ ವಿರುದ್ಧ ದೂರು ಸಲ್ಲಿಸಿರುವ ವ್ಯಕ್ತಿಗೆ ಪೀಠವು ನೋಟಿಸ್ ಜಾರಿ ಮಾಡಿದೆ.

ಅಲ್ಲದೇ, ದೂರು ನೀಡಿರುವ ವ್ಯಕ್ತಿಯು ಹೆಚ್ಚುವರಿ ನ್ಯಾಯಮೂರ್ತಿಯ ಹೆಸರು ಬಹಿರಂಗಪಡಿಸುವುದನ್ನು ನಿರ್ಬಂಧಿಸಿ ಮಧ್ಯಂತರ ತಡೆಯಾಜ್ಞೆ ನೀಡಿದ ಪೀಠವು, ದೂರನ್ನು ಗೌಪ್ಯವಾಗಿಡುವಂತೆಯೂ ದೂರುದಾರನಿಗೆ ನಿರ್ದೇಶನ ನೀಡಿದೆ.

ವಿಚಾರಣೆ ವೇಳೆ, ‘ಹೈಕೋರ್ಟ್ ನ್ಯಾಯಮೂರ್ತಿಗಳು, ‘ಲೋಕಪಾಲ ಹಾಗೂ ಲೋಕಾಯುಕ್ತರ ಕಾಯ್ದೆ–2013’ರ ವ್ಯಾಪ್ತಿಗೆ ಒಳಪಡುವುದಿಲ್ಲ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಪೀಠಕ್ಕೆ ತಿಳಿಸಿದರು.

ಆಗ, ಈ ಅರ್ಜಿ ವಿಚಾರಣೆಗೆ ಸಂಬಂಧಿಸಿ, ನ್ಯಾಯಪೀಠಕ್ಕೆ ನೆರವು ನೀಡಲು ಬಯಸುವೆ. ಲೋಕಪಾಲದ ಈ ಕ್ರಮ ಅಪಾಯದಿಂದ ಕೂಡಿದೆ. ಈ ಕುರಿತು ಕಾಯ್ದೆಯೊಂದನ್ನು ರೂಪಿಸುವ ಅಗತ್ಯವಿದೆ’ ಎಂದು ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು. ‘ಈ ವಿಚಾರ ಕುರಿತು ಸಿಜೆಐ ನೀಡುವ ನಿರ್ದೇಶನಗಳಿಗೆ ಕಾಯೋಣ’ ಎಂದ ಪೀಠವು, ವಿಚಾರಣೆಯನ್ನು ಮಾರ್ಚ್ 18ಕ್ಕೆ ಮುಂದೂಡಿತು.

ಪ್ರಕರಣವೇನು?: ದೂರುದಾರನ ವಿರುದ್ಧ ಖಾಸಗಿ ಕಂಪನಿಯೊಂದು ಪ್ರಕರಣ ದಾಖಲಿಸಿತ್ತು. ಹೈಕೋರ್ಟ್‌ವೊಂದರ ನ್ಯಾಯಮೂರ್ತಿಯೊಬ್ಬರು ಈ ಅರ್ಜಿಯ ವಿಚಾರಣೆ ನಡೆಸಬೇಕಿತ್ತು.

ಕಂಪನಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ, ಹೈಕೋರ್ಟ್‌ವೊಂದರ ಹೆಚ್ಚುವರಿ ನ್ಯಾಯಮೂರ್ತಿಯೊಬ್ಬರು, ಜಿಲ್ಲಾ ನ್ಯಾಯಾಲಯವೊಂದರ ಹೆಚ್ಚುವರಿ ನ್ಯಾಯಾಧೀಶ ಹಾಗೂ ಅರ್ಜಿ ವಿಚಾರಣೆ ನಡೆಸಬೇಕಿದ್ದ ಹೈಕೋರ್ಟ್‌ನ ನ್ಯಾಯಮೂರ್ತಿ ಮೇಲೆ ಪ್ರಭಾವ ಬೀರಿದ್ದರು ಎಂದು ಅರ್ಜಿದಾರ ಎರಡು ಪ್ರತ್ಯೇಕ ದೂರು ದಾಖಲಿಸಿದ್ದರು. ಈ ದೂರುಗಳನ್ನು ಪರಿಗಣಿಸಿದ್ದ ಲೋಕಪಾಲ, ಹೆಚ್ಚುವರಿ ನ್ಯಾಯಮೂರ್ತಿ ವಿರುದ್ಧ ಜ.27ರಂದು ಆದೇಶ ಹೊರಡಿಸಿತ್ತು.

‘ಎರಡು ಎಫ್‌ಐಆರ್ ದಾಖಲು ತಪ್ಪಲ್ಲ’

ನವದೆಹಲಿ: ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಎಫ್‌ಐಆರ್ ದಾಖಲಿಸಲು ಅವಕಾಶ ಇದೆ; ಎರಡೂ ಎಫ್‌ಐಆರ್‌ಗಳ ವ್ಯಾಪ್ತಿ ಭಿನ್ನವಾಗಿದ್ದರೆ ಆ ರೀತಿ ಮಾಡಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದ ಎಫ್‌ಐಆರ್ ಒಂದನ್ನು ರದ್ದುಪಡಿಸಿ ರಾಜಸ್ಥಾನ ಹೈಕೋರ್ಟ್ 2022ರ ಸೆಪ್ಟೆಂಬರ್ 9ರಂದು ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಪಿ.ಕೆ. ಮಿಶ್ರಾ ಅವರು ಇರುವ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು ಅಸಿಂಧುಗೊಳಿಸಿದೆ.

ಜೈವಿಕ ಡೀಸೆಲ್ ಮಾರಾಟಕ್ಕೆ ಪ್ರತಿ ಲೀಟರ್‌ಗೆ ₹2ರಂತೆ ಲಂಚ ಕೇಳಿದ್ದ ಆರೋಪದ ಅಡಿಯಲ್ಲಿ ಮೊದಲನೆಯ ಎಫ್‌ಐಆರ್‌ಅನ್ನು 2022ರ ಏಪ್ರಿಲ್ 4ರಂದು ದಾಖಲಿಸಲಾಗಿತ್ತು. ಜೈವಿಕ ಡೀಸೆಲ್ ಪಂಪ್‌ಗಳನ್ನು ನಡೆಸಲು ಬೇಕಿರುವ ಪರವಾನಗಿ ನೀಡಲು ಲಂಚ ಪಡೆಯುತ್ತಿದ್ದ ಆರೋಪದ ಅಡಿಯಲ್ಲಿ ಏಪ್ರಿಲ್ 24ರಂದು ಎರಡನೆಯ ಎಫ್‌ಐಆರ್ ದಾಖಲಿಸಲಾಗಿತ್ತು.

ಎರಡನೆಯ ಎಫ್‌ಐಆರ್ ದಾಖಲಿಸಿರುವುದು ಕಾನೂನು ಪ್ರಕ್ರಿಯೆಯ ದುರ್ಬಳಕೆ ಎಂದು ಹೈಕೋರ್ಟ್ ಹೇಳಿತ್ತು. ಆದರೆ, ಎರಡೂ ಎಫ್‌ಐಆರ್‌ಗಳ ವ್ಯಾಪ್ತಿ ಭಿನ್ನವಾಗಿದೆ ಎಂಬುದು ವಾಸ್ತವಾಂಶಗಳನ್ನು ಪರಿಗಣಿಸಿದಾಗ ಗೊತ್ತಾಗುತ್ತದೆ ಎಂದು ಪೀಠವು ಹೇಳಿದೆ. ಎರಡನೆಯ ಎಫ್‌ಐಆರ್‌ನ ವ್ಯಾಪ್ತಿಯು ಹಿರಿದಾಗಿದೆ ಎಂದು ಅದು ಹೇಳಿದೆ.

ಎಪಿಎಂಸಿಗಳಲ್ಲಿ ಇನ್ನು ಚಿಲ್ಲರೆ ವಹಿವಾಟು

ಒಂದನೇ ಪುಟದಿಂದ...

ಅಧಿಕ ಬಡ್ಡಿಗೆ 10 ವರ್ಷ ಶಿಕ್ಷೆ: ಸಹಕಾರ ಸಂಘಗಳು ಮತ್ತು ನಿಬಂಧಕರ ಬಳಿ ನೋಂದಾಯಿಸಿಕೊಳ್ಳುವ ಖಾಸಗಿ ಹಣಕಾಸು ಸಂಸ್ಥೆಗಳು ಅಧಿಕ ಬಡ್ಡಿ ವಿಧಿಸಿದರೆ 10 ವರ್ಷ ಶಿಕ್ಷೆ ಮತ್ತು ₹5 ಲಕ್ಷ ದಂಡ ವಿಧಿಸುವ ಉದ್ದೇಶದಿಂದ ಕರ್ನಾಟಕ ಅಧಿಕ ಬಡ್ಡಿ ನಿಷೇಧ ಅಧಿನಿಯಮ 2024ಕ್ಕೆ ತಿದ್ದುಪಡಿಗೆ ಒಪ್ಪಿಗೆ ನೀಡಲಾಗಿದೆ. ಅದೇ ರೀತಿ ಬಡವರು ಮತ್ತು ದುರ್ಬಲರು ಹಾಗೂ ಸಾರ್ವಜನಿಕರಿಗೆ ತೊಂದರೆ ನೀಡುವ ಗಿರವಿದಾರರು ಗಿರವಿ ಉಲ್ಲಂಘನೆ ಮಾಡಿದರೆ 10 ವರ್ಷ ಶಿಕ್ಷೆ ಮತ್ತು ₹5 ಲಕ್ಷ ದಂಡ ವಿಧಿಸುವ ಉದ್ದೇಶದ ಮಸೂದೆಗೆ ಒಪ್ಪಿಗೆ ನೀಡಲಾಗಿದೆ. ಇವೆರಡನ್ನೂ ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಹೇಳಿದರು.

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರು ಮತ್ತು ಕನ್ನಡ ಪರೀಕ್ಷೆ ಪಾಸಾದವರು ಇನ್ನು ಮುಂದೆ ನಾಗರಿಕ ಸೇವಾ ನೇಮಕಾತಿ ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ಕನ್ನಡ ಪರೀಕ್ಷೆ ಬರೆಯಬೇಕಾಗಿಲ್ಲ ಎಂಬ ನಿಯಮಕ್ಕೂ ಸಭೆ ಒಪ್ಪಿಗೆ ನೀಡಿದೆ.

‘18 ಬಾರಿ ಭಾರತಕ್ಕೆ ಬಂದಿದ್ದ ಪಾಕ್ ಪ್ರಜೆ’

ಗುವಾಹಟಿ (ಪಿಟಿಐ): ‘ಪಾಕಿಸ್ತಾನದ ಪ್ರಜೆ ಅಲಿ ತೌಖೀರ್ ಶೇಖ್ ಈವರೆಗೆ ಭಾರತಕ್ಕೆ 18 ಬಾರಿ ಭೇಟಿ ನೀಡಿದ್ದ ಎಂಬುದು ತನಿಖಾ ತಂಡದ ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ. ಕಾಂಗ್ರೆಸ್ ಸಂಸದ ಗೌರವ್ ಗೊಗೊಯಿ ಅವರ ಬ್ರಿಟಿಷ್ ಮೂಲದ ಪತ್ನಿ ಜೊತೆಗೂ ಈತನಿಗೆ ಸಂಪರ್ಕ ಇತ್ತು ಎನ್ನಲಾಗಿದೆ. ‘ಆತನಿಗೆ ಆಹ್ವಾನ ನೀಡಿದ್ದವರು ಯಾರು? ಭೇಟಿ ಅವಧಿಯಲ್ಲಿ ಆತಿಥ್ಯ ನೀಡಿದ್ದವರು ಯಾರು ಎಂಬುದು ಗೊತ್ತಾಗಬೇಕಾಗಿದೆ’ ಎಂದರು.



ಹಿಮ–ಸಂಭ್ರಮ ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯ ಸೋಲಂಗ್ ಕಣಿವೆಯಲ್ಲಿ ಹಿಮಪಾತ ಆರಂಭವಾಗಿದ್ದು ಪ್ರವಾಸಿಗರು ಸಂಭ್ರಮಿಸುತ್ತಿರುವುದು ಗುರುವಾರ ಕಂಡುಬಂತು –ಪಿಟಿಐ ಚಿತ್ರ

ವರ್ಷಕ್ಕೆ ಎರಡು ಪರೀಕ್ಷೆ: ಚರ್ಚೆಗೆ ನಿರ್ಧಾರ

ನವದೆಹಲಿ: 2026–27ರ ಶೈಕ್ಷಣಿಕ ವರ್ಷದಿಂದ ಸಿಬಿಎಸ್‌ಇ ಬೋರ್ಡ್ ಪರೀಕ್ಷೆಯನ್ನು ವರ್ಷಕ್ಕೆ ಎರಡು ಬಾರಿ ನಡೆಸುವ ಬಗ್ಗೆ ಶಿಕ್ಷಣ ಸಚಿವಾಲಯವು ಸಂಬಂಧಪಟ್ಟ ಭಾಗೀದಾರರೊಂದಿಗೆ ಸಮಾಲೋಚನೆ ನಡೆಸಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಗುರುವಾರ ಹೇಳಿದ್ದಾರೆ.

‘ವರ್ಷಕ್ಕೆ ಎರಡು ಬಾರಿ ಪರೀಕ್ಷೆ ನಡೆಸುವ ಕುರಿತು ಶಿಕ್ಷಣ ಸಚಿವಾಲಯವು ಶಾಲಾ ಶಿಕ್ಷಣ ಕಾರ್ಯದರ್ಶಿ, ಸಿಬಿಎಸ್‌ಇ ಅಧ್ಯಕ್ಷರು ಮತ್ತು ಅಧಿಕಾರಿ ಗಳೊಂದಿಗೆ ಚರ್ಚೆ ನಡೆಸಿದೆ’ ಎಂದು ತಿಳಿಸಿದ್ದಾರೆ.

ಸಿಬಿಎಸ್‌ಇ ಬೋರ್ಡ್ ಪರೀಕ್ಷೆಗಳನ್ನು ನವೆಂಬರ್–ಡಿಸೆಂಬರ್ ಮತ್ತು ಫೆಬ್ರುವರಿ– ಮಾರ್ಚ್‌ನಲ್ಲಿ ನಡೆಸುವ ಪ್ರಸ್ತಾವವನ್ನು ಸಚಿವಾಲಯವು ಮುಂದಿಟ್ಟಿದೆ.ಅಂತಿಮ ಫಲಿತಾಂಶಕ್ಕಾಗಿ ಎರಡು ಪರೀಕ್ಷೆಗಳಲ್ಲಿ ಪಡೆದ ಉತ್ತಮ ಅಂಕಗಳನ್ನು ಪರಿಗಣಿಸಲಾಗುತ್ತದೆ.

ಪ್ರತಿಯೊಬ್ಬ ದಲಿತನೂ ಅಂಬೇಡ್ಕರ್: ರಾಹುಲ್

ಪಿಟಿಐ/ ಪ್ರಜಾವಾಣಿ ವಾರ್ತೆ



ರಾಯಬರೇಲಿ: ದೇಶದ ಸಂವಿಧಾನ ರಚನೆಯಲ್ಲಿ ದಲಿತರ ಕೊಡುಗೆ ಅಪಾರ ಎಂದು ಶ್ಲಾಘಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ‘ದೇಶದ ಪ್ರತಿಯೊಬ್ಬ ದಲಿತನೂ ಅಂಬೇಡ್ಕರ್. ಇಲ್ಲಿನ ಸಂವಿಧಾನವು ನಿಮ್ಮ ಚಿಂತನೆ, ವಿಚಾರ ಮತ್ತು ಸಿದ್ಧಾಂತವನ್ನೇ ಆಧರಿಸಿದೆ. ಆದರೆ ನೀವು ಇಂದು ಎಲ್ಲಿಗೇ ಹೋದರು ವ್ಯವಸ್ಥೆ ನಿಮ್ಮನ್ನು ಹತ್ತಿಕ್ಕುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಬರ್ಗಡ್ ಚೌರಾಹಾ ಬಳಿಯ ‘ಮೂಲ ಭಾರತಿ’ ಹಾಸ್ಟೆಲ್‌ನ ದಲಿತ ವಿದ್ಯಾರ್ಥಿಗಳ ಗುಂಪನ್ನು ಉದ್ದೇಶಿಸಿ ಮಾತನಾಡಿದರು.

‘ಸಂವಿಧಾನವನ್ನು ನಿರುಪಯುಕ್ತಗೊಳಿಸುವ ಹುನ್ನಾರ ನಡೆಯುತ್ತಿದ್ದು ಅದಕ್ಕೆ ಅವಕಾಶ ನೀಡಬಾರದು. ಸಂವಿಧಾನವನ್ನು ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿ’ ಎಂದು ಅವರು ಕರೆ ನೀಡಿದರು.

‘ದಲಿತ ಸಮುದಾಯದವರು ಸಹಸ್ರಾರು ವರ್ಷಗಳಿಂದ ತಾರತಮ್ಯ ಎದುರಿಸುತ್ತಿದ್ದಾರೆ. ಇದನ್ನೆಲ್ಲ ಗಮನದಲ್ಲಿ ಇಟ್ಟುಕೊಂಡೇ ಅಂಬೇಡ್ಕರ್ ಅವರು ಸಂವಿಧಾನ ಸಿದ್ಧಪಡಿಸಿದ್ದಾರೆ. ಆ ಮೂಲಕ ದಲಿತರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ’ ಎಂದರು.

ಖಾಸಗಿ ವಲಯದಲ್ಲಿ ಮುಂಚೂಣಿಯಲ್ಲಿರುವ 500 ಕಂಪನಿಗಳಲ್ಲಿ ದಲಿತ ಸಮುದಾಯದ ಎಷ್ಟು ಮಂದಿ ಚುಕ್ಕಾಣಿ ಹಿಡಿದಿದ್ದಾರೆ ಎಂದು ರಾಹುಲ್ ಇದೇ ವೇಳೆ ಪ್ರಶ್ನಿಸಿದರು.

ಸಭೆಯಲ್ಲಿದ್ದ ಯುವಕನೊಬ್ಬ ‘ಯಾರೂ ಇಲ್ಲ’ ಎಂದು ಉತ್ತರಿಸಿದಾಗ, ರಾಹುಲ್ ಅವರು ‘ಏಕಿಲ್ಲ’ ಎಂದು ಮರು ಪ್ರಶ್ನೆ ಹಾಕಿದರು. ‘ಏಕೆಂದರೆ, ನಮ್ಮ ಬಳಿ ಅಗತ್ಯ ಸೌಲಭ್ಯವಿಲ್ಲ’ ಎಂದು ಮತ್ತೊಬ್ಬ ಯುವಕನಿಂದ ಉತ್ತರ ಬಂದಿತು.

ಇದನ್ನು ಒಪ್ಪದ ರಾಹುಲ್, ‘ಅಂಬೇಡ್ಕರ್ ಅವರ ಬಳಿ ಯಾವುದೇ ಸೌಲಭ್ಯಗಳು ಇರಲಿಲ್ಲ. ಅವರು ಒಬ್ಬರೇ ಪ್ರಯತ್ನಿಸಿ, ದೇಶದ ರಾಜಕೀಯವನ್ನೇ ಅಲುಗಾಡಿಸಿದರು’ ಎಂದರು.

‘ಕೈ’ ಜೋಡಿಸದ ಮಾಯಾವತಿ’

‘ಕಳೆದ ಲೋಕಸಭಾ ಚುನಾವಣೆಲ್ಲಿ ಬಿಜೆಪಿ ವಿರುದ್ಧ ಹೋರಾಟ ನಡೆಸಲು ಮಾಯಾವತಿ ಅವರು ನಮ್ಮೊಂದಿಗಿರಬೇಕು ಎಂದು ನಾವು ಬಯಸಿದ್ದೆವು. ನಾವು ಒಟ್ಟಿಗೆ ಚುನಾವಣೆ ಎದುರಿಸಿದ್ದರೆ ಬಿಜೆಪಿ ಯಾವುದೇ ಕಾರಣಕ್ಕೆ ಅಧಿಕಾರಕ್ಕೆ ಬರುತ್ತಿರಲಿಲ್ಲ’ ಎಂದು ರಾಹುಲ್ ಅಭಿಪ್ರಾಯಪಟ್ಟರು.

ರಾಹುಲ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ, ‘ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿ ಇದ್ದರೆ, ಅದು ನಮ್ಮೊಂದಿಗೆ ಹಗೆತನ ಸಾಧಿಸುತ್ತದೆ. ಅದಕ್ಕೆ ಜಾತಿವಾದದ ಮುಖವಾಡವಿದೆ’ ಎಂದಿದ್ದಾರೆ.

ಪರಿಷತ್: ಮತ ಮರು ಎಣಿಕೆಗೆ ತಯಾರಿ

ಒಂದನೇ ಪುಟದಿಂದ...

ಚುನಾವಣಾ ಆಯೋಗದ ಸೂಚನೆಯಂತೆ ಫಲಿತಾಂಶ ಪ್ರಕಟಿಸಿ, ಪ್ರಾಣೇಶ್ ಗೆಲುವು ಸಾಧಿಸಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಘೋಷಿಸಿದ್ದರು.

ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ಮೂಡಿಗೆರೆ ಪಟ್ಟಣ ಪಂಚಾಯಿತಿಗಳ ಒಟ್ಟು 12 ನಾಮನಿರ್ದೇಶಿತ ಸದಸ್ಯರು ಮತದಾನ ಮಾಡಿದ್ದರು. ಅವರಿಗೆ ಮತದಾನ ಮಾಡಲು ಅವಕಾಶ ಇಲ್ಲ ಎಂದು ಗಾಯತ್ರಿ ಶಾಂತೇಗೌಡ ನ್ಯಾಯಾಲಯದ ಮೆಟ್ಟಿಲೇರಿದ್ದರು. 12 ಸದಸ್ಯರ ಮತಗಳನ್ನು ಪ್ರತ್ಯೇಕವಾಗಿ ಇರಿಸಿ ಮರು ಎಣಿಕೆ ಮಾಡಿ ವರದಿ ಕಳಹಿಸುವಂತೆ ನ್ಯಾಯಾಲಯ ಸೂಚನೆ ನೀಡಿದೆ.

30 ದಿನಗಳಲ್ಲಿ ಮರು ಎಣಿಕೆ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕಿದ್ದು, ಫೆ.27ರೊಳಗೆ ಮತ ಎಣಿಕೆ ಕಾರ್ಯ ಪೂರ್ಣಗೊಳ್ಳಬೇಕಿದೆ. ಇದಕ್ಕಾಗಿ ಜಿಲ್ಲಾಡಳಿತ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದು, ಒಂದು ವಾರದಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ವಿಧಾನ ಪರಿಷತ್ ಚುನಾವಣೆ ಆಗಿರುವುದರಿಂದ ವಿದ್ಯುನ್ಮಾನ ಮತಯಂತ್ರ ಬಳಸಿರಲಿಲ್ಲ. ಮತಪತ್ರಗಳು ಖಜಾನೆಯಲ್ಲಿ ಭದ್ರವಾಗಿದ್ದು, ಅವುಗಳನ್ನು ಮತ್ತೆ ತೆಗೆದು ಎಣಿಕೆ ಮಾಡಬೇಕಿದೆ. ಮತ ಎಣಿಕೆ ಪೂರ್ಣಗೊಳಿಸಿ ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಜಿಲ್ಲಾಡಳಿತ ವರದಿ ಸಲ್ಲಿಸಲಿದೆ. ವಿಜೇತರು ಯಾರು ಎಂಬುದನ್ನು ಹೈಕೋರ್ಟ್ ಮುಂದಿನ ಆದೇಶದಲ್ಲಿ ಘೋಷಣೆ ಮಾಡುವ ಸಾಧ್ಯತೆ ಇದೆ ಎಂಬುದು ಮೂಲಗಳ ಮಾಹಿತಿ.

ಮೂರು ವರ್ಷಗಳ ಹಿಂದೆ ವಿಜೇತರು ಎಂದು ಘೋಷಣೆಯಾಗಿರುವ ಎಂ.ಕೆ.ಪ್ರಾಣೇಶ್ ಅವರು ಸದ್ಯ ವಿಧಾನ ಪರಿಷತ್ ಉಪಸಭಾಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮರು ಎಣಿಕೆ ಹೇಗೆ

ಮರು ಮತ ಎಣಿಕೆ ಕಾರ್ಯ ಹೇಗೆ ನಡೆಸಬೇಕು ಎಂಬುದರ ಕುರಿತು ಚುನಾವಣಾ ಆಯೋಗದ ಮಾರ್ಗಸೂಚಿಗಾಗಿ ಜಿಲ್ಲಾಡಳಿತ ಕಾದಿದೆ.

ಫಲಿತಾಂಶ ಘೋಷಣೆಯಾಗಿ ಮೂರು ವರ್ಷಗಳ ಬಳಿಕ ನ್ಯಾಯಾಲಯದ ನಿರ್ದೇಶನದ ಮೇರೆಗೆ ಮರು ಎಣಿಕೆ ನಡೆಯುತ್ತಿರುವುದು ವಿಶೇಷ. ಯಾವ ಮಾರ್ಗಸೂಚಿ ಪಾಲಿಸಬೇಕು ಎಂಬುದರ ಕುರಿತು ಚುನಾವಣಾ ಆಯೋಗದ ಮಾರ್ಗದರ್ಶನ ಮುಖ್ಯ ಎಂದು ಜಿಲ್ಲಾಡಳಿತದ ಮೂಲಗಳು ಹೇಳಿವೆ.

ಮಾರ್ಗಸೂಚಿ ಬಂದ ಕೂಡಲೇ ಅಭ್ಯರ್ಥಿಗಳಿಗೆ ನೋಟಿಸ್ ಜಾರಿ ಮಾಡಿ ಪ್ರಕ್ರಿಯೆ ಆರಂಭಿಸಲಾಗುತ್ತದೆ. ವಾರದಲ್ಲಿ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡು ನ್ಯಾಯಾಲಯಕ್ಕೆ ವರದಿ ಸಲ್ಲಿಕೆಯಾಗಲಿದೆ. ಶುಕ್ರವಾರ ಬೆಳಿಗ್ಗೆ ವೇಳೆಗೆ ಮಾರ್ಗಸೂಚಿ ದೊರಕಲಿದ್ದು, ಬಹುತೇಕ ಸಂಜೆ ವೇಳೆಗೆ ಎಲ್ಲಾ ಅಭ್ಯರ್ಥಿಗಳಿಗೆ ನೋಟಿಸ್ ಜಾರಿಯಾಗುವ ಸಾಧ್ಯತೆ ಇದೆ ಎಂದು ತಿಳಿಸಿವೆ.

ಕಾಂಗ್ರೆಸ್‌ನಿಂದ ಎ.ವಿ.ಗಾಯತ್ರಿ ಶಾಂತೇಗೌಡ, ಬಿಜೆಪಿಯಿಂದ ಎಂ.ಕೆ. ಪ್ರಾಣೇಶ್, ಆಮ್ ಆದ್ಮಿ ಪಕ್ಷದಿಂದ ಡಾ.ಕೆ.ಸುಂದರಗೌಡ, ಪಕ್ಷೇತರರಾಗಿ ಬಿ.ಟಿ.ಚಂದ್ರಶೇಖರ, ಜಿ.ಐ.ರೇಣುಕುಮಾರ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದರು. ಎಲ್ಲರಿಗೂ ನೋಟಿಸ್ ಜಾರಿಯಾಗಲಿದ್ದು, ಅಭ್ಯರ್ಥಿಗಳ ಸಮ್ಮುಖದಲ್ಲೇ ಮತ ಎಣಿಕೆ ನಡೆಯಲಿದೆ.

ದೆಹಲಿಯಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ: ಮುಖ್ಯಮಂತ್ರಿ ಹಾಗೂ ಆರು ಸಚಿವರ ಪ್ರಮಾಣವಚನ ಸ್ವೀಕಾರ

ಕಮಲ ಸಂಪುಟದಲ್ಲಿ ‘ಸಮತೋಲನ’ಕ್ಕೆ ಒತ್ತು

ಪ್ರಜಾವಾಣಿ ವಾರ್ತೆ

ಸಚಿವರ ಪ್ರವರ					
	1 ಗಂಭೀರ ಕ್ರಿಮಿನಲ್ ಪ್ರಕರಣ ಹೊಂದಿರುವವರ ಸಂಖ್ಯೆ	₹56.03 ಕೋಟಿ ಸರಾಸರಿ ಆಸ್ತಿ	₹248.85 ಕೋಟಿ ಮಂಜಿಂದರ್ ಸಿಂಗ್ ಸಿರ್ಸಾ ಅತ್ಯಂತ ಶ್ರೀಮಂತ	₹1.06 ಕೋಟಿ ಕಪಿಲ್ ಮಿಶ್ರಾ ಕಡಿಮೆ ಆಸ್ತಿ	6 ಪದವೀಧರರು

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ 27 ವರ್ಷಗಳ ಬಳಿಕ ಅಧಿಕಾರದ ಗದ್ದುಗೆ ಹಿಡಿದಿರುವ ಕಮಲ ಪಾಳಯವು ನೂತನ ಸಂಪುಟದ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಶಕ್ತಿ ಹಾಗೂ ಒಗ್ಗಟ್ಟು ಪ್ರದರ್ಶನದ ವೇದಿಕೆಯನ್ನಾಗಿ ಪರಿವರ್ತಿಸಿತು. ರಾಮಲೀಲಾ ಮೈದಾನದಲ್ಲಿ ಗುರುವಾರ ನಡೆದ ಅದ್ದೂರಿ ಸಮಾರಂಭದಲ್ಲಿ ನೂತನ ಮುಖ್ಯಮಂತ್ರಿ ರೇಖಾ ಗುಪ್ತಾ ಹಾಗೂ ಸಂಪುಟದ ಆರು ಸಚಿವರು ಪ್ರಮಾಣವಚನ ಸ್ವೀಕರಿಸಿದರು.

ಸುಮಾರು 50 ಸಾವಿರ ಜನರು ಸೇರಿದ್ದ ಈ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿಯ ಉನ್ನತ ನಾಯಕರು ಮತ್ತು ಎನ್‌ಡಿಎ ನಾಯಕರು ಭಾಗವಹಿಸಿದ್ದರು. ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಗೋವಾದ ಪ್ರಮೋದ್ ಸಾವಂತ್, ಹರಿಯಾಣದ ನಾಯಬ್ ಸಿಂಗ್ ಸೈನಿ ಮತ್ತು ಮೇಘಾಲಯದ ಕಾನ್ರಾಡ್ ಸಂಗ್ಮಾ ಪಾಲ್ಗೊಂಡಿದ್ದರು. ಅರವಿಂದ ಕೇಜ್ರಿವಾಲ್, ಅತಿಶಿ ಸೇರಿದಂತೆ ಎಎಪಿಯ ಯಾವುದೇ ನಾಯಕರು ಸಮಾರಂಭದಲ್ಲಿ ಭಾಗಿಯಾಗಲಿಲ್ಲ.

ರೇಖಾ ಗುಪ್ತಾ ಅವರು ದೆಹಲಿಯ ಒಂಬತ್ತನೇ ಮುಖ್ಯಮಂತ್ರಿ. ಮಹಿಳೆಯರಲ್ಲಿ ಈ ಗಾದಿಗೆ ಏರಿದವರಲ್ಲಿ ನಾಲ್ಕನೆಯವರು. ಎನ್‌ಡಿಎ ಮೈತ್ರಿಕೂಟದ ಏಕೈಕ ಮಹಿಳಾ ಮುಖ್ಯಮಂತ್ರಿ. ಪ್ರಸ್ತುತ ದೇಶದಲ್ಲಿರುವ ಎರಡನೇ ಮಹಿಳಾ ಮುಖ್ಯಮಂತ್ರಿ. ಮತ್ತೊಬ್ಬರು ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ.

ನೂತನ ಸಂಪುಟದಲ್ಲಿ ಬಿಜೆಪಿಯು ಎಲ್ಲ ಪ್ರಮುಖ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡುವ ಪ್ರಯತ್ನ ಮಾಡಿದೆ. ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರನ್ನು ಸೋಲಿಸಿರುವ ಪರ್ವೇಶ್ ವರ್ಮಾ, ಪ್ರಬಲ ಹಿಂದುತ್ವದ ಪ್ರತಿಪಾದಕ ಕಪಿಲ್ ಮಿಶ್ರಾ, ಬಿಜೆಪಿಯ ಸಿಖ್ ಮುಖ ಮಂಜಿಂದರ್ ಸಿಂಗ್ ಸಿರ್ಸಾ, ಹಿರಿಯ ನಾಯಕ ಆಶಿಶ್ ಸೂದ್, ರವೀಂದರ್ ಇಂದ್ರಜ್ ಸಿಂಗ್ ಮತ್ತು ಪಂಕಜ್ ಸಿಂಗ್ ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ. ಗುಪ್ತಾ ಅವರು ವೈಶ್ಯ ಸಮುದಾಯಕ್ಕೆ ಸೇರಿದವರಾಗಿದ್ದು, ಸಚಿವರಲ್ಲಿ ಜಾಟ್, ಸಿಖ್, ದಲಿತ, ಬ್ರಾಹ್ಮಣ, ಪಂಜಾಬಿಗಳು ಇದ್ದಾರೆ. ಇಬ್ಬರು ಪೂರ್ವಾಂಚಲಿಗಳು.



ದೆಹಲಿ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ರೇಖಾ ಗುಪ್ತಾ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಮಸ್ಕರಿಸಿದರು –ಪಿಟಿಐ ಚಿತ್ರ

5 – 41ರಿಂದ 50 ವರ್ಷದವರು
2 – 51ರಿಂದ 60 ವರ್ಷದವರು

ಆರು ಸಚಿವರನ್ನು ಸಂಪುಟಕ್ಕೆ ಸೇರ್ಪಡೆ ಮಾಡುವಾಗ ಪಕ್ಷವು ಹಲವಾರು ಅಂಶಗಳನ್ನು ಪರಿಗಣಿಸಿದೆ. ಹಿರಿಯ ನಾಯಕರಾದ ವಿಜೇಂದರ್ ಗುಪ್ತಾ ಮತ್ತು ಮೋಹನ್ ಸಿಂಗ್ ಬಿಸ್ತ್ ಮುಂದಿನ ಸಭಾಧ್ಯಕ್ಷ ಹಾಗೂ ಉಪಸಭಾಧ್ಯಕ್ಷರಾಗುವ ಸಾಧ್ಯತೆ ಇದೆ.

ನೂತನ ಮುಖ್ಯಮಂತ್ರಿಯನ್ನು ಅಭಿನಂದಿಸಿದ ನರೇಂದ್ರ ಮೋದಿ, ‘ಬಿಜೆಪಿ ಸರ್ಕಾರವು ನಗರದ ಅಭಿವೃದ್ಧಿಗೆ ಸಂಪೂರ್ಣ ಹುರುಪಿನಿಂದ ಕೆಲಸ ಮಾಡಲಿದೆ’ ಎಂದರು.

ರೇಖಾ ಗುಪ್ತಾ ಮಾತನಾಡಿ, ‘ಅರ್ಹ ಮಹಿಳೆಯರಿಗೆ ತಿಂಗಳಿಗೆ ₹2,500 ನೆರವು ನೀಡುವ ಭರವಸೆಯನ್ನು ನಮ್ಮ ಸರ್ಕಾರ ಈಡೇರಿಸಲಿದೆ. ಮೊದಲ ಕಂತನ್ನು ಮಾರ್ಚ್ 8ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಜಮಾ ಮಾಡಲಾಗುತ್ತದೆ. ಜತೆಗೆ, ಕಳೆದ 10 ವರ್ಷಗಳಲ್ಲಿನ ಎಎಪಿ ಸರ್ಕಾರದ ಅಕ್ರಮಗಳನ್ನು ಪತ್ತೆ ಹಚ್ಚಿ ಹೊಣೆಗಾರರನ್ನಾಗಿ ಮಾಡಲಾಗುವುದು’ ಎಂದರು. ‘ಪ್ರತಿ ಪೈಸೆಗೂ ಅವರು ಜನರಿಗೆ ಲೆಕ್ಕ ನೀಡಬೇಕಾಗುತ್ತದೆ’ ಎಂದರು.

‘ಮೋದಿ ಅವರ ಕನಸನ್ನು ನನಸಾಗಿಸುವುದು ನಮ್ಮ ಜವಾಬ್ದಾರಿ’ ಎಂದರು. ನಂತರ ಅವರು ಸಚಿವಾಲಯದಲ್ಲಿ ಅಧಿಕಾರ ವಹಿಸಿ ಕೊಂಡರು. ಗುಪ್ತಾ ಹಾಗೂ ಸಂಪುಟದ ಸದಸ್ಯರು ವಾಸುದೇವ್ ಘಾಟ್‌ನಲ್ಲಿ 'ಯಮುನಾ ಆರತಿ' ಮಾಡಿದರು.

ಭಾರತದಲ್ಲಿ ಬೇರೊಬ್ಬರ ಸರ್ಕಾರ ಬಯಸಿದ್ದ ಬೈಡನ್ ಆಡಳಿತ: ಟ್ರಂಪ್

ಕಾಂಗ್ರೆಸ್, ಬಿಜೆಪಿ ಮಧ್ಯೆ ವಾಕ್ಸಮರ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಅಂತರರಾಷ್ಟ್ರೀಯ ಅಭಿವೃದ್ಧಿಗಾಗಿನ ಅಮೆರಿಕದ ಏಜೆನ್ಸಿಯು (ಯುಎಸ್‌ಏಡ್) ಭಾರತಕ್ಕೆ ನೀಡಿರುವ ನೆರವಿನ ವಿಚಾರವಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟಂಪ್ ಆಡಿರುವ ಮಾತುಗಳು ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಗುರುವಾರ ವಾಕ್ಸಮರಕ್ಕೆ ಕಾರಣವಾಗಿವೆ.

ಟ್ರಂಪ್ ಹೇಳಿಕೆಯನ್ನು ಕಾಂಗ್ರೆಸ್, ‘ಅಸಂಬದ್ಧ’ ಎಂದು ಟೀಕಿಸಿದೆ. ‘ರಾಹುಲ್ ಗಾಂಧಿ ಅವರು ವಿದೇಶಿ ಶಕ್ತಿಗಳಿಗೆ ನೆರವಾಗುತ್ತಿದ್ದಾರೆ ಎಂಬುದನ್ನು ಟ್ರಂಪ್ ಹೇಳಿಕೆ ದೃಢಪಡಿಸಿದೆ’ ಎಂದು ಬಿಜೆಪಿ ದೂರಿದೆ. ‘ಜೋ ಬೈಡನ್ (ಅಮೆರಿಕದ ಹಿಂದಿನ ಅಧ್ಯಕ್ಷ) ಆಡಳಿತವು ಭಾರತದಲ್ಲಿ ಬೇರೊಂದು ಸರ್ಕಾರವನ್ನು ಆಯ್ಕೆ ಮಾಡಲು ಬಯಸಿತ್ತು ಎಂದು ಟ್ರಂಪ್ ಹೇಳಿದ್ದಾರೆ. ಇದರ ಬೆನ್ನಲ್ಲೇ ಕಾಂಗ್ರೆಸ್ ಪ್ರತಿಕ್ರಿಯೆ ಹೊರಬಿದ್ದಿದೆ.

‘1961ರ ನ. 3ರಂದು ಸ್ಥಾಪಿಸಲಾದ ಯುಎಸ್‌ಏಡ್ ಇತ್ತೀಚಿನ ದಿನಗಳಲ್ಲಿ ಹೆಚ್ಚು ಸುದ್ದಿಯಲ್ಲಿದೆ ಮತ್ತು ಅಮೆರಿಕದ ಅಧ್ಯಕ್ಷರು ಆ ಏಜೆನ್ಸಿಗೆ ಸಂಬಂಧಿಸಿದಂತೆ ಅವಿವೇಕದ ಹೇಳಿಕೆ ನೀಡಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ದೇಶದಲ್ಲಿನ ಸರ್ಕಾರಿ ಮತ್ತು ಎನ್‌ಜಿಒಗಳಿಗೆ ಯುಎಸ್‌ಏಡ್ ನೀಡಿರುವ ನೆರವಿನ ಬಗ್ಗೆ ಸರ್ಕಾರ ಶ್ವೇತಪತ್ರ ಹೊರಡಿಸುವಂತೆ ಒತ್ತಾಯಿಸಿದ್ದಾರೆ.

> **ಭಾರತದ ಚುನಾವಣೆ ಮೇಲೆ ಪ್ರಭಾವ ಬೀರಿ, ಮೋದಿ ಬದಲು ಇನ್ನೊಬ್ಬರ ಆಯ್ಕೆಗೆ ಪ್ರಯತ್ನ ನಡೆದಿತ್ತು ಎಂಬುದನ್ನು ಟ್ರಂಪ್ ಹೇಳಿಕೆ ಖಚಿತಪಡಿಸಿದೆ**
> **ಅಮಿತ್ ಮಾಳವೀಯ**
> ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ

ಆರೋಪ: ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಷ್ಟ್ರದ ಹಿತಾಸಕ್ತಿಗಳನ್ನು ಹಾಳುಮಾಡಲು ಬಯಸುತ್ತಿರುವ ವಿದೇಶಿ ಶಕ್ತಿಗಳಿಗೆ ನೆರವು ನೀಡುತ್ತಿದ್ದಾರೆ’ ಎಂದು ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಆರೋಪಿಸಿದ್ದಾರೆ.

ತಾವು ಮತ್ತೆ ಅಧಿಕಾರಕ್ಕೆ ಬರುವುದನ್ನು ತಡೆಯಲು ವಿದೇಶಿ ಶಕ್ತಿಗಳು ಪ್ರಯತ್ನಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2024ರ ಲೋಕಸಭಾ ಚುನಾವಣೆ ವೇಳೆ ಪ್ರತಿಪಾದಿಸಿದ್ದರು. ಟ್ರಂಪ್ ಈಗ ನೀಡಿರುವ ಹೇಳಿಕೆ ಪ್ರಧಾನಿ ಅವರ ಮಾತನ್ನು ‘ದೃಢೀಕರಿಸಿದೆ’ ಎಂದು ಹೇಳಿದ್ದಾರೆ.

ಟ್ರಂಪ್ ಹೇಳಿದ್ದು ಏನು?

ನ್ಯೂಯಾರ್ಕ್: ಮಯಾಮಿಯಲ್ಲಿ ಗುರುವಾರ ನಡೆದ ಎಫ್‌ಐಐ ಪ್ರಿಯಾರಿಟಿ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಬೈಡನ್ ಆಡಳಿತವು ಭಾರತದಲ್ಲಿ ಬೇರೊಂದು ಸರ್ಕಾರವನ್ನು ಆಯ್ಕೆ ಮಾಡಲು ಬಯಸಿತ್ತು’ ಎಂದು ಹೇಳಿದ್ದಾರೆ.

ಭಾರತಕ್ಕೆ ನೀಡುತ್ತಿದ್ದ ₹182 ಕೋಟಿ (2.1 ಕೋಟಿ ಡಾಲರ್) ಆರ್ಥಿಕ ನೆರವನ್ನು ಸ್ಥಗಿತಗೊಳಿಸುವ ಅಮೆರಿಕದ ನಿರ್ಧಾರವನ್ನು ಸಮರ್ಥಿಸಿಕೊಳ್ಳುವಾಗ ಅವರು ಈ ಹೇಳಿಕೆ ನೀಡಿದ್ದಾರೆ.

‘ಭಾರತದಲ್ಲಿ ಮತದಾನ ಹೆಚ್ಚಿಸಲು ನಾವೇಕೆ 2.1 ಕೋಟಿ ಡಾಲರ್ ಖರ್ಚು ಮಾಡಬೇಕು? ಬಹುಶಃ ಅವರು (ಬೈಡನ್ ಆಡಳಿತ) ಭಾರತದಲ್ಲಿ ಬೇರೆ ಯಾರನ್ನೋ ಆಯ್ಕೆ ಮಾಡಲು ಪ್ರಯತ್ನಿಸುತ್ತಿದ್ದರು ಎಂದು ನಾನು ಭಾವಿಸುತ್ತೇನೆ. ಭಾರತ ಸರ್ಕಾರದೊಂದಿಗೆ ಈ ಮಾಹಿತಿ ಹಂಚಿಕೊಳ್ಳಬೇಕಾಗಿದೆ’ ಎಂದು ಹೇಳಿದ್ದಾರೆ.

‘ಅಮೆರಿಕ ನೆರವು ನಿಧಿ; ಕಾಂಗ್ರೆಸ್ ಉತ್ತರಿಸಲಿ’

ಹುಬ್ಬಳ್ಳಿ: ‘ಭಾರತದಲ್ಲಿ ಮತದಾನದ ಪ್ರಮಾಣ ವೃದ್ಧಿಸಲು ಅಮೆರಿಕದ ನೆರವು ನಿಧಿ (ಯುಎಸ್‌ಎಐಡಿ) ಮೂಲಕ 21 ಮಿಲಿಯನ್ ಡಾಲರ್ ಆರ್ಥಿಕ ನೆರವು ನೀಡಲಾಗುತಿತ್ತು ಎಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ಕಾಂಗ್ರೆಸ್ ಉತ್ತರಿಸಬೇಕು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು.



ಪ್ರಲ್ಹಾದ ಜೋಶಿ

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,‘ಟ್ರಂಪ್ ಹೇಳಿಕೆಗೆ ಅಮೆರಿಕ ಮತ್ತು ಭಾರತದಲ್ಲಿರುವ ಕೆಲವರು ವ್ಯತಿರಿಕ್ತವಾಗಿ ಪ್ರತಿಕ್ರಿಯೆ ಹಾಗೂ ವರದಿ ನೀಡುತ್ತಿದ್ದಾರೆ. ಯಾರ ಪ್ರೇರಣೆಯಿಂದ ಅಷ್ಟೊಂದು ಹಣ ಬರುತ್ತಿತ್ತು? ಇದರಲ್ಲಿ ಯಾರು ಹಸ್ತಕ್ಷೇಪ ಮಾಡುತ್ತಿದ್ದರು ಎನ್ನುವುದು ಕಾಂಗ್ರೆಸ್‌ಗೆ ಸಂಪೂರ್ಣ ಮಾಹಿತಿಯಿದೆ. ಬೇರೆ ದೇಶದ ಬೆಂಬಲ ಪಡೆದು, ದೇಶದ ಚುನಾವಣಾ ವ್ಯವಸ್ಥೆ ಬುಡಮೇಲು ಮಾಡಲು ಮುಂದಾಗಿರುವ ಕಾಂಗ್ರೆಸ್ ಕ್ಷಮೆ ಕೇಳಬೇಕು’ ಎಂದರು.

ಮನೆಯಲ್ಲಿ ತಾಯಿ ಕೂಡಿ ಹಾಕಿ ಮಹಾ ಕುಂಭಕ್ಕೆ ತೆರಳಿದ ಮಗ

ರಾಮಗಢ (ಜಾರ್ಖಂಡ್) (ಪಿಟಿಐ): ಅನಾರೋಗ್ಯದಿಂದ ಬಳಲುತ್ತಿರುವ ತಾಯಿಯನ್ನು ಕೋಣೆಯೊಂದರಲ್ಲಿ ಕೂಡಿ ಹಾಕಿರುವ ಒಬ್ಬ ವ್ಯಕ್ತಿ, ಪುಣ್ಯ ಸ್ನಾನಕ್ಕಾಗಿ ಪತ್ನಿ, ಮಕ್ಕಳು ಹಾಗೂ ಅತ್ತೆ–ಮಾವನ ಜೊತೆ ಮಹಾ ಕುಂಭಕ್ಕೆ ತೆರಳಿರುವ ಘಟನೆ ನಡೆದಿದೆ.

‘ಸೆಂಟ್ರಲ್ ಕೋಲ್‌ಫೀಲ್ಡ್ಸ್ ಲಿಮಿಟೆಡ್ (ಸಿಸಿಎಲ್) ನೌಕರ ಅಖಿಲೇಶಕುಮಾರ್, ತಾಯಿಯನ್ನು ಮನೆಯಲ್ಲಿ ಕೂಡಿ ಹಾಕಿ ಪ್ರಯಾಗರಾಜ್‌ಗೆ ತೆರಳಿದ್ದಾನೆ’ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ರಾಮಗಢ ಪೊಲೀಸ್ ಠಾಣೆ ವ್ಯಾಪ್ತಿಯ ಸುಭಾಷ್‌ನಗರ ಕಾಲೊನಿಯಲ್ಲಿರುವ ಸಿಸಿಎಲ್‌ನ ಕ್ವಾರ್ಟರ್ಸ್‌ವೊಂದರಿಂದ, ಅಖಿಲೇಶಕುಮಾರ್ ತಾಯಿ, 65 ವರ್ಷದ ಸಂಜುದೇವಿ ಅವರನ್ನು ಬುಧವಾರ ರಕ್ಷಿಸಲಾಗಿದೆ ಎಂದು ರಾಮಗಢ ಪೊಲೀಸ್ ಅಧಿಕಾರಿ ಪರಮೇಶ್ವರ ಪ್ರಸಾದ್ ತಿಳಿಸಿದ್ದಾರೆ.

‘ತಾಯಿಯನ್ನು ಮನೆಯಲ್ಲಿ ಸೋಮವಾರದಿಂದ ಕೂಡಿ ಹಾಕಿರುವ ಕುರಿತು ಮಗಳು ಚಾಂದಿನಿದೇವಿ ನೀಡಿದ ಮಾಹಿತಿ ಆಧರಿಸಿ, ಸಂಜು ದೇವಿ ಅವರನ್ನು ರಕ್ಷಿಸಲಾಗಿದೆ’ ಎಂದು ಪರಮೇಶ್ವರ ಪ್ರಸಾದ್ ತಿಳಿಸಿದ್ದಾರೆ.

ಚಾಂದಿನಿದೇವಿ ಅವರು ಸಿಸಿಎಲ್ ವಸತಿಗೃಹಗಳಿಂದ ಐದು ಕಿ.ಮೀ. ದೂರದಲ್ಲಿರುವ ಊರಿನಲ್ಲಿ ವಾಸಿಸುತ್ತಿದ್ದಾರೆ. ತಾಯಿಯನ್ನು ಮನೆಯಲ್ಲಿ ಕೂಡಿ ಹಾಕಿ, ಎಲ್ಲರೂ ಪ್ರಯಾಗರಾಜ್‌ಗೆ ತೆರಳಿದ್ದರ ಕುರಿತು ನೆರೆಹೊರೆಯವರು ಅವರಿಗೆ ಮಾಹಿತಿ ನೀಡಿದ್ದರು.

‘ಮನೆ ಬೀಗ ಒಡೆದು ರಕ್ಷಿಸಿದ ಕೂಡಲೇ, ತಾಯಿಗೆ ನೆರೆಹೊರೆಯವರು ಊಟ ನೀಡಿದರು. ನಂತರ ಅವರನ್ನು ಸಿಸಿಎಲ್ ಆಸ್ಪತ್ರೆಗೆ ದಾಖಲಿಸಲಾಯಿತು’ ಎಂದು ಚಾಂದಿನಿದೇವಿ, ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಸಹೋದರ ಅಖಿಲೇಶಕುಮಾರ್‌ಗೆ ಅನುಕಂಪದ ಆಧಾರದ ಮೇಲೆ ಸಿಸಿಎಲ್‌ನಲ್ಲಿ ನೌಕರಿ ದೊರತಿದೆ’ ಎಂದೂ ಚಾಂದಿನಿ ದೇವಿ ತಿಳಿಸಿದ್ದಾರೆ.

‘ನನ್ನ ತಾಯಿ ಅನಾರೋಗ್ಯದಿಂದ ಬಳಲುತ್ತಿರುವ ಕಾರಣ, ಆಹಾರ, ಕುಡಿಯುವ ನೀರು, ಔಷಧ ಸೇರಿದಂತೆ ಎಲ್ಲ ವ್ಯವಸ್ಥೆ ಮಾಡಿಯೇ ಪ್ರಯಾಗರಾಜ್‌ಗೆ ತೆರಳಿದ್ದೇವೆ ಎಂದು ಅಖಿಲೇಶಕುಮಾರ್ ತಿಳಿಸಿದ್ದಾರೆ’ ಎಂದು ಮತ್ತೊಬ್ಬ ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಮಹಿಳೆಯರು ಸ್ನಾನ ಮಾಡುತ್ತಿರುವ ವಿಡಿಯೊ; ಪ್ರಕರಣ ದಾಖಲು (ಲಖನೌ ವರದಿ): ಮಹಾಕುಂಭ ನಡೆಯುತ್ತಿರುವ ಸ್ಥಳದಲ್ಲಿ ಮಹಿಳೆಯರು ಸ್ನಾನ ಮಾಡುತ್ತಿರುವುದು ಎನ್ನಲಾದ ವಿಡಿಯೊಗಳು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಸಾರವಾದ ನಂತರ, ಕೆಲವು ಸಾಮಾಜಿಕ ಜಾಲತಾಣ ಖಾತೆಗಳ ವಿರುದ್ಧ ಉತ್ತರ ಪ್ರದೇಶ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಈ ವಿಡಿಯೊಗಳನ್ನು ಹಣ ಪಡೆದು ವೀಕ್ಷಿಸಲು ನೀಡಲಾಗುತ್ತಿತ್ತು ಎನ್ನಲಾಗಿದೆ.

ಇನ್‌ಸ್ಟಾಗ್ರಾಂನ ಒಂದು ಖಾತೆ ಹಾಗೂ ಟೆಲಿಗ್ರಾಂನ ಒಂದು ಖಾತೆಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ–ದುಬೈ)

ಭಾರತ ತಂಡದ ಶುಭಾರಂಭ • ಹರ್ಷಿತ್ ರಾಣಾಗೆ ಮೂರು ವಿಕೆಟ್ • ಬಾಂಗ್ಲಾದ ತೌಹಿದ್ ಹೃದಯ್ ಶತಕ

ಶಮಿ ಬಿರುಗಾಳಿ ಗಿಲ್ ತಂಗಾಳಿ



ಶುಭಮನ್ ಗಿಲ್

ಔಟಾಗದೆ 101
ಎಸೆತ 129
ಬೌಂಡರಿ 9
ಸಿಕ್ಸರ್ 2

ದುಬೈ (ಪಿಟಿಐ): ವೇಗಿ ಮೊಹಮ್ಮದ್ ಶಮಿಯ ಪರಿಣಾಮಕಾರಿ ದಾಳಿ ಮತ್ತು ಶುಭಮನ್ ಗಿಲ್ ಅವರ ಅಜೇಯ ಶತಕದಿಂದ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಗುರುವಾರ ಇಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡದ ಎದುರು ರೋಹಿತ್ ಶರ್ಮಾ ಬಳಗವು 6 ವಿಕೆಟ್‌ಗಳಿಂದ ಜಯಿಸಿತು. ಬಾಂಗ್ಲಾ ತಂಡದ ಮಟ್ಟಿಗೆ ತೌಹೀದ್ ಹೃದಯ್ (100; 118ಎಸೆತ, 4X6, 6X2) ಶತಕವು ಸ್ಮರಣೀಯವಾಗುಳಿಯಿತು. ಟಾಸ್ ಗೆದ್ದ ಬಾಂಗ್ಲಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ಶಮಿ (53ಕ್ಕೆ5) ಮತ್ತು ಹರ್ಷಿತ್ ರಾಣಾ (31ಕ್ಕೆ3) ಅವರ ದಾಳಿಯಿಂದಾಗಿ ಬಾಂಗ್ಲಾ ಆರಂಭದಲ್ಲಿಯೇ ಪೆಟ್ಟು ತಿಂದಿತು. 35 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತು. ಈ ಹಂತದಲ್ಲಿ ಹೃದಯ್ ಮತ್ತು ಜಾಕೀರ್ ಅಲಿ (68; 114ಎ) ಅವರಿಬ್ಬರು 6ನೇ ವಿಕೆಟ್ ಜೊತೆಯಾಟದಲ್ಲಿ 154 ರನ್ ಸೇರಿಸಿ ತಂಡದ ಚೇತರಿಕೆಗೆ ಕಾರಣರಾದರು.

ಅದರಲ್ಲೂ ಹೃದಯ್ ಅವರ ಬ್ಯಾಟಿಂಗ್ ಆಕರ್ಷಕವಾಗಿತ್ತು. 9ನೇ ಓವರ್‌ನಲ್ಲಿ ಅಲಿ ಅವರ ಕ್ಯಾಚ್ ಅನ್ನು ಸ್ಲಿಪ್‌ನಲ್ಲಿ ರೋಹಿತ್ ಶರ್ಮಾ ಕೈಚೆಲ್ಲಿದರು. ಇದರಿಂದ ಅಕ್ಷರ್ ಪಟೇಲ್ ಅವರಿಗೆ ಹ್ಯಾಟ್ರಿಕ್ ವಿಕೆಟ್ ಅವಕಾಶ ಕೈತಪ್ಪಿತು. ಇದೇ ಓವರ್‌ನಲ್ಲಿ ತಂಜೀದ್ ಹಸನ್ (8.2ಓವರ್) ಮತ್ತು ಮುಷ್ಫಿಕುರ್ ರಹೀಮ್ (8.3) ಅವರ ವಿಕೆಟ್ ಪಡೆದಿದ್ದರು.

20ನೇ ಓವರ್‌ನಲ್ಲಿ ಹೃದಯ್ ಕ್ಯಾಚ್ ಅನ್ನು ಮಿಡ್ ಆಫ್ ಫೀಲ್ಡರ್ ಹಾರ್ದಿಕ್ ಪಾಂಡ್ಯ ನೆಲಕ್ಕೆ ಚೆಲ್ಲಿದರು. ಇದರಿಂದಾಗಿ ಅವರಿಬ್ಬರೂ ತಮ್ಮ ತಂಡವು 49.4 ಓವರ್‌ಗಳಲ್ಲಿ 228 ರನ್ ಗಳಿಸಲು ಕಾರಣರಾದರು. ಇದಕ್ಕುತ್ತರವಾಗಿ ಭಾರತ ತಂಡವು 46.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 231 ರನ್ ಗಳಿಸಿ ಗೆದ್ದಿತು.

ಶಮಿ ಅವರು ಕೊನೆಯ ಹಂತದ ಓವರ್‌ಗಳಲ್ಲಿ ಕೆಳ ಕ್ರಮಾಂಕದ ಬ್ಯಾಟರ್‌ಗಳು ಅಬ್ಬರಿಸದಂತೆ ನೋಡಿಕೊಂಡರು.

ಗಿಲ್ ಶತಕ: ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಶುಭಮನ್ ಗಿಲ್ ಮತ್ತು ನಾಯಕ ರೋಹಿತ್ ಶರ್ಮಾ ಅವರು ಅಮೋಘ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 69 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ರೋಹಿತ್ ಫ್ರಂಟ್‌ಫುಟ್ ಹೊಡೆತಗಳ ಮೂಲಕ ಬೌಲರ್‌ಗಳ ಮೇಲೆ ಒತ್ತಡ ಹಾಕಿದರು. ಗಿಲ್ ಬ್ಯಾಕ್‌ಫುಟ್ ಪಂಚ್ ಮತ್ತು ಫ್ಲಿಕ್‌ಗಳ ಮೂಲಕ ಲೆಗ್‌ಸ್ಟಂಪ್ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸಿದರು.

ಚೆಂದದ ಕವರ್‌ಡ್ರೈವ್ ಗಳನ್ನೂ ಪ್ರಯೋಗಿಸಿದ ಗಿಲ್ ಬೌಲರ್‌ಗಳ ಪಾಲಿಗೆ ಕಬ್ಬಿಣದ ಕಡಲೆಯಾದರು.

ಅರ್ಧಶತಕದತ್ತ ಸಾಗಿದ್ದ ರೋಹಿತ್ (41 ರನ್) ಅವರು ತಸ್ಕಿನ್ ಅಹಮದ್ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿ ರಿಷಾದ ಹುಸೇನ್‌ಗೆ ಕ್ಯಾಚ್ ಆದರು. ವಿರಾಟ್ ಕೊಹ್ಲಿ ತಾಳ್ಮೆಯ ಆಟದ ಮೂಲಕ ರನ್ ಗಳಿಸಿದರು. 38 ಎಸೆತಗಳಲ್ಲಿ 22 ರನ್ ಗಳಿಸಿದರು. ಒಂದು ಬೌಂಡರಿ ಹೊಡೆದು ಆಟಕ್ಕೆ ಕುದುರಿಕೊಳ್ಳುವ ಹೊತ್ತಿನಲ್ಲಿ ರಿಷಾದ್ ಹುಸೇನ್ ಎಸೆತದಲ್ಲಿ ಸೌಮ್ಯ ಸರ್ಕಾರ್‌ಗೆ ಕ್ಯಾಚ್ ಆದರು.

ಶ್ರೇಯಸ್ ಅಯ್ಯರ್ (17 ಎಸೆತಗಳಲ್ಲಿ 15) ಅವರು ವೇಗವಾಗಿ ರನ್ ಗಳಿಸುವ ಯತ್ನದಲ್ಲಿ ಔಟಾದರು. ಅಕ್ಷರ್ ಪಟೇಲ್ ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ. ಈ ಹಂತದಲ್ಲಿ ತಾಳ್ಮೆಯ ಮೊರೆ ಹೋದ ಗಿಲ್ ಇನಿಂಗ್ಸ್‌ಗೆ ಬಲ ತುಂಬುವ ಯತ್ನ ಮಾಡಿದರು. ಅವರೊಂದಿಗೆ ಸೇರಿಕೊಂಡ ಕೆ.ಎಲ್. ರಾಹುಲ್ (ಔಟಾಗದೇ 41) ಅವರಿಗೆ ಒಂದು 'ಜೀವದಾನ' ಲಭಿಸಿತು. ಇದರ ಪ್ರಯೋಜನ ಪಡೆದ ಇಬ್ಬರೂ ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 87 ರನ್ ಸೇರಿಸಿದರು. ತಂಡವನ್ನು ಗೆಲುವಿನ ದಡ ಸೇರಿಸಿದರು.



ವಿಕೆಟ್ ಪಡೆದ ಮೊಹಮ್ಮದ್ ಶಮಿ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಬಾಂಗ್ಲಾದೇಶ 228 (49.4 ಓವರ್‌ಗಳಲ್ಲಿ)
ತಂಜೀದ್ ಸಿ ರಾಹುಲ್ ಬಿ ಪಟೇಲ್ 25 (25ಎ, 4x4)
ಸರ್ಕಾರ್ ಸಿ ರಾಹುಲ್ ಬಿ ಶಮಿ 0 (5ಎ)
ಶಾಂತೊ ಸಿ ಕೊಹ್ಲಿ ಬಿ ರಾಣಾ 0 (2ಎ)
ಮಿರಾಜ್ ಸಿ ಗಿಲ್ ಬಿ ಶಮಿ 5 (10, 4x1)
ಹೃದಯ್ ಸಿ ಶಮಿ ಬಿ ರಾಣಾ 100 (118ಎ, 4x6, 6x2)
ಮುಷ್ಫಿಕುರ್ ಸಿ ರಾಹುಲ್ ಬಿ ಪಟೇಲ್ 0 (1ಎ)
ಜಕೀರ್ ಸಿ ಕೊಹ್ಲಿ ಬಿ ಶಮಿ 68 (114ಎ, 4x4)
ರಿಷದ್ ಸಿ ಪಾಂಡ್ಯ ಬಿ ರಾಣಾ 18 (12ಎ, 4x1, 6x2)
ತಂಜೀಮ್ ಬಿ ಶಮಿ 0 (4ಎ)
ತಸ್ಕಿನ್ ಸಿ ಅಯ್ಯರ್ ಬಿ ಶಮಿ 3 (6ಎ)
ಮುಸ್ತಫಿಜುರ್ ಔಟಾಗದೇ 0 (2ಎ)
ಇತರೆ: 9 (ಲೆಗ್‌ಬೈ 1, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1-1 (ಸೌಮ್ಯ ಸರ್ಕಾರ್, 0.6), 2-2 (ನಜ್ಮುಲ್ ಹುಸೇನ್ ಶಾಂತೊ, 1.4), 3-26 (ಮೆಹದಿ ಹಸನ್ ಮಿರಾಜ್, 6.2), 4-35 (ತಂಜೀದ್ ಹಸನ್, 8.2), 5-35 (ಮುಷ್ಫಿಕುರ್ ರಹೀಮ್, 8.3), 6-189 (ಜಕೀರ್ ಅಲಿ, 42.4), 7-214 (ರಿಷದ್ ಹುಸೇನ್, 45.3), 8-215 (ತಂಜೀಮ್ ಹಸನ್ ಸಕೀಬ್, 46.2), 9-228 (ತಸ್ಕಿನ್ ಅಹಮದ್, 48.4), 10-228 (ತೌಹಿದ್ ಹೃದಯ್, 49.4)
ಬೌಲಿಂಗ್: ಮೊಹಮ್ಮದ್ ಶಮಿ 10-0-53-5, ಹರ್ಷಿತ್ ರಾಣಾ 7.4-0-31-3, ಅಕ್ಷರ್ ಪಟೇಲ್ 9-1-43-2, ಹಾರ್ದಿಕ್ ಪಾಂಡ್ಯ 4-0-20-0, ರವೀಂದ್ರ ಜಡೇಜ 9-0-37-0, ಕುಲದೀಪ್ ಯಾದವ್ 10-0-43-0


ಭಾರತ: 4ಕ್ಕೆ 231 (46.3 ಓವರ್‌ಗಳಲ್ಲಿ)
ರೋಹಿತ್ ಸಿ ರಿಷದ್ ಬಿ ತಸ್ಕಿನ್ 41 (36ಎ, 4x7)
ಶುಭಮನ್ ಗಿಲ್ ಔಟಾಗದೇ 101 (129ಎ, 4x9, 6x2)
ವಿರಾಟ್ ಸಿ ಸೌಮ್ಯ ಬಿ ರಿಷದ್ 22 (38ಎ, 4x1)
ಶ್ರೇಯಸ್ ಸಿ ನಜ್ಮುಲ್ ಬಿ ಮುಸ್ತಫಿಜುರ್ 15 (17ಎ, 4x2)
ಅಕ್ಷರ್ ಸಿ ಮತ್ತು ಬಿ ರಿಷದ್ 8 (12ಎ, 4x1)
ಕೆ.ಎಲ್. ರಾಹುಲ್ ಔಟಾಗದೇ 41 (47ಎ, 4x1, 6x2)
ಇತರೆ: 3 (ವೈಡ್ 3)
ವಿಕೆಟ್ ಪತನ: 1-69 (ರೋಹಿತ್ ಶರ್ಮಾ, 9.5), 2-112 (ವಿರಾಟ್ ಕೊಹ್ಲಿ, 22.4), 3-133 (ಶ್ರೇಯಸ್ ಅಯ್ಯರ್, 27.4), 4-144 (ಅಕ್ಷರ್ ಪಟೇಲ್, 30.1)
ಬೌಲಿಂಗ್: ತಸ್ಕಿನ್ ಅಹಮದ್ 9-0-36-1, ಮುಸ್ತಫಿಜುರ್ ರಹಮಾನ್ 9-0-62-1, ತಂಜೀಮ್ ಹಸನ್ 8.3-0-58-0, ಮೆಹದಿ ಹಸನ್ 10-0-37-0, ರಿಷದ್ ಹುಸೇನ್ 10-0-38-2
ಪಂದ್ಯದ ಆಟಗಾರ: ಶುಭಮನ್ ಗಿಲ್

ಫಲಿತಾಂಶ: ಭಾರತಕ್ಕೆ 6 ವಿಕೆಟ್‌ಗಳ ಜಯ

ಪದಾರ್ಪಣೆಯಲ್ಲಿ ಅಫ್ಗನ್ ತಂಡಕ್ಕೆ ಗೆಲುವಿನ ಕನಸು



ರಶೀದ್ ಖಾನ್



ಬವುಮಾ

ಕರಾಚಿ (ಪಿಟಿಐ): ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಪದಾರ್ಪಣೆ ಮಾಡುತ್ತಿರುವ ಅಫ್ಗಾನಿಸ್ತಾನ ತಂಡವು ಶುಕ್ರವಾರ ನಡೆಯಲಿರುವ ಬಿ ಗುಂಪಿನ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಈ ಬಾರಿಯಾದರೂ ಪ್ರಶಸ್ತಿ ಗೆದ್ದು 'ಚೋಕರ್ಸ್' ಹಣೆಪಟ್ಟಿ ಕಳೆದುಕೊಳ್ಳುವ ಛಲದಲ್ಲಿ ದಕ್ಷಿಣ ಆಫ್ರಿಕಾ ತಂಡವಿದೆ. ಆದರೆ ಕಳೆದ ವಿಶ್ವಕಪ್ ಟೂರ್ನಿಗಳಲ್ಲಿ ಘಟಾನುಘಟಿಗಳಿಗೆ ಆಘಾತ ನೀಡಿರುವ ಅಫ್ಗನ್ ತಂಡವು ಇಲ್ಲಿ ಮತ್ತೊಮ್ಮೆ ತನ್ನ ಅಚ್ಚರಿಯ ಆಟ ತೋರಲು ಸಜ್ಜಾಗಿದೆ.

ದಕ್ಷಿಣ ಆಫ್ರಿಕಾ ತಂಡವು 1998ರಲ್ಲಿ ನಾಕೌಟ್ ಟ್ರೋಫಿ ಎಂಬ ಹೆಸರಿನಲ್ಲಿ ನಡೆದಿದ್ದ ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು. ಅದಾದ ನಂತರ ಹಲವು ಶ್ರೇಷ್ಠ ಕ್ರಿಕೆಟಿಗರನ್ನು ನೀಡಿರುವ ದಕ್ಷಿಣ ಆಫ್ರಿಕಾ ಇದುವರೆಗೆ ಮತ್ತೊಂದು ಐಸಿಸಿ ಟ್ರೋಫಿ ಜಯಿಸಲು ಸಾಧ್ಯವಾಗಿಲ್ಲ. ನಾಕೌಟ್ ಹಂತಗಳಲ್ಲಿ ಗೆಲುವಿನ ಸನಿಹದಲ್ಲಿ ಸೋತಿದ್ದೇ ಹೆಚ್ಚು.

ತೆಂಬಾ ಬವುಮಾ ನಾಯಕತ್ವದಲ್ಲಿ ಟೋನಿ ಡಿ ಜಾರ್ಜಿ, ರೆಸಿ ವ್ಯಾನ್ ಡೆರ್ ಡಸೆ, ಏಡನ್ ಮರ್ಕರಂ, ಹೆನ್ರಿಚ್ ಕ್ಲಾಸೆನ್, ಡೇವಿಡ್ ಮಿಲ್ಲರ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರು ಇರುವ ಬಳಗವು ಸಿದ್ಧವಾಗಿದೆ. ಎನ್ರಿಚ್ ನಾಕಿಯಾ, ನಾಂಡ್ರೆ ಬರ್ಗರ್ ಮತ್ತು ಗೆರಾಡ್ ಕೊಯ್ಟಜಿ ಅವರು ಗಾಯದಿಂದ ಹೊರಗುಳಿದಿದ್ದಾರೆ. ಇದರಿಂದಾಗಿ ವೇಗಿಗಳಾದ ಕಗಿಸೊ ರಬಾಡ, ಲುಂಗಿ ಗಿಡಿ, ಸ್ಪಿನ್ನರ್ ಕೇಶವ್ ಮಹಾರಾಜ್ ಮತ್ತು ತಬ್ರೇಜ್ ಶಮ್ಸಿ ಅವರ ಮೇಲೆ ಬೌಲಿಂಗ್ ವಿಭಾಗ ಅವಲಂಬಿತವಾಗಿದೆ.

ಈ ಗುಂಪಿನಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್ ತಂಡಗಳೂ ಇವೆ. ಆದರೆ, ಆಸ್ಟ್ರೇಲಿಯಾದಲ್ಲಿ ಗಾಯದಿಂದಾಗಿ ಪ್ರಮುಖ ಆಟಗಾರರು ಗೈರುಹಾಜರಾಗಿದ್ದಾರೆ. ಇಂಗ್ಲೆಂಡ್ ಆಟಗಾರರು ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ಇದರಿಂದಾಗಿ ಅಫ್ಗಾನಿಸ್ತಾನ ತಂಡವು ಸೆಮಿಫೈನಲ್ ಪ್ರವೇಶಿಸುವ ಛಲದಲ್ಲಿದೆ. ಹಸ್ಮತ್‌ಉಲ್ಲಾ ಶಹೀದಿ ನಾಯಕತ್ವದ ತಂಡಕ್ಕೆ ರಶೀದ್ ಖಾನ್, ಮೊಹಮ್ಮದ್ ನಬಿ, ಗುಲ್ಬದಿನ್ ನೈಬ್ ಅವರೇ ಪ್ರಮುಖ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಪಾಕ್‌ಗೆ ದಂಡ

ದುಬೈ (ಪಿಟಿಐ): ಕರಾಚಿಯ ನ್ಯಾಷನಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಚಾಂಪಿಯನ್ಸ್ ಟ್ರೋಫಿಯ ಆರಂಭಿಕ ಪಂದ್ಯದಲ್ಲಿ ನಿಗದಿತ ಸಮಯಮಿತಿಯಲ್ಲಿ ಓವರ್‌ಗಳನ್ನು ಪೂರೈಸದ ಕಾರಣ ಪಾಕಿಸ್ತಾನ ತಂಡಕ್ಕೆ ಪಂದ್ಯದ ಶುಲ್ಕದ ಶೇ 5ರಷ್ಟು ದಂಡವನ್ನು ಐಸಿಸಿ ವಿಧಿಸಿದೆ. ಪಾಕಿಸ್ತಾನ ತಂಡವು ಈ ಪಂದ್ಯದಲ್ಲಿ 60 ರನ್‌ಗಳಿಂದ ನ್ಯೂಜಿಲೆಂಡ್ ವಿರುದ್ಧ ಪರಾಭವಗೊಂಡಿತ್ತು.

ಪಾಕ್ ಭಾನುವಾರ ಭಾರತ ತಂಡವನ್ನು ಎದುರಿಸಲಿದೆ. ಈ ಪಂದ್ಯಕ್ಕೆ ಫಕಾರ್ ಜಮಾನ್ ಅಲಭ್ಯರಾಗಿದ್ದಾರೆ.

ಏ.27ರಂದು ಟಿಸಿಎಸ್ ವಿಶ್ವ 10ಕೆ ಓಟ

ಬೆಂಗಳೂರು: ಟಿಸಿಎಸ್ ವಿಶ್ವ 10ಕೆ ಬೆಂಗಳೂರು-2025 ಓಟ ಏಪ್ರಿಲ್ 27ರಂದು ಉದ್ಯಾನಗರಿನಲ್ಲಿ ನಡೆಯಲಿದೆ. 17ನೇ ಆವೃತ್ತಿಯ ಸ್ಪರ್ಧೆಯಲ್ಲಿ ಒಟ್ಟು ₹1,81 ಕೋಟಿ ಬಹುಮಾನ ಮೊತ್ತ ನಿಗದಿಪಡಿಸಲಾಗಿದೆ.

ಕಬ್ಬನ್ ರಸ್ತೆಯಿಂದ (ಆರ್‌ಎಸ್‌ಎಐ ಗೇಟ್ ನಂ.5 ಎದುರು) ಓಟಕ್ಕೆ ಚಾಲನೆ ಸಿಗಲಿದ್ದು, ಕಬ್ಬನ್ ರಸ್ತೆಯ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದ ಹೊರಭಾಗದಲ್ಲಿ ಕೊನೆಗೊಳ್ಳಲಿದೆ ಎಂದು ಟಿಸಿಎಸ್ ಬೆಂಗಳೂರಿನ ಪ್ರಾದೇಶಿಕ ಮುಖ್ಯಸ್ಥ ಸುನಿಲ್ ದೇಶಪಾಂಡೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಓಟದಲ್ಲಿ ವಿದೇಶದ ಅಥ್ಲೀಟ್‌ಗಳು, ದೇಶದ ಅಗ್ರ ಓಟಗಾರರು ಭಾಗವಹಿಸಲಿದ್ದಾರೆ. ಈ ಬಾರಿಯೂ ಓಪನ್ 10ಕೆ, ಮಜಾ ಓಟ (5.1ಕಿ.ಮೀ), ಹಿರಿಯ ನಾಗರಿಕರ ಓಟ, ಮತ್ತು ಚಾಂಪಿಯನ್ಸ್ (4.2 ಕಿ.ಮೀ) ಓಟಗಳು ನಡೆಯಲಿವೆ. ನೋಂದಣಿ ಪ್ರಕ್ರಿಯೆ ಇದೇ 20ರಂದು ಆರಂಭಗೊಂಡಿದ್ದು, ಮಾರ್ಚ್ 28ಕ್ಕೆ ಮುಕ್ತಾಯವಾಗಲಿದೆ. ನೋಂದಣಿಗೆ: https://tcsworld10k.procam.in/

ಬೆಂಗಳೂರು ಎಫ್‌ಸಿಗೆ ಇಂದು ನಾರ್ತ್‌ಈಸ್ಟ್ ಎದುರಾಳಿ

ಶಿಲ್ಲಾಂಗ್ (ಪಿಟಿಐ): ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡದ ಸವಾಲನ್ನು ಎದುರಿಸಲಿದೆ.

ಕಳೆದ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಸೋತು, ಒಂದು ಪಂದ್ಯ ಗೆದ್ದಿರುವ ಬೆಂಗಳೂರು ತಂಡವು ಗೆಲುವಿನ ಲಯಕ್ಕೆ ಮರಳುವ ಛಲದಲ್ಲಿದೆ. ಹ್ಯಾಟ್ರಿಕ್ ಸೋಲಿನ ನಂತರ ತವರಿನಲ್ಲಿ ನಡೆದ ಪಂದ್ಯದಲ್ಲಿ ಜೆಮ್‌ಶೆಡ್‌ಪುರ ವಿರುದ್ಧ 3-0ಯಿಂದ ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಪ್ರಸಕ್ತ ಋತುವಿನ ಪಂದ್ಯಗಳಲ್ಲಿ ಒಟ್ಟು 36 ಬಾರಿ ಚೆಂಡನ್ನು ಗುರಿ ಸೇರಿಸಿರುವ ಸುನಿಲ್ ಚೆಟ್ರಿ ಬಳಗವು, ಗೋಲು ಗಳಿಕೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಈ ಪೈಕಿ 11 ಗೋಲುಗಳು ಚೆಟ್ರಿ ಕಾಲ್ಚಳಕದಿಂದ ಬಂದಿದ್ದು, ಇದು ಐಎಸ್‌ಎಲ್ ಇತಿಹಾಸದಲ್ಲೇ ಎರಡನೇ ಗರಿಷ್ಠ ಸ್ಕೋರ್ ಆಗಿದೆ.

ಕಳೆದ ಐದು ಮುಖಾಮುಖಿಯಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ತಂಡವು ಬೆಂಗಳೂರು ಎಫ್‌ಸಿ ವಿರುದ್ಧ ಗೆಲುವು ಸಾಧಿಸಿಲ್ಲ. ಉಭಯ ತಂಡಗಳು ಸತತವಾಗಿ ಮೂರು ಪಂದ್ಯಗಳನ್ನು ಡ್ರಾ ಮಾಡಿಕೊಂಡಿವೆ.

20 ಪಂದ್ಯಗಳನ್ನು ಆಡಿರುವ ಬೆಂಗಳೂರು ತಂಡವು ಆರು ಪಂದ್ಯಗಳಲ್ಲಿ ಗೆದ್ದು, ನಾಲ್ಕರಲ್ಲಿ ಡ್ರಾ ಸಾಧಿಸಿದೆ. ಉಳಿದ ಏಳರಲ್ಲಿ ಸೋತು ಒಟ್ಟು 31 ಪಾಯಿಂಟ್ಸ್ ಗಳಿಸಿದೆ.

ನಾರ್ತ್‌ಈಸ್ಟ್ ತಂಡವು 21 ಪಂದ್ಯಗಳಿಂದ 32 ಅಂಕಗಳನ್ನು ಸಂಪಾದಿಸಿದೆ. ಎಂಟರಲ್ಲಿ ಗೆಲುವು ಸಾಧಿಸಿದ್ದರೆ, ಅಷ್ಟೇ ಪಂದ್ಯಗಳಲ್ಲಿ ಡ್ರಾ ಸಾಧಿಸಿ, ಐದರಲ್ಲಿ ಸೋಲು ಕಂಡಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಪೋರ್ಟ್ಸ್ 18



ಬಿಎಫ್‌ಸಿ ನಾಯಕ ಸುನಿಲ್ ಚೆಟ್ರಿ

ಬೆಂಗಳೂರಿನಲ್ಲಿ ಫ್ರ್ಯಾಂಚೈಸಿ ಕ್ರಿಕೆಟ್: ಆರ್‌ಸಿಬಿಗೆ ಮುಂಬೈ ಸವಾಲು

ಮಂದಾನ–ಹರ್ಮನ್ ಮುಖಾಮುಖಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನನಗರಿಯಲ್ಲಿ ಬಿಸಿಲು ಚುರುಕಾಗುತ್ತಿರುವ ಈ ಹೊತ್ತಿನಲ್ಲಿ ಫ್ರ್ಯಾಂಚೈಸಿ ಕ್ರಿಕೆಟ್ ಲಗ್ಗೆ ಇಟ್ಟಿದೆ. ಶುಕ್ರವಾರದಿಂದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯ ಎಂಟು ಪಂದ್ಯಗಳಿಗೆ ಚಿನ್ನಸ್ವಾಮಿ ಕ್ರೀಡಾಂಗಣ ಆತಿಥ್ಯ ವಹಿಸಲಿದೆ.

ಈ ಸಲದ ಟೂರ್ನಿಯ ಮೊದಲ ಸುತ್ತಿನ ಪಂದ್ಯಗಳು ವಡೋದರಾದಲ್ಲಿ ನಡೆದಿದ್ದವು. ಅಲ್ಲಿ ಆಡಿದ ಎರಡೂ ಪಂದ್ಯಗಳಲ್ಲಿ ಗೆದ್ದಿರುವ ಸ್ಮೃತಿ ಮಂದಾನ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತವರಿನಂಗಳದಲ್ಲಿ ಕಣಕ್ಕಿಳಿಯಲಿದೆ.

ಹೋದ ವರ್ಷ ಚಾಂಪಿಯನ್ ಆದ ನಂತರ ಸ್ಮೃತಿ ಬಳಗವು ಇದೇ ಮೊದಲ ಸಲ ತವರಿನಲ್ಲಿ ಆಡಲಿದೆ. ಪ್ರಸ್ತುತ ಟೂರ್ನಿಯಲ್ಲಿ 'ಹ್ಯಾಟ್ರಿಕ್' ಜಯ ಸಾಧಿಸುವ ಕನಸು ಕಾಣುತ್ತಿದೆ. ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ತಂಡವನ್ನು ಬೆಂಗಳೂರು ಎದುರಿಸಲಿದೆ.

ಆರ್‌ಸಿಬಿಯು ಟೂರ್ನಿಯ ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಎದುರು 201 ರನ್ ಮತ್ತು ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು 141 ರನ್ ಗುರಿಯನ್ನು ಸರಾಗವಾಗಿ ಸಾಧಿಸಿ ಜಯದ ಸಂಭ್ರಮ ಆಚರಿಸಿತ್ತು. ನಾಯಕಿ ಸ್ಮೃತಿ ಮಂದಾನ, ರಿಚಾ ಘೋಷ್ ಹಾಗೂ ಎಲೀಸ್ ಪೆರಿ ಅವರು ತಲಾ ಒಂದು ಅರ್ಧಶತಕ ಹೊಡೆದು ಉತ್ತಮ ಲಯದಲ್ಲಿದ್ದಾರೆ. ತಂಡದ ಮಧ್ಯಮವೇಗಿ ರೇಣುಕಾ ಸಿಂಗ್, ಕಿಮ್ ಗಾರ್ಥ್ ಮತ್ತು ಪ್ರೇಮಾ ರಾವತ್ ಅವರ ಮುಂದೆ ಮುಂಬೈನ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇದೆ.



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಅವರು ಗುರುವಾರ ತಾಲೀಮು ನಡೆಸಿದರು –ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಹೋದ ವರ್ಷದ ಡಬ್ಲ್ಯುಪಿಎಲ್‌ನಲ್ಲಿ ಗಮನ ಸೆಳೆದಿದ್ದ ಸ್ಥಳೀಯ ಆಟಗಾರ್ತಿ ಶ್ರೇಯಾಂಕಾ ಪಾಟೀಲ ಅವರು ಈ ಬಾರಿ ಗಾಯದಿಂದಾಗಿ ಆಡುತ್ತಿಲ್ಲ.

ಮಹಿಳಾ ಪ್ರೀಮಿಯರ್ ಲೀಗ್

ಮುಂಬೈ ತಂಡವು ಕಳೆದೆರಡು ಪಂದ್ಯಗಳಲ್ಲಿ ಒಂದು ಗೆದ್ದು, ಇನ್ನೊಂದರಲ್ಲಿ ಸೋತಿದೆ. ಗುಜರಾತ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಮುಂಬೈ ತಂಡದ ಹೆಲಿ ಮ್ಯಾಥ್ಯೂಸ್ ಮತ್ತು ನ್ಯಾಟ್ ಶಿವರ್ ಬ್ರಂಟ್ ಅವರು ಉತ್ತಮ ಬೌಲಿಂಗ್ ಮಾಡಿದ್ದರು.

ಅದರಿಂದಾಗಿ ಎದುರಾಳಿ ತಂಡವು ಸಾಧಾರಣ ಮೊತ್ತ ಗಳಿಸಿತ್ತು.

ಅಮೇಲಿಯಾ ಕೆರ್, ಸಜೀವನ್ ಸಜನಾ ಮತ್ತು ಈಚೆಗೆ 19 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದಲ್ಲಿ ಆಡಿದ್ದ ಜಿ. ಕಮಲಿನಿ ಅವರು ಮುಂಬೈ ತಂಡದ ಶಕ್ತಿಯಾಗಿದ್ದಾರೆ. ನಾಯಕಿ ಕೌರ್ ಅವರು ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಂಡರೆ ಮಧ್ಯಮ ಕ್ರಮಾಂಕವು ಬಲಾಢ್ಯವಾಗುವುದರಲ್ಲಿ ಅನುಮಾನವಿಲ್ಲ.

ವಡೋದರಾದಲ್ಲಿ ನಡೆದಿದ್ದ 6 ಪಂದ್ಯಗಳಲ್ಲಿಯೂ ಗುರಿ ಬೆನ್ನಟ್ಟಿದ ತಂಡಗಳು ಜಯಿಸಿರುವುದು ವಿಶೇಷ. ವಡೋದರಾದಲ್ಲಿ ರಾತ್ರಿ ಹೊತ್ತಿನಲ್ಲಿ ಇಬ್ಬನಿ ಇರುತ್ತಿದ್ದ ಕಾರಣ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಬೌಲಿಂಗ್ ಮಾಡುವುದು ಸವಾಲಾಗಿತ್ತು. ಆದ್ದರಿಂದ ಟಾಸ್ ಗೆದ್ದವರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದೇ ಹೆಚ್ಚು.

ಬೆಂಗಳೂರಿನಲ್ಲಿ ಇದೇ ರೀತಿಯ ಫಲಿತಾಂಶಗಳು ಹೊರಹೊಮ್ಮಲಿವೆಯೇ ಎಂಬ ಕುತೂಹಲ ಈಗ ಗರಿಗೆದರಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹರ್ಮನ್ ಬಳಗಕ್ಕೆ ಐರ್ಲೆಂಡ್ ಸವಾಲು

ಭುವನೇಶ್ವರ (ಪಿಟಿಐ): ಪೆನಾಲ್ಟಿ ಕಾರ್ನರ್‌ನಲ್ಲಿ ಪದೇ ಪದೇ ಎಡವುತ್ತಿರುವ ಭಾರತ ಪುರುಷರ ತಂಡವು ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ ಐರ್ಲೆಂಡ್ ತಂಡದ ಸವಾಲನ್ನು ಎದುರಿಸಲಿದೆ.

ಪ್ಯಾರಿಸ್ ಒಲಿಂಪಿಕ್ಸ್ ಕಂಚು ವಿಜೇತ ಭಾರತ ತಂಡವು ಆಡಿರುವ ನಾಲ್ಕು ಪಂದ್ಯಗಳ ಪೈಕಿ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. ಸ್ಪೇನ್ ಮತ್ತು ಜರ್ಮನಿ ವಿರುದ್ಧ ಮೊದಲ ಲೆಗ್‌ನ ಪಂದ್ಯಗಳಲ್ಲಿ ಸೋತು, ರಿವರ್ಸ್ ಲೆಗ್‌ನಲ್ಲಿ ಗೆಲುವು ಸಾಧಿಸಿದೆ.

ನಾಲ್ಕು ಪಂದ್ಯಗಳಲ್ಲಿ ಒಟ್ಟು 14 ಪೆನಾಲ್ಟಿ ಕಾರ್ನರ್ ಅವಕಾಶಗಳು ಭಾರತ ತಂಡಕ್ಕೆ ಒದಗಿತ್ತು. ಆದರೆ, ಒಂದೂ ಬಾರಿಯೂ ಚೆಂಡನ್ನು ಗುರಿ ಸೇರಿಸಲು ಸಾಧ್ಯವಾಗಲಿಲ್ಲ.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಐದನೇ ಸ್ಥಾನದಲ್ಲಿರುವ ಹರ್ಮನ್‌ಪ್ರೀತ್ ಸಿಂಗ್ ಬಳಗವು ಇದೀಗ ತಮಗಿಂತ ಐದು ಸ್ಥಾನ ಕೆಳಗಿರುವ ಐರ್ಲೆಂಡ್ ವಿರುದ್ಧ ಕಣಕ್ಕೆ ಇಳಿಯಲಿದೆ.

ವನಿತೆಯರಿಗೆ ಜರ್ಮನಿ ಸವಾಲು: ಭಾರತ ಮಹಿಳೆಯರು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ ಜರ್ಮನಿ ತಂಡದ ವಿರುದ್ಧ ಸೆಣಸಲಿದ್ದಾರೆ.

ಸಲಿಮಾ ಟೆಟೆ ಬಳಗವು ಇಂಗ್ಲೆಂಡ್ ವಿರುದ್ಧ ಶುಭಾರಂಭ ಮಾಡಿ ನಂತರ ಹ್ಯಾಟ್ರಿಕ್ ಸೋಲು ಅನುಭವಿಸಿತ್ತು. ಇದೀಗ ಗೆಲುವಿನ ಹಳಿಗೆ ಮರಳಲು ಪ್ರಯತ್ನಿಸುತ್ತಿದೆ. ಅಂಕ ಪಟ್ಟಿಯಲ್ಲಿ ಭಾರತ (4) ಎಂಟನೇ ಸ್ಥಾನದಲ್ಲಿದ್ದರೆ, ಜರ್ಮನಿ (3) ಒಂಬತ್ತನೇ ಸ್ಥಾನದಲ್ಲಿದೆ.

ಇಂದಿನ ಪಂದ್ಯ

ಮಹಿಳೆಯರ ವಿಭಾಗ
ಭಾರತ Vs ಜರ್ಮನಿ — ಪಂದ್ಯ ಆರಂಭ ಸಂಜೆ 5.15

ಪುರುಷರ ವಿಭಾಗ
ಭಾರತ Vs ಐರ್ಲೆಂಡ್ — ಪಂದ್ಯ ಆರಂಭ ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಡಿ ಸ್ಪೋರ್ಟ್ಸ್

ರಣಜಿ ಟ್ರೋಫಿ: ಮುಂಬೈಗೆ ಸೋಲಿನ ಭೀತಿ

ನಾಗಪುರ(ಪಿಟಿಐ): ರಣಜಿ ಟ್ರೋಫಿ ಕ್ರಿಕೆಟ್ ಇತಿಹಾಸದಲ್ಲಿ 42 ಬಾರಿ ಚಾಂಪಿಯನ್ ಆಗಿರುವ ಮುಂಬೈ ತಂಡವು ಈ ಬಾರಿ ಸೆಮಿಫೈನಲ್ ಹಂತ ದಲ್ಲಿಯೇ ಸೋತು ಹೊರಬೀಳುವ ಆತಂಕದಲ್ಲಿದೆ.

ವಿದರ್ಭ ಕ್ರಿಕೆಟ್ ಸಂಸ್ಥೆ (ವಿಸಿಎ) ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನಾಲ್ಕರ ಘಟ್ಟದ ಪಂದ್ಯದ ನಾಲ್ಕನೇ ದಿನವಾದ ಗುರುವಾರ ವಿದರ್ಭ ತಂಡವು ಒಡ್ಡಿರುವ 406 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಮುಂಬೈ 83 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದೆ. ಉಳಿದಿರುವ ಕೊನೆಯ ದಿನದಾಟದಲ್ಲಿ ಗೆಲ್ಲಲು 323 ರನ್‌ಗಳನ್ನು ಗಳಿಸಬೇಕಿದೆ. ಒಂದೊಮ್ಮೆ ಡ್ರಾ ಮಾಡಿಕೊಂಡರೂ ವಿದರ್ಭ ತಂಡವು ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಫೈನಲ್ ಪ್ರವೇಶಿಸಲಿದೆ. ಪ್ರಥಮ ಇನಿಂಗ್ಸ್‌ನಲ್ಲಿ ವಿದರ್ಭ ತಂಡವು 113 ರನ್ ಮುನ್ನಡೆ ಸಾಧಿಸಿತ್ತು.

ಎರಡನೇ ಇನಿಂಗ್ಸ್‌ನಲ್ಲಿ ಯಶ್ ರಾಥೋಡ್ (151; 252ಎ, 4X11) ಅವರ ಅಮೋಘ ಶತಕ ಮತ್ತು ನಾಯಕ ಅಕ್ಷಯ್ ವಾಡಕರ್ (52; 202ಎ, 4X5) ಅವರ ಅರ್ಧಶತಕದಿಂದಾಗಿ ವಿದರ್ಭ 292 ರನ್ ಗಳಿಸಿತು.

ಬೃಹತ್ ಗುರಿ ಬೆನ್ನಟ್ಟಿದ ಮುಂಬೈ ತಂಡದ ಬ್ಯಾಟರ್ ಗಳಾದ ಆಯುಷ್ ಮಾತ್ರೆ (18 ರನ್), ಸಿದ್ಧೇಶ್ ಲಾಡ್ (2 ರನ್) ಮತ್ತು ನಾಯಕ ಅಜಿಂಕ್ಯ ರಹಾನೆ (12 ರನ್) ಅವರು ಸ್ಪಿನ್ ಬೌಲಿಂಗ್ ಮುಂದೆ ಮಂಡಿಯೂರಿದರು. ಇದರಿಂದಾಗಿ ಮುಂಬೈ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟು ಬಿತ್ತು. ಆದರೆ ಮೊದಲ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದ್ದ ಆಕಾಶ್ ಆನಂದ್ (ಬ್ಯಾಟಿಂಗ್ 27) ಮತ್ತು ಶಿವಂ ದುಬೆ (ಬ್ಯಾಟಿಂಗ್ 12) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 107.5 ಓವರ್‌ಗಳಲ್ಲಿ 383. ಮುಂಬೈ: 92 ಓವರ್‌ಗಳಲ್ಲಿ 270. ಎರಡನೇ ಇನಿಂಗ್ಸ್: ವಿದರ್ಭ: 110.1 ಓವರ್‌ಗಳಲ್ಲಿ 292 (ಯಶ್ ರಾಥೋಡ್ 151, ಅಕ್ಷಯ್ ವಾಡಕರ್ 52, ಪಾರ್ಥ್ ರೇಖಡೆ 20, ಶಮ್ಸ್ ಮುಲಾನಿ 85ಕ್ಕೆ6, ತನುಷ್ ಕೋಟ್ಯಾನ್ 81ಕ್ಕೆ3) ಮುಂಬೈ: 31 ಓವರ್‌ಗಳಲ್ಲಿ 3ಕ್ಕೆ83 (ಆಕಾಶ್ ಆನಂದ್ ಬ್ಯಾಟಿಂಗ್ 27, ಶಿವಂ ದುಬೆ ಬ್ಯಾಟಿಂಗ್ 12, ಹರ್ಷ ದುಬೆ 26ಕ್ಕೆ2)

ರೋಚಕ ಘಟ್ಟದಲ್ಲಿ ಗುಜರಾತ್–ಕೇರಳ ಪಂದ್ಯ

ಅಹಮದಾಬಾದ್ (ಪಿಟಿಐ): ಗುಜರಾತ್ ತಂಡ ಶುಕ್ರವಾರ 28 ರನ್ ಗಳಿಸುವ ಮುನ್ನವೇ ಕೇರಳದ ಬೌಲರ್‌ಗಳು 3 ವಿಕೆಟ್‌ಗಳನ್ನು ಕಬಳಿಸಿದರೆ ಫೈನಲ್ ಪ್ರವೇಶ ಗಿಟ್ಟಿಸಲಿದ್ದಾರೆ.

ಹೌದು; ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಟೂರ್ನಿಯ ಸೆಮಿಫೈನಲ್ ಪಂದ್ಯದ ನಾಲ್ಕನೇ ದಿನವಾದ ಗುರುವಾರದ ಅಂತ್ಯಕ್ಕೆ ಉಳಿದ ಕುತೂಹಲದ ಸಂಗತಿ ಇದು. ಈ ಪಂದ್ಯವು ಡ್ರಾ ಆಗುವುದು ಖಚಿತ. ಆದರೆ, ಮೊದಲ ಇನಿಂಗ್ಸ್ ಮುನ್ನಡೆ ಪಡೆಯುವ ತಂಡವು ಪ್ರಶಸ್ತಿ ಸುತ್ತಿಗೆ ತೆರಳುವುದು.

ಕೇರಳ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿರುವ 457 ರನ್‌ಗಳಿಗೆ ಉತ್ತರವಾಗಿ ಗುಜರಾತ್ ಎರಡು ದಿನ ಬ್ಯಾಟಿಂಗ್ ಮಾಡಿದೆ. ನಾಲ್ಕನೇ ದಿನದಾಟದ ಅಂತ್ಯಕ್ಕೆ 154 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 429 ರನ್ ಗಳಿಸಿದೆ. ಆರನೇ ಕ್ರಮಾಂಕದ ಬ್ಯಾಟರ್ ಜಯಮೀತ್ ಪಟೇಲ್ (ಬ್ಯಾಟಿಂಗ್ 74; 161) ಅವರ ಅರ್ಧಶತಕದಿಂದಾಗಿ ಗುಜರಾತ್ ತಂಡದ ಫೈನಲ್ ಪ್ರವೇಶದ ಅವಕಾಶ ಇನ್ನೂ ಜೀವಂತವಾಗಿದೆ.

ಆರಂಭಿಕ ಬ್ಯಾಟರ್ ಪ್ರಿಯಾಂಕ್ ಪಾಂಚಾಲ್ ಶತಕ (148; 237ಎ, 4X18, 6X1) ಮತ್ತು ಆರ್ಯಾ ದೇಸಾಯಿ (73; 118ಎ, 4X11, 6X1) ಮೊದಲ ವಿಕೆಟ್ ಜೊತೆಯಾಟದಲ್ಲಿ 131 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿದರು. ಆದರೆ ಮಧ್ಯಮ ಹಂತದ ಬ್ಯಾಟರ್‌ಗಳು ದೀರ್ಘ ಇನಿಂಗ್ಸ್ ಆಡಲಿಲ್ಲ. ಆದರೆ ಇದರ ಕೊರತೆಯನ್ನು ಪಟೇಲ್ ನೀಗಿಸಿದರು. ಅವರ ಆಟದಲ್ಲಿ ಕೇವಲ 2 ಬೌಂಡರಿ ಗಳಿದ್ದವು. ಅವರಿಗೆ ಸಿದ್ಧಾರ್ಥ್ ದೇಸಾಯಿ (ಬ್ಯಾಟಿಂಗ್ 24; 134ಎ) ಉತ್ತಮ ಜೊತೆ ನೀಡಿದರು. ಶುಕ್ರವಾರ ಬೆಳಿಗ್ಗೆ ಇವರಿಬ್ಬರ ಮೇಲೆ ತಂಡವನ್ನು ಮುನ್ನಡೆಯತ್ತ ಕೊಂಡೊಯ್ಯುವ ಒತ್ತಡ ಹೆಚ್ಚಿದೆ. ಕೇರಳದ ಬೌಲಿಂಗ್ ಪಡೆಯು ಬೆಳಗಿನ ವಾತಾವರಣದಲ್ಲಿ ಗುಜರಾತ್ ಆಸೆಗೆ ತಣ್ಣೀರೆರಚುವ ಛಲದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 457. ಗುಜರಾತ್: 154 ಓವರ್‌ಗಳಲ್ಲಿ 7ಕ್ಕೆ 429 (ಪ್ರಿಯಾಂಕ್ ಪಾಂಚಾಲ್ 148, ಜಯಮೀತ್ ಪಟೇಲ್ ಬ್ಯಾಟಿಂಗ್ 74, ಆರ್ಯಾ ದೇಸಾಯಿ 73, ಸಿದ್ಧಾರ್ಥ್ ದೇಸಾಯಿ ಬ್ಯಾಟಿಂಗ್ 24, ಜಲಜ್ ಸಕ್ಸೆನಾ 137ಕ್ಕೆ4)

ಕೆಎಸ್‌ಸಿಎ ಸ್ಟ್ಯಾಂಡ್‌ಗಳಿಗೆ ದಿಗ್ಗಜರ ನಾಮಫಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ಕರ್ನಾಟಕದ ಕ್ರಿಕೆಟ್ ದಿಗ್ಗಜರ ಹೆಸರುಗಳ ಫಲಕಗಳನ್ನು ಅಳವಡಿಸಲಾಗಿದೆ.

ಈಚೆಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಸರ್ವಸದಸ್ಯರ ಸಭೆಯಲ್ಲಿ ಹತ್ತು ಜನ ದಿಗ್ಗಜರ ಹೆಸರುಗಳನ್ನು ಕ್ರೀಡಾಂಗಣದ ಬೇರೆಬೇರೆ ಸ್ಟ್ಯಾಂಡ್‌ಗಳಿಗೆ ನಾಮಕರಣ ಮಾಡಲು ನಿರ್ಧಾರ ಕೈಗೊಳ್ಳಲಾಗಿತ್ತು. ಇದೀಗ ಕೆಎಸ್‌ಸಿಎ ಆಡಳಿತವು ಆಯಾ ಸ್ಟ್ಯಾಂಡ್‌ಗಳಿಗೆ ನಾಮಫಲಕಗಳನ್ನು ಅಳವಡಿಸಿದೆ.

ಎರಪಳ್ಳಿ ಪ್ರಸನ್ನ (ಪಿ1 ಸ್ಟ್ಯಾಂಡ್), ಜಿ.ಆರ್. ವಿಶ್ವನಾಥ್ (ಪಿ2 ಸ್ಟ್ಯಾಂಡ್), ಬಿ.ಎಸ್. ಚಂದ್ರಶೇಖರ್ (ಪಿ ಟೆರೇಸ್), ಸೈಯದ್ ಕಿರ್ಮಾನಿ (ಪಿ ಕಾರ್ಪೋರೆಟ್), ಬ್ರಿಜೇಶ್ ಪಟೇಲ್ (ಎಂ1 ಸ್ಟ್ಯಾಂಡ್), ರೋಜರ್ ಬಿನ್ನಿ (ಎಂ2 ಸ್ಟ್ಯಾಂಡ್), ಅನಿಲ್ ಕುಂಬ್ಳೆ (ಡೈಮಂಡ್ ಬಾಕ್ಸ್), ರಾಹುಲ್ ದ್ರಾವಿಡ್ (ಎನ್ ಸ್ಟ್ಯಾಂಡ್), ಜಾವಗಲ್ ಶ್ರೀನಾಥ್ (ಪಿ1 ಎ ಸ್ಟ್ಯಾಂಡ್) ಮತ್ತು ವೆಂಕಟೇಶ್ ಪ್ರಸಾದ್ (ಪಿ4 ಸ್ಟ್ಯಾಂಡ್) ಅವರ ಹೆಸರುಗಳ ಫಲಕಗಳನ್ನು ಅಳವಡಿಸಲಾಗಿದೆ.

ಕರ್ನಾಟಕ ತಂಡವು 1974ರಲ್ಲಿ ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿತ್ತು. ಹೋದ ವರ್ಷ ಈ ಜಯದ ಸುವರ್ಣ ಮಹೋತ್ಸವ ಆಚರಿಸಲಾಗಿತ್ತು. ಪ್ರಶಸ್ತಿ ಗೆದ್ದ ತಂಡದ ನಾಯಕರಾಗಿದ್ದ ಪ್ರಸನ್ನ, ಸ್ಪಿನ್ನರ್ ಬಿ.ಎಸ್. ಚಂದ್ರಶೇಖರ್, ವಿಕೆಟ್‌ಕೀಪರ್ ಸೈಯದ್ ಕಿರ್ಮಾನಿ ಮತ್ತು ಬ್ಯಾಟರ್ ಜಿ.ಆರ್. ವಿಶ್ವನಾಥ್, ಬ್ರಿಜೇಶ್ ಪಟೇಲ್ ಅವರ ಹೆಸರುಗಳನ್ನು ಸುವರ್ಣ ಸಂಭ್ರಮದ ಸಂದರ್ಭದಲ್ಲಿ ಸ್ಟ್ಯಾಂಡ್‌ಗಳಿಗೆ ಇಡಬೇಕು ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ದಿಗ್ಗಜರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡುವ ಮೂಲಕ ಗೌರವ ಸಲ್ಲಿಸಬೇಕು ಎಂದು ಸಿದ್ದರಾಮಯ್ಯ ಅವರು ಕೆಎಸ್‌ಸಿಎ ಅಧ್ಯಕ್ಷರಿಗೆ ಪತ್ರ ಬರೆದಿದ್ದರು.

'ಬುಧವಾರ ನಾಮಫಲಕಗಳನ್ನು ಅಳವಡಿಸಲಾಗಿದೆ' ಎಂದು ಕೆಎಸ್‌ಸಿಎ ಮೂಲಗಳು ತಿಳಿಸಿವೆ.

ಈಡೇರದ ಬೇಡಿಕೆ: ಮಹಿಳಾ ಕ್ರಿಕೆಟ್ ದಂತಕಥೆ ಶಾಂತಾ ರಂಗಸ್ವಾಮಿ ಅವರ ಹೆಸರನ್ನೂ ಸ್ಟ್ಯಾಂಡ್‌ಗೆ ಇಡಬೇಕು ಎಂದು ಹಲವು ಮಹಿಳಾ ಕ್ರಿಕೆಟಿಗರು ಒತ್ತಾಯಿಸಿದ್ದರು. ಸರ್ವಸದಸ್ಯರ ಸಭೆಯಲ್ಲಿಯೂ ಈ ಕುರಿತು ಆಗ್ರಹಿಸಿದ್ದರು. ಆದರೆ, ಅವರ ಬೇಡಿಕೆ ಈಡೇರಿಲ್ಲ.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಡೈಮಂಡ್ ಬಾಕ್ಸ್‌ಗೆ ಅನಿಲ್ ಕುಂಬ್ಳೆ ಹೆಸರು ಇಡಲಾಗಿದೆ

ಬೆಂಗಳೂರು ಓಪನ್ ಟೆನಿಸ್: ಪ್ರಜ್ವಲ್‌ಗೆ ವೈಲ್ಡ್‌ಕಾರ್ಡ್

ಬೆಂಗಳೂರು: ಮೈಸೂರಿನ ಎಸ್. ಡಿ. ಪ್ರಜ್ವಲ್ ದೇವ್ ಇದೇ 24ರಂದು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಕೋರ್ಟ್‌ನಲ್ಲಿ ಆರಂಭವಾಗುವ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ 125 ಟೆನಿಸ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.

28 ವರ್ಷ ವಯಸ್ಸಿನ ಪ್ರಜ್ವಲ್ ಅವರೊಂದಿಗೆ ರಾಮಕುಮಾರ್ ರಾಮನಾಥನ್ ಮತ್ತು ಯುವ ಆಟಗಾರ ಮಾನಸ್ ಧಾಮ್ನೆ ಅವರೂ ಸಿಂಗಲ್ಸ್ ಮುಖ್ಯಸುತ್ತಿಗೆ ವೈಲ್ಡ್‌ಕಾರ್ಡ್ ಪಡೆದಿದ್ದಾರೆ. ಕ್ರಿಶ್ ತ್ಯಾಗಿ ಮತ್ತು ನಿಕಿ ಪೂಣಚ್ಚ ಅವರು ವೈಲ್ಡ್ ಕಾರ್ಡ್‌ಗಳಾಗಿ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸಲಿದ್ದು, ಮುಖ್ಯ ಡ್ರಾದಲ್ಲಿ ಸ್ಥಾನ ಭದ್ರಪಡಿಸಿಕೊಳ್ಳುವ ನಿರೀಕ್ಷೆಯಲ್ಲಿದ್ದಾರೆ.

ಡಬಲ್ಸ್‌ನಲ್ಲಿ ಒಟ್ಟು 16 ತಂಡಗಳು ಕಣಕ್ಕೆ ಇಳಿಯಲಿವೆ. 10 ಜೋಡಿಗಳು ನೇರ ಪ್ರವೇಶ ಪಡೆಯಲಿದ್ದು, ಎರಡು ತಂಡಗಳಿಗೆ ವೈಲ್ಡ್ ಕಾರ್ಡ್ ಸಿಗಲಿದೆ.

ಅಗ್ನಿಪುತ್ರ ತಂಡ ಚಾಂಪಿಯನ್

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಕಿಕ್‌ಸ್ಟಾರ್ಟ್ ಎಫ್‌ಸಿ ತಂಡ ರನ್ನರ್ ಅಪ್ ಆಯಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಅಗ್ನಿಪುತ್ರ 3-0 ಗೋಲುಗಳಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು. ಮತ್ತೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡವು 2-2 ಗೋಲುಗಳಿಂದ ಕಿಕ್‌ಸ್ಟಾರ್ಟ್ ತಂಡದೊಂದಿಗೆ ಡ್ರಾ ಸಾಧಿಸಿತು.